
ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಹಿರಿಯ ರೈತ ನಾಯಕ ಇನ್ನಿಲ್ಲ

ಕಾ. ಪ್ರಬೋಧ ಪಾಂಡ

ಸಂಪುಟ 12 | ಸಂಚಿಕೆ 10 | ಮಾರ್ಚ್ 5–11, 2018 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com

ಸಮೃದ್ಧ ಸಮಗ್ರ ಸೌಹಾರ್ದ ಕರ್ನಾಟಕ ಪ್ರಣಾಳಿಕೆ ಜಾರಿ ಮಾಡ್ತೀರಾ ?





ತೊಗರಿ ಬೆಳೆಗೆ ಉಪವಾಸ ಸತ್ಯಾಗ್ರಹ

ದಲಿತ ಉಪಯೋಜನೆ ಅನುಷ್ಠಾನ ಹೇಗಿದೆ?





ಪಾಕಿಸ್ತಾನ : ಮಾತುಕತೆ ಆರಂಭಿಸಬೇಕು

ಮಾರ್ಚ್ 15 : ಕಾರ್ಮಿಕ ಪ್ರತಿಭಟನಾ ದಿನಾಚರಣೆ

ಯೋಗಿ ರಾಜ್ಯದಲ್ಲಿ ದಲಿತ ಬಾಲಕಿ ಹಸಿವು ಆತ್ಮಹತ್ಯೆ

ಮಾರ್ಚ್ 15: ಕಾರ್ಮಿಕ ಸಂಘಟನೆಗಳಿಂದ ಅಖಿಲ ಭಾರತ ಪ್ರತಿಭಟನಾ ದಿನಾಚರಣೆ

ನವದೆಹಲಿಯಲ್ಲಿ ಫೆಬ್ರುವರಿ 22ರಂದು ಸಭೆ ಸೇರಿದ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮುಂದಿನ ದಿನಗಳಲ್ಲಿ ಒಂದು ಅನಿರ್ದಿಷ್ಟ ಕಾಲದ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಲೇ ಈ ಮಾರ್ಚ್ 15ರಂದು ಅಖಿಲ ಭಾರತ ಪ್ರತಿಭಟನಾ ದಿನಾಚರಣೆ ನಡೆಸಬೇಕು ಎಂದು ತಮ್ಮ ಎಲ್ಲ ಘಟಕಗಳಿಗೆ ಮತ್ತು ಇಡಿಯಾಗಿ ದುಡಿಯುವ ಜನತೆಗೆ ಕರೆ ನೀಡಿವೆ.

ಖಾಸಗೀಕರಣದ ವಿರುದ್ಧ ಹೋರಾಡುತ್ತಿರುವ ಕಾರ್ಮಿಕರೊಂದಿಗೆ ಸೌಹಾರ್ದ ಮತ್ತು 2018–19ರ ಜನ–ವಿರೋಧಿ ವಂಚಕ ಬಜೆಟ್ ವಿರುದ್ಧ ಈ ಪ್ರತಿಭಟನಾ ಕಾರ್ಯಾಚರಣೆ ನಡೆಯುತ್ತದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿವೆ.

ಕಾಂಟ್ರಾಕ್ಟ್ ದುಡಿಮೆ ಕಾಯ್ದೆಯ ತಿದ್ದುಪಡಿ, ನಿಗದಿತ ಅವಧಿಯ ಉದ್ಯೋಗ ಎಂಬುದನ್ನು ಆರಂಭಿಸುವುದು ಇತ್ಯಾದಿ ದಾರಿಗಳಲ್ಲಿ ಕಾರ್ಮಿಕ ವರ್ಗದ ಮೇಲೆ ಈ ಸರಕಾರದ ದಾಳಿಗಳು ಆಕ್ರಾಮಕ ಸ್ವರೂಪ ಪಡೆಯುತ್ತಿವೆ. ಉದ್ಯೋಗವನ್ನು ಸಂಪೂರ್ಣವಾಗಿ ಕ್ಯಾಶುವಲ್ ಗೊಳಿಸುವುದು ಅದರ ಹುನ್ನಾರ. ಅಲ್ಲದೆ ಅದು ಸಾರ್ವಜನಿಕ ವಲಯವನ್ನು ದೇಶದ ಕೈಗಾರಿಕಾ ನಕಾಶೆಯಿಂದಲೇ ಅಳಿಸಿ ಹಾಕುವ ನಿರ್ಧಾರ ಮಾಡಿದಂತಿದೆ. ರೈಲ್ವೆ ಖಾಸಗೀಕರಣ, ಕಲ್ಲಿದ್ದಲು ಗಣಿಗಾರಿಕೆಯನ್ನು ವಿದೇಶಿ ಕಂಪನಿಗಳಿಗೂ ಯಾವುದೇ ಅಡೆ–ತಡೆಗಳಿಲ್ಲದೆ ತೆರೆದಿಟ್ಟಿರುವುದು, ಸಾರ್ವಜನಿಕ ವಲಯದ ರಕ್ಷಣಾ ಉದ್ದಿಮೆಗಳಲ್ಲಿ ದೊಡ್ಡ ಪ್ರಮಾಣದ ಹೊರಗುತ್ತಿಗೆ ಇತ್ಯಾದಿಗಳ ಮೂಲಕ ರಕ್ಷಣಾ ಉತ್ಪಾದನೆಯ ಜಾಲವನ್ನೇ ಧ್ವಂಸ ಮಾಡುತ್ತಿರುವುದು, ಅರ್ಧದಷ್ಟು ಶಸ್ತ್ರಾಸ್ತ್ರ ಉತ್ಪಾದನಾ ಘಟಕಗಳನ್ನು ಕಳಚಿ ಹಾಕಿರುವುದು ಇತ್ತೀಚಿನ ಉದಾಹರಣೆಗಳು.

ಕಲ್ಲಿದ್ದಲು ಗಣಿಗಾರಿಕೆ ಖಾಸಗೀಕರಣದ ವಿರುದ್ಧ ಆ ಉದ್ದಿಮೆಯ ಕಾರ್ಮಿಕರು ಹಾಗೂ ರಕ್ಷಣಾ ಉದ್ದಿಮೆಯ ಖಾಸಗೀಕರಣದ ವಿರುದ್ಧ ರಕ್ಷಣಾ ಉದ್ದಿಮೆಯ ಕಾರ್ಮಿಕರು ಮಾರ್ಚ್ 15ರಂದು ಐಕ್ಯ ಮುಷ್ಕರ ನಡೆಸುತ್ತಿದ್ದಾರೆ. ಅವರ ಈ ಹೋರಾಟಗಳೊಂದಿಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆಯಂತೆ ನಡೆಯುವ ಅಖಿಲ ಭಾರತ ಪ್ರತಿಭಟನಾ ಕಾರ್ಯಾಚರಣೆ ಸೌಹಾರ್ದ ವ್ಯಕ್ತಪಡಿಸುತ್ತದೆ.

ಯಾವುದೇ ಸಂಪನ್ಮೂಲಗಳನ್ನು ಕೊಡದೆ ಕೇವಲ ಜನಮರುಳು ಘೋಷಣೆಗಳಿಂದ ತುಂಬಿರುವ ಕೇಂದ್ರ ಬಜೆಟ್ ಮೂಲಭೂತವಾಗಿ ಜನ–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ಸ್ವರೂಪದ್ದಾಗಿದೆ ಎಂಬ ತಮ್ಮ ಅಭಿಪ್ರಾಯವನ್ನು ಕಾರ್ಮಿಕ ಸಂಘಟನೆಗಳು ಪುನರುಚ್ಚರಿಸುತ್ತ ಜನಗಳಿಗೆ ಮತ್ತು ಕಾರ್ಮಿಕರಿಗೆ ವಂಚನೆ ಮಾಡಿರುವ ಈ ವಂಚಕ ಬಜೆಟ್ ವಿರುದ್ಧ ಕಾರ್ಮಿಕರು ತಮ್ಮ ಪ್ರತಿಭಟನೆಯ ದನಿ ಮೊಳಗಿಸುತ್ತಾರೆ ಎಂದು ಹೇಳಿವೆ.

47ನೇ ಐಎಲ್‌ಸಿ ಮುಂದೂಡಿಕೆಗೆ ಆಕ್ರೋಶ

47ನೇ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ವನ್ನು ಗುಟ್ಟಾಗಿ ಮುಂದೂಡುವ ಭಾರತ ಸರಕಾರದ ನಡೆಯನ್ನು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಈ ಸಭೆ ಬಲವಾಗಿ ಖಂಡಿಸಿತು. ಈ ಮೂಲಕ ಕಾರ್ಮಿಕ ವಿಷಯಗಳಲ್ಲಿ ತ್ರಿಪಕ್ಷೀಯತೆಯನ್ನು ಅಪಹಾಸ್ಯಕ್ಕೆ ಗುರಿಪಡಿಸಲಾಗಿದೆ ಎಂದು ಅವು ಆಕ್ರೋಶ ವ್ಯಕ್ತಪಡಿಸಿದವು.

47ನೇ ಐಎಲ್‌ಸಿ ಮುಖ್ಯವಾಗಿ ಉದ್ಯೋಗಾವಕಾಶ ನಿರ್ಮಾಣ, ಸರಕಾರ ಕಾರ್ಮಿಕ ಕಾನೂನುಗಳಲ್ಲಿ ತರಬೇಕೆಂದಿರುವ ಸುಧಾರಣೆಗಳು, ತಿದ್ದುಪಡಿಗಳು ಮತ್ತು ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಬಗ್ಗೆ ಚರ್ಚಿಸಬೇಕಾಗಿತ್ತು. ಜನವರಿ ತಿಂಗಳಲ್ಲಿ ಸರಕಾರ ಆರಂಭಿಸಬೇಕೆಂದಿರುವ "ನಿಗದಿತ ಅವಧಿಯ ಉದ್ಯೋಗ' ಎಂಬುದರ ಕರಡು ನಿಯಮಾವಳಿಗಳನ್ನು ಪ್ರಕಟಿಸಿತ್ತು. ಇದನ್ನು ಫೆಬ್ರುವರಿ 15ರಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಕಾರ್ಮಿಕ ಸಂಘಗಳು ಬಲವಾಗಿ ವಿರೋಧಿಸಿದ್ದವು.

ಅಲ್ಲದೆ 43, 44 ಮತ್ತು 45ನೇ ಐಎಲ್‌ಸಿಗಳು ಶಿಫಾರಸು ಮಾಡಿದ್ದ ಕನಿಷ್ಟ ಕೂಲಿಯ ಸೂತ್ರಗಳು, ಕಾಂಟ್ರಾಕ್ ನೌಕರರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ಸೂತ್ರದ ಜಾರಿ ಹಾಗೂ ಸ್ಕೀಮ್ ಕೆಲಸಗಾರರನ್ನು ಕಾರ್ಮಿಕರು ಎಂದು ಪರಿಗಣಿಸುವ ಬಗ್ಗೆ ಸರಕಾರ ಇನ್ನೂ ಯಾವ ಕ್ರಮವನ್ನೂ ಕೈಗೊಂಡಿಲ್ಲ ಎಂಬುದನ್ನು ಕಾರ್ಮಿಕ ಸಂಘಗಳು ನೆನಪಿಸಿದವು.

ಈ ದಾಳಿಗಳ ವಿರುದ್ಧ ದುಡಿಯುವ ಜನಗಳ ಹೋರಾಟಗಲೂ ಎದ್ದು ಬರುತ್ತಿವೆ ಎಂಬುದು ತೃಪ್ತಿ ತರುವ ಸಂಗತಿ ಎಂದು ಅವು ಹೇಳಿವೆ. ಕಲ್ಲಿದ್ದಲು ಉದ್ದಿಮೆ ಮತ್ತು ರಕ್ಷಣಾ ಉದ್ದಿಮೆಗಳ ನೌಕರರ ಹೋರಾಟಗಳು ಇದಕ್ಕೆ ಉದಾಹರಣೆಗಳು.

ಈ ಹಿನ್ನೆಲೆಯಲ್ಲಿ ಮಾರ್ಚ್ 15ರಂದು ಅಖಿಲ ಭಾರತ ಪ್ರತಿಭಟನಾ ಕಾರ್ಯಾಚರಣೆಗೆ ಕರೆ ನೀಡಲಾಗಿದೆ. ಮಾರ್ಚ್ 15ರ ನಂತರ ಶೀಘ್ರವೇ ಮತ್ತೆ ಸಭೆ ಸೇರಿ ದೇಶವ್ಯಾಪಿ ಐಕ್ಯ ಕಾರ್ಯಾಚರಣೆಯ ಮುಂದಿನ ಹೆಜ್ಜೆಯ ಬಗ್ಗೆ ನಿರ್ಧರಿಸಲಾಗುವುದು ಎಂದೂ ಕೇಂದ್ರ ಕಾರ್ಮಿಕ ಸಂಘಟನೆಗಳು ಹೇಳಿವೆ. ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಯುಟಿಯುಸಿ ಮತ್ತು ಎಲ್‌ಪಿಎಫ್ ಮುಖಂಡರು ಈ ಸಭೆಯಲ್ಲಿ ಭಾಗವಹಿಸಿದ್ದರು.



ಕಾಂ. ಪ್ರಬೋಧ್ ಪಾಂಡ

ರೈತ ಸಂಘಟನೆಗಳ ಐಕ್ಯ ಹೋರಾಟಗಳನ್ನು ಬೆಸೆಯುತ್ತಿದ್ದ ಮುಖಂಡರು–ಎಐಕೆಎಸ್ ಶ್ರದ್ಧಾಂಜಲಿ

ಹಿರಿಯ ಸಿಪಿಐ ಮುಖಂಡರೂ, ಅಖಿಲ ಭಾರತ ಕಿಸಾನ್ ಸಭಾ(ಅಜೊಯ್ ಭವನ)ದ ಅಧ್ಯಕ್ಷರೂ ಆಗಿದ್ದ ಪ್ರಬೋಧ್ ಪಾಂಡ ಫೆಬ್ರುವರಿ 27ರಂದು ನಿಧನರಾಗಿದ್ದಾರೆ. ಅವರಿಗೆ 72 ವರ್ಷ ವಯಸ್ಸಾಗಿತ್ತು.

ಅವರು ಸಿಪಿಐನ ಪಶ್ಚಿಮ ಬಂಗಾಲ ರಾಜ್ಯ ಕಾರ್ಯದರ್ಶಿಯೂ ಆಗಿದ್ದರು. ಹಾಗೂ ಅಲ್ಲಿನ ಮೇದಿನಿಪುರ ಕ್ಷೇತ್ರದಿಂದ ಲೋಕಸಭೆಗೆ ಮೂರು ಬಾರಿ ಆಯ್ಕೆಯಾಗಿದ್ದರು. ರೈತರು ಮತ್ತು ಕಾರ್ಮಿಕರ ಸಂಘಟನೆಯಲ್ಲಿ ಹಲವು ದಶಕಗಳಿಂದ ದುಡಿದಿರುವ ಅವರು ಸಂಸತ್ತಿನಲ್ಲೂ ರೈತರು ಮತ್ತು ಇತರ ಬಡವಿಭಾಗಗಳ ಪ್ರಶ್ನೆಗಳನ್ನು, ನಿರ್ದಿಷ್ಟವಾಗಿ ಸಣಬು ರೈತರು ಸಣಬು ಕಾರ್ಖಾನೆಗಳ ಕಾರ್ಮಿಕರ ಪ್ರಶ್ನೆಗಳನ್ನು ಸದಾ ಎತ್ತುತ್ತಿದ್ದರು. ಇವರು ಮೃದುಭಾಷಿ ಸರಳಜೀವಿ ಕಮ್ಯುನಿಸ್ಟರಾಗಿದ್ದು ಎಲ್ಲರ ಗೌರವ ಗಳಿಸಿದ್ದವರು ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಶ್ರದ್ಧಾಂಜಲಿ ಅರ್ಪಿಸಿದೆ.

ಅವರು ಎಐಕೆಎಸ್‌ನೊಂದಿಗೆ ನಿಕಟ ಸಹಯೋಗದಿಂದ ಕೆಲಸ ಮಾಡುತ್ತಿದ್ದು ಎರಡು ಕಿಸಾನ್ ಸಭಾಗಳ ನಡುವೆ ಘನಿಷ್ಟ ಬಂಧಗಳು ಏರ್ಪಡುವಲ್ಲಿ ನೆರವಾಗಿದ್ದರು. ಐಕ್ಯ ಕಾರ್ಯಾಚರಣೆಗಳಿಗೆ, ವಿಷಯಾಧಾರಿತ ಐಕ್ಯತೆ ಕಟ್ಟುವಲ್ಲಿ ಮತ್ತು ಎಡಪಂಥೀಯ ರೈತ ಸಂಘಟನೆಗಳ ಐಕ್ಯತೆ ಬೆಸೆಯುವುದಕ್ಕೆ ಅವರ ಬದ್ಧತೆ ಸದಾ ಸ್ಮರಣೀಯ, ತೀವ್ರ ವಿಷಯಾಧಾರಿತ ಐಕ್ಯ ಹೋರಾಟಗಳ ಸಮಯದಲ್ಲಿ ಅವರು ನಿಧನರಾಗಿರುವುದು ರೈತಾಪಿ ಜನಗಳಿಗೆ ಒಂದು ದೊಡ್ಡ ನಷ್ಟ ಎಂದಿರುವ ಎಐಕೆಎಸ್ ಅವರ ಕುಟುಂಬದವರಿಗೆ ಮತ್ತು ಅವರೊಡನೆ ಕೆಲಸ ಮಾಡುತ್ತಿದ್ದ ಎಲ್ಲ ಸಂಗಾತಿಗಳಿಗೆ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

ಸಾಮಾಜಿಕ ನ್ಯಾಯವನ್ನು ಗಾಳಿಗೆ ತೂರಿದ ಟಿಐಎಸ್‌ಎಸ್ ನಿರ್ಧಾರ: ಡಿಎಸ್‌ಎಂಎಂ ಖಂಡನೆ, ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ

ಮುಂಬೈಯಲ್ಲಿರುವ ಟಾಟಾ ಸಮಾಜವಿಜ್ಞಾನಗಳ ಸಂಸ್ಥೆ(ಟಿಐಎಸ್‌ಎಸ್) ಭಾರತ ಸರಕಾರದ ಮೆಟ್ರಿಕೊತ್ತರ ವಿದ್ಯಾರ್ಥಿವೇತನ(ಜಿಒಐ–ಪಿಎಂಎಸ್)ಕ್ಕೆ ಅರ್ಹರಾದ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ನೆರವನ್ನು ನಿಲ್ಲಿಸಲು ನಿರ್ಧರಿಸಿರುವುದನ್ನು ದಲಿತ ಶೋಷಣ ಮುಕ್ತಿ ಮಂಚ್ (ಡಿಎಸ್‌ಎಂಎಂ) ಖಂಡಿಸಿದೆ ಹಾಗೂ ಇದರ ವಿರುದ್ಧ ನಡೆಯುತ್ತಿರುವ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದೆ.

ಕೇಂದ್ರದ ಬಜೆಟ್ ಕಡಿತದಿಂದ ಹಣಕಾಸು ಕೊರತೆ ಅನುಭವಿಸುತ್ತಿರುವ ಕೇಂದ್ರ ಸರಕಾರದ ಇತರ ಉನ್ನತ ಶೈಕ್ಷಣಿಕ ಸಂಸ್ಥೆಗಳಂತೆ ಟಿಐಎಸ್‌ಎಸ್ ಕೂಡ ಹಣಕಾಸು ಸಂಕಷ್ಟಕ್ಕೆ ಒಳಗಾಗಿದ್ದು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಸೌಲಭ್ಯಗಳನ್ನು ಕಡಿತ ಮಾಡಲು ಮುಂದಾಗಿದೆ. ಎಲ್ಲ ವಿದ್ಯಾರ್ಥಿಗಳಿಂದ ಭೋಜನ ಹಾಲ್ ಮತ್ತು ಹಾಸ್ಟೆಲ್ ಶುಲ್ಕಗಳನ್ನು ಕಡ್ಡಾಯವಾಗಿ ವಸೂಲಿ ಮಾಡಲು ನಿರ್ಧರಿಸಿತು.

ಸಮಾಜದ ಅಂಚಿಗೆ ತಳ್ಳಲ್ಪಟ್ಟ ಆರ್ಥಿಕ ಸಂಪನ್ಮೂಲಗಳಿಲ್ಲದೆ ಭಾರತ ಸರಕಾರದ ವಿದ್ಯಾರ್ಥಿ ವೇತನ ಮಾತ್ರವೇ ಉನ್ನತ ಶಿಕ್ಷಣ ಪಡೆಯಲು ಆಧಾರವಾಗಿರುವ ವಿದ್ಯಾರ್ಥಿಗಳಿಂದಲೂ ಇದನ್ನು ವಸೂಲಿ ಮಾಡಲು ನಿರ್ಧರಿಸಿರುವುದು ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಅಪಚಾರವಾಗಿದ್ದು ಇದರಿಂದಾಗಿ ಉನ್ನತ ಶಿಕ್ಷಣದಲ್ಲಿ ದಮನಕ್ಕೊಳಗಾಗಿರುವ 'ಸಮುದಾಯಗಳ ಭಾಗವಹಿಸುವಿಕೆ ಸಂಪೂರ್ಣವಾಗಿ ಶೂನ್ಯಗೊಳ್ಳುವಂತಾಗುತ್ತದೆ, ಟಿಐಎಸ್‌ಎಸ್ ಆಡಳಿತ ಈ ನಿರ್ಧಾರವನ್ನು ಹಿಂತೆಗೆದುಕೊಂಡು ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಒಬಿಸಿ ವಿದ್ಯಾರ್ಥಿಗಳಿಗೆ ಇವುಗಳ ವಿನಾಯ್ತಿಯನ್ನು ಮುಂದುವರೆಸಬೇಕೆಂದು ಡಿಎಸ್‌ಎಂಎಂ ಆಗ್ರಹಿಸಿದೆ.

ಭಾರತ ಸರಕಾರ ಮೆಟ್ರಿಕೋತ್ತರ ವಿದ್ಯಾರ್ಥಿವೇತನಗಳ ಮೊತ್ತವನ್ನು ಹೆಚ್ಚಿಸಬೇಕು ಮತ್ತು ಕೇಂದ್ರ ಮತ್ತು ರಾಜ್ಯ ಸರಕಾರಗಳ ಅನುದಾನಿತ ವಿಶ್ವವಿದ್ಯಾಲಯಗಳಿಗೆ ಹಣನೀಡಿಕೆಗಳನ್ನು ಹೆಚ್ಚಿಸಬೇಕು, ಈ ಮೂಲಕ ಯಾವ ಅರ್ಹ ವಿದ್ಯಾರ್ಥಿಯೂ ಉನ್ನತ ಶಿಕ್ಷಣದಿಂದ ವಂಚಿತನಾಗದಂತಾಗಬೇಕು ಎಂದು ಕೂಡ ಡಿಎಸ್‌ಎಂಎಂ ಆಗ್ರಹಿಸಿದೆ.



ಉನ್ನತ ಶಿಕ್ಷಣವನ್ನು ಹಣವಂತರಿಗೇ ಮೀಸಲುಗೊಳಿಸುವ ಕ್ರಮ: ಎಸ್‌ಎಫ್‌ಐ ಖಂಡನೆ

ಎಸ್‌ಎಫ್‌ಐನ ಕೇಂದ್ರ ಕಾರ್ಯಕಾರಿ ಮಂಡಳಿ ಕೂಡ ಟಿಐಎಸ್‌ಎಸ್ ಈಗಾಗಲೇ ದಾಖಲಾಗಿರುವ ಮತ್ತು ಮುಂದೆ ದಾಖಲಾಗುವ ವಿದ್ಯಾರ್ಥಿಗಳಿಗೆ ಹಣಕಾಸು ನೆರವುಗಳೆಲ್ಲವನ್ನೂ ಹಿಂತೆಗೆದುಕೊಳ್ಳಲು ನಿರ್ಧರಿಸಿರುವುದನ್ನು ಬಲವಾಗಿ ಖಂಡಿಸಿದೆ ಹಾಗೂ ಇದರ ವಿರುದ್ಧ ಕಳೆದ ಕೆಲವು ತಿಂಗಳಿಂದ ಹೋರಾಟದಲ್ಲಿರುವ ವಿದ್ಯಾರ್ಥಿಗಳಿಗೆ ಬೆಂಬಲವನ್ನು ವ್ಯಕ್ತಪಡಿಸಿದೆ. ಈ ಬಗ್ಗೆ ಮಾತಕತೆಗಳ, ಮಧ್ಯಸ್ಥಿಕೆಗಳ ಪ್ರಯತ್ನಗಳೆಲ್ಲವೂ ವಿಫಲವಾದ ನಂತರ ವಿದ್ಯಾರ್ಥಿಗಳು ಬೀದಿಗಿಳಿದಿದ್ದಾರೆ. ಏಕೆಂದರೆ ಆಡಳಿತದ ಈ ನಿರ್ಧಾರ ಎಲ್ಲ ಟಿಐಎಸ್‌ಎಸ್ ಕ್ಯಾಂಪಸ್‌ಗಳಲ್ಲೂ ಅಂಚಿಗೆ ತಳ್ಳಲ್ಪಟ್ಟಿರುವ ಸಮುದಾಯಗಳಿಂದ ಉನ್ನತ ಶಿಕ್ಷಣಕ್ಕೆ ಬಹಳ ಪರಿಶ್ರಮದಿಂದ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಪರದಾಡುವಂತಾಗಿದೆ , ಮಾತ್ರವಲ್ಲ, ಸಮಾಜಿಕ ನ್ಯಾಯ ಕುರಿತಂತೆ ಟಿಐಎಸ್‌ಎಸ್‌ನ ಪ್ರತಿಷ್ಠೆಗೂ ಕುಂದು ತಂದಿದೆ.

ಈ ಮೆಟ್ರಿಕೊತ್ತರ ವಿದ್ಯಾರ್ಥಿ ವೇತನ ಬೇರೆ ಯಾವ ಹಣಕಾಸು ನೆಲೆಯೂ ಇಲ್ಲದ ವಿದ್ಯಾರ್ಥಿಗಳಿಗೆ ಇರುವ ಏಕೈಕ ಬೆಂಬಲ ವ್ಯವಸ್ಥೆ, ಅದನ್ನೂ ರದ್ದು ಮಾಡುವ ಮೂಲಕ ಶಿಕ್ಷಣದ ಹಕ್ಕನ್ನು ಕೇವಲ ಹಣವಂತರಿಗಷ್ಟೇ ಮೀಸಲಿಟ್ಟಂತಾಗಿದೆ ಮತ್ತು ಎಲ್ಲರನ್ನೂ ಒಳಗೊಳ್ಳಬೇಕಾದ ಶೈಕ್ಷಣಿಕ ಕ್ಷೇತ್ರವನ್ನು ಸಂಕುಚಿತ ಗೊಳಿಸಿದಂತಾಗಿದೆ ಎಂದು ಎಸ್‌ಎಫ್‌ಐ ಆಕ್ರೋಶ ವ್ಯಕ್ತಪಡಿಸಿದೆ.


ಬಜೆಟ್ ನೀಡಿಕೆಗಳಲ್ಲಿ ಕಡಿತ, ಸೀಟುಗಳಲ್ಲಿ ಕಡಿತ, ವಿದ್ಯಾರ್ಥಿ ವೇತನಗಳನ್ನು ಮತ್ತು ಹಣಕಾಸು ನೆರವನ್ನು ರದ್ದು ಮಾಡುವುದು ಇವೆಲ್ಲ ಶೈಕ್ಷಣಿಕ ಅವಕಾಶಗಳನ್ನು ಸಂಕುಚಿತಗೊಳಿಸುತ್ತಿರುವ ಕ್ರಮಗಳು. ಇದು ಶಿಕ್ಷಣದ ಖಾಸಗೀಕರಣ ಮತ್ತು ನವ–ಉದಾರವಾದಿ ಅಜೆಂಡಾಕ್ಕೆ ಅನುಕೂಲ ಕಲ್ಪಿಸುವ ಈ ಸರಕಾರದ ಧೋರಣೆಯ ಭಾಗ. ನಿಧಾನವಾಗಿ ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಜ್ಞಾನಾರ್ಜನೆಯ ಕೇಂದ್ರ ಗಳಾಗುವ ಬದಲು ಕಾರ್ಪೊರೇಟ್ ಹಿತಗಳನ್ನು ಈಡೇರಿಸುವ ವ್ಯಕ್ತಿಗಳನ್ನು ಉತ್ಪಾದಿಸುವ ಕಾರ್ಖಾನೆಗಳಾಗಿ ಮಾರ್ಪಡುತ್ತಿವೆ.

ಎನ್‌ಸಿಡಿಹೆಚ್‌ಆರ್ ವರದಿಯ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿವೇತನಗಳ ಬಾಕಿ ಮೊತ್ತ 11156 ಕೋಟಿ ರೂ.ಗಳು. ಬಜೆಟ್ ಈ ಬಾಕಿಯ ಬಗ್ಗೆ ಮೌನವಾಗಿದೆ. ಇಂತಹ ಧೋರಣೆಗಳಿಂದಾಗಿ ಕೇಂದ್ರ ಸರಕಾರದ ಶೈಕ್ಷಣಿಕ ಸಂಸ್ಥೆಗಳು ತೀವ್ರ ಹಣಕಾಸು ಕೊರತೆಯನ್ನು ಅನುಭವಿಸುತ್ತಿವೆ. ಮತ್ತು ಇದರಿಂದಾಗಿ ವಿಶೇಷವಾಗಿ ಅಂಚಿಗೆ ತಳ್ಳಲ್ಪಟ್ಟಿರುವ ಸಮುದಾಯಗಳ ವಿದ್ಯಾರ್ಥಿಗಳನ್ನು ಅವರ ಸಂವಿಧಾನಿಕ ಹಕ್ಕಿನಿಂದ ವಂಚಿಸಲಾಗುತ್ತಿದೆ ಎಂದು ಎಸ್‌ಎಫ್‌ಐ ಖೇದ ವ್ಯಕ್ತಪಡಿಸಿದೆ.

ಕರ್ನಾಟಕದಲ್ಲಿ 24 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧೆ

ಕ್ರ.ಸಂ.	ಜಿಲ್ಲೆ	ಕ್ರ.ಸಂ.	ಕ್ಷೇತ್ರಗಳು
1	ಚಿಕ್ಕಬಳ್ಳಾಪುರ	1	ಬಾಗೇಪಲ್ಲಿ
		2	ಗೌರಿಬಿದನೂರು
2	ಬೆಂಗಳೂರು ಉತ್ತರ	3	ಕೆ.ಆರ್. ಪುರಂ
		4	ಮಹಾದೇವಪುರ
		5	ದಾಸರಹಳ್ಳಿ
		6	ರಾಜಾಜಿನಗರ
3	ಬೆಂಗಳೂರು ದಕ್ಷಿಣ	7	ಅನೇಕಲ್ (ಮೀಸಲು)
		8	ಬೆಂಗಳೂರು ದಕ್ಷಿಣ
4	ಕೋಲಾರ	9	ಶ್ರೀನಿವಾಸಪುರ
		10	ಕೆ.ಜಿ.ಎಫ್.
5	ಕಲಬುರಗಿ	11	ಕಲಬುರಗಿ ಗ್ರಾಮೀಣ (ಮೀಸಲು)
6	ಕೊಪ್ಪಳ	12	ಗಂಗಾವತಿ
7	ದಕ್ಷಿಣ ಕನ್ನಡ	13	ಮಂಗಳೂರು
		14	ಮಂಗಳೂರು ದಕ್ಷಿಣ
		15	ಮಂಗಳೂರು ಉತ್ತರ
		16	ಮೂಡಬಿದ್ರಿ
8	ಉಡುಪಿ	17	ಬೈಂದೂರು
9	ಉತ್ತರ ಕನ್ನಡ	18	ಹಳಿಯಾಳ
10	ಬೆಳಗಾವಿ	19	ರಾಮದುರ್ಗ
11	ಗದಗ	20	ರೋಣ
12	ಬಳ್ಳಾರಿ	21	ಕಂಪ್ಲಿ (ಮೀಸಲು)
		22	ಹೊಸಪೇಟೆ
		23	ಹಗರಿಬೊಮ್ಮನಹಳ್ಳಿ (ಮೀಸಲು)
13	ಮಂಡ್ಯ	24	ಮಳವಳ್ಳಿ (ಮೀಸಲು)

ಸಿಪಿಐ(ಎಂ) ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ 13 ಜಿಲ್ಲೆಗಳಲ್ಲಿ 24 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ. ಪಕ್ಷ ಇತರ ಎಡಪಕ್ಷಗಳ ಜತೆ ಮೈತ್ರಿಕೂಟ ರಚಿಸಲು ಸಹ ನಿರ್ಧರಿಸಿದ್ದು, ಈ ಬಗ್ಗೆ ಮಾತುಕತೆ ನಡೆಸುತ್ತಿದೆ. ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆಯೂ ಬಹುತೇಕ ಮುಗಿದಿದ್ದು ಸದ್ಯದಲ್ಲೇ ಅಭ್ಯರ್ಥಿಗಳ ಹೆಸರುಗಳ ಪಟ್ಟಿಯನ್ನೂ ಘೋಷಿಸಲಾಗುವುದು. ಇತರ ಯಾವುದೇ ಪಕ್ಷಗಳ ಜತೆ ಹೊಂದಾಣಿಕೆ ಅಥವಾ ಮೈತ್ರಿಕೂಟದ ಬಗ್ಗೆ ಈ ವರೆಗೆ ಯಾವುದೇ ಪ್ರಸ್ತಾವ ಇಲ್ಲ ಎಂದೂ ತಿಳಿದು ಬಂದಿದೆ.



ಕರಡು ರಾಜಕೀಯ ನಿರ್ಣಯದ ಕನ್ನಡ ಅನುವಾದ ಪ್ರಕಟ

ಸಿಪಿಐ(ಎಂ) 22ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ಕನ್ನಡ ಅನುವಾದ ಪ್ರಕಟವಾಗಿದ್ದು ಬೆಂಗಳೂರಿನ ಇ.ಎಂ.ಎಸ್. ಭವನದಲ್ಲಿರುವ ಸಿಪಿಐ(ಎಂ) ರಾಜ್ಯಸಮಿತಿ ಕಚೇರಿಯಿಂದ ತರಿಸಿಕೊಳ್ಳಬಹುದು. ಬೆಲೆ ರೂ. 20. ಕರಡು ರಾಜಕೀಯ ನಿರ್ಣಯಕ್ಕೆ ತಿದ್ದುಪಡಿಗಳನ್ನು ಮಾರ್ಚ್ 20, 2018ರೊಳಗೆ ಇಂಗ್ಲೀಷಿನಲ್ಲಾದರೆ ಸಿಪಿಐ(ಎಂ) ಕೇಂದ್ರ ಸಮಿತಿಗೆ, ಕನ್ನಡದಲ್ಲಾದರೆ ರಾಜ್ಯಸಮಿತಿ ಕಚೇರಿಗೆ ಕಳಿಸಬಹುದು. ಇ–ಮೈಲ್ ಮಾಡುವುದಾದರೆ pol@cpim.org ಅಥವಾ **cpimkar@gmail.com** ಗೆ ಕಳಿಸಬಹುದು. ಎಲ್ಲಾ ತಿದ್ದುಪಡಿಗಳು ಪ್ಯಾರಾ ಸಂಖ್ಯೆ/ಲೈನ್ ಸಂಖ್ಯೆಯನ್ನು ಉಲ್ಲೇಖಿಸಬೇಕು.

ಕೇರಳದ ಆದಿವಾಸಿ ಮತ್ತು ಯುಪಿಯ ಹೆಣ್ಣು ಮಗಳ ಬರ್ಬರ ಕೊಲೆಗಳು ಅದು ಹೇಗೆ ಭಿನ್ನ?

ಕೇಳಿಸಿದ್ದು

ಫೆಬ್ರವರಿ 22ರಂದು ಈ ದೇಶದಲ್ಲಿ ನಾಗರಿಕ ಸಮಾಜ ತಲೆ ತಗ್ಗಿಸಿ ನಿಲ್ಲಬೇಕಾದ ಎರಡು ಕೊಲೆಗಳು ನಡೆದವು.

ದಕ್ಷಿಣದ ಕೇರಳದಲ್ಲಿ ಆದಿವಾಸಿ ಯುವಕನೊಬ್ಬನನ್ನು 'ಅಕ್ಕಿ ಕದ್ದ'ನೆಂದು ಸಾಯುವವರೆಗೂ ಹೊಡೆಯಲಾಯ್ತು (ಅದಕ್ಕೆ ಸೆಲ್ಫಿಯನ್ನು ತೆಗೆದುಕೊಂಡು ಸಂಭ್ರಮಿಸಿದ್ದರು ಕೊಲೆಗಾರರು). ಆ ಯುವಕ 22ರ ಗುರುವಾರ ಸತ್ತು ಹೋದ.

ಅದೇ ಗುರುವಾರ ಉತ್ತರದ ಯುಪಿಯ ಉನ್ನಾವೋದಲ್ಲಿ 18 ವರ್ಷದ ಯುವತಿಯೊಬ್ಬಳು ತನ್ನ ಸೈಕಲ್ ತೆಗೆದುಕೊಂಡು ತರಕಾರಿ ತರಲು ಹೊರಟವಳು ಹೆಣ್ಣಾದ ಕಾರಣಕ್ಕೇ ಕೊಲೆಯಾದಳು. ಆಕೆಯನ್ನು ಸುತ್ತುವರಿದ ಕೊಲೆಗಾರರು, ಹುಡುಗಿಯ ಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಜೀವಂತ ಸುಟ್ಟು ಹಾಕಿದ್ದರು. ಜೀವ ಉಳಿಸಿಕೊಳ್ಳಲು ಕೂಗುತ್ತಾ ಓಡಿದ ಆಕೆ 100 ಮೀಟರ್ ಓಡುವುದರ ಒಳಗೆ ಸುಟ್ಟ ಮಾಂಸದ ಮುದ್ದೆಯಾಗಿ ಸತ್ತು ಬಿದ್ದಿದ್ದಳು.

ಈ ಎರಡು ಘಟನೆಗಳಲ್ಲಿ, ಕೇರಳದ ಘಟನೆಯು ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳಲ್ಲಿ ಮಹತ್ವದ ಸ್ಥಾನ ಪಡೆದವು. ಚರ್ಚೆಯ ವಸ್ತುವಾದವು. ಆದರೆ ಉತ್ತರಪ್ರದೇಶದ ಘಟನೆ ಎಲ್ಲಿಯೂ ಚರ್ಚೆಯಾಗಲೇ ಇಲ್ಲ. ಅದೊಂದು 'ಮೂಲೆಸುದ್ದಿ'ಯಾಗಿ ಮುಗಿದುಹೋಯಿತು.

ಇದಕ್ಕೆ ಕಾರಣ ಏನಿರಬಹುದು?

ಮೊದಲನೆಯದಾಗಿ ದೇಶದ ಮಾಧ್ಯಮಗಳ ಸದ್ಯದ ಪಕ್ಷಪಾತದಂತೆ – ಕಮ್ಯುನಿಸ್ಟ್ ಕೇರಳ ಮತ್ತು ಸಂಘಿ ಉತ್ತರಪ್ರದೇಶದಲ್ಲಿ ನಡೆದ ಘಟನೆಗಳು ಅನ್ನುವ ಕಾರಣ ಇದ್ದಿರಬಹುದು. ಪರಿವಾರದ ಕೃಪೆಯ ಮಾಧ್ಯಮಗಳ ಸನ್ನಿಗೆ ಒಳಗಾದ ಪರಿವಾರೇತರ ವಾಹಿನಿ/ಪತ್ರಿಕೆಗಳೂ ಅನಿವಾರ್ಯವಾಗಿ ಕೇರಳ ಘಟನೆಯನ್ನು ಫೋಕಸ್ ಮಾಡಿದವು.

ಎರಡನೆಯದಾಗಿ ಸತ್ತವರಲ್ಲಿ ಮಹಿಳೆ ಮತ್ತು ಪುರುಷ ಅನ್ನುವ ಭೇದ – ನಮ್ಮ ದೇಶದಲ್ಲಿ ಮಹಿಳೆ ಮತ್ತು ದಲಿತರ ಸ್ಥಾನ ಮಾನ ಬಹುತೇಕ ಒಂದೇ ಆಗಿದೆ. ಆದರೆ ಸುದ್ದಿ ಮಾಡುವಾಗ ಮಹಿಳೆಗೆ ಯಾವತ್ತೂ ಪುರುಷನ ನಂತರದ ಆದ್ಯತೆಯೇ. ಬಹುಶಃ ಬಹುತೇಕ ವಾಹಿನಿ/ ಪತ್ರಿಕೆಗಳಿಗೆ ಕೇರಳದ ಯುವಕನ ಸಾವು ಮತ್ತು ಉತ್ತರ ಪ್ರದೇಶದ ಯುವತಿಯ ಸಾವು ಒಂದೇ ರೀತಿಯ ಭೀಕರತೆಯನ್ನು ಉಳ್ಳದ್ದು ಅಂತ ಅನ್ನಿಸಿಯೇ ಇಲ್ಲ.

ನಾವೂ ಹೇಗೆ ಇದರ ಭಾಗವಾದೆವು?

.. ..

ಎರಡೂ ಪ್ರಕರಣಗಳು ಹೇಗೆ ಸಮ?

ಇಲ್ಲ. ನಾನಿದನ್ನು ಕಮ್ಯುನಿಸ್ಟ್ ಕೇರಳದ ಮುಖ ಉಳಿಸಲಿಕ್ಕಾಗಲೀ ಸಂಘಿ ಉತ್ತರಪ್ರದೇಶವನ್ನು ಹೆಚ್ಚು ಕ್ರಿಮಿನಲ್ ಎಂದು ಸಾಬೀತು ಮಾಡಲಿಕ್ಕಾಗಲೀ ಬರೆಯುತ್ತಿಲ್ಲ.

ಎರಡು ಜೀವಗಳು ತಮ್ಮ ಜಾತಿ (ವರ್ಗ) ಹಾಗೂ ಲಿಂಗದ ಕಾರಣಕ್ಕೆ ಕೊಲೆಯಾಗಿವೆ. ಮನುಷ್ಯರಾಗಿ ಬದುಕುವ ಎಲ್ಲ ಹಕ್ಕುಗಳಿದ್ದಾಗಿಯೂ ಅವರನ್ನು ಅವರ ಇರುವಿಕೆಯ ಕಾರಣಕ್ಕಾಗಿಯೇ ಕ್ರೂರವಾಗಿ ಕೊಲೆ ಮಾಡಲಾಗಿದೆ. ಹಸಿವಿನಲ್ಲಿ 2 ಕೆಜಿ ಅಕ್ಕಿ ಕದ್ದನೆಂದು ಒಬ್ಬ ಮುಗ್ಧ ಆದಿವಾಸಿಯನ್ನು ಹೊಡೆದು ಕೊಲ್ಲುವುದು ಮತ್ತು ಹುಡುಗಿಯೊಬ್ಬಳನ್ನು (ಕಾರಣ ಈವರೆಗೆ ಸ್ಪಷ್ಟವಾಗಿಲ್ಲ) ಹಾಡಹಗಲೇ ನಡುಬೀದಿಯಲ್ಲಿ ಸೀಮೆ ಎಣ್ಣೆ ಸುರಿದು ಸುಟ್ಟು ಹಾಕುವುದು ದಮನಿತರ ಮೇಲಿನ ಶೋಷಣೆಯ ಪ್ರತೀಕವಲ್ಲದೆ ಮತ್ತೇನೂ ಅಲ್ಲ.

ಈ ಕಾರಣಕ್ಕೆ ಎರಡೂ ಪ್ರಕರಣಗಳು ಸಮಾನ ಪ್ರಾಮುಖ್ಯ ಪಡೆಯಬೇಕಿತ್ತು. ಸಮಾನ ಚರ್ಚೆಯಾಗಬೇಕಿತ್ತು. ಮತ್ತು ಸಮವಾಗಿ ಪ್ರಶ್ನಿಸಲ್ಪಡಬೇಕಿತ್ತು.

ಆದರೆ ಹಾಗಾಗಲಿಲ್ಲ. ನಾವು ಪಕ್ಷಪಾತಿ ಮಾಧ್ಯಮಗಳ ಹುನ್ನಾರದ ಭಾಗವಾಗಿಬಿಟ್ಟೆವು. ಅಭಿಪ್ರಾಯ ಉತ್ಪಾದನೆ ಎಂಬ ಉದ್ದಿಮೆಯ ವಂಚನೆಗೆ ಒಳಗಾದೆವು. ಅಷ್ಟು ಮಾತ್ರವಲ್ಲ, ನಮಗೇ ಅರಿವಿಲ್ಲದಂತೆ, ಕೇರಳದ ಘಟನೆಯ ಬಗ್ಗೆ ಹೆಚ್ಚು ಬರೆಯುವಂತೆ ನಿರ್ದೇಶಿಲ್ಪಟ್ಟೆವು. ನಾವು ಎಡಪಂಥೀಯರೆಂಬ ಪ್ರಜ್ಞೆಯನ್ನು ಪಾಪಪ್ರಜ್ಞೆಯಾಗಿಸುಲ್ಲಿ ಅವರು ತಕ್ಕಮಟ್ಟಿಗೆ ಯಶಸ್ವಿಯೂ ಆದರೇನೋ ಅಂತ ಈಗ ಅನ್ನಿಸುತ್ತಿದೆ. ಅದೇ ವೇಳೆಗೆ ಉತ್ತರ ಪ್ರದೇಶದ ಹುಡುಗಿಯ ಬಗ್ಗೆ (ಈಗ ಗೂಗಲ್ ಜಾಲಾಡಿದರೂ ಆಕೆಯ ಹೆಸರು ತಿಳಿಯುತ್ತಿಲ್ಲ) ಅವರಂತೂ ಬರೆಯಲಿಲ್ಲ, ನಾವೂ ಬರೆಯದೆ ಉಳಿಯುವಂತಾಯ್ತು.

ಕೇರಳ ಕಮ್ಯುನಿಸ್ಟ್ ಹೌದು, ಮತ್ತು ಉತ್ತರ ಪ್ರದೇಶ ಸಂಘಿಗಳದ್ದು. ಆದರೆ ಎರಡೂ ಕಡೆ ಕೊಲ್ಲಲ್ಪಟ್ಟಿದ್ದು ಮನುಷ್ಯರು. ನಾವು ದಮನಿತ ವರ್ಗದ ಮೇಲೆ ನಡೆಯುವ ಇಂಥಾ ದೌರ್ಜನ್ಯಗಳನ್ನು, ಘಟನೆಗಳನ್ನು ಒಟ್ಟು ದೇಶದ ಜನರ ಮನಸ್ಥಿತಿಯನ್ನಾಗಿ ನೋಡಬೇಕೇ ಹೊರತು, ಆಯಾ ರಾಜ್ಯಗಳ ಆಡಳಿತ ಪಕ್ಷಗಳ ಆಧಾರದಲ್ಲಿ ಅಲ್ಲ. ಹಾಗೆ ಮಾಡದೆ ಹೋದರೆ, ಈ ದೇಶದ ಮನಸ್ಥಿತಿಯನ್ನು ಯಾರು ರೂಪಿಸುತ್ತಿದ್ದಾರೆ ಅನ್ನುವ ಅರಿವೇ ಆಗದಂತೆ ನಾವು ಬಲೆಗೆ ಬಿದ್ದುಬಿಟ್ಟಿರುತ್ತೇವೆ (ಈಗಾಗಲೇ ಬೀಳುತ್ತಿದ್ದೇವೆ) ಮತ್ತು ಅರಿವಾಗುವ ವೇಳೆಗೆ ಎಲ್ಲವೂ ಕೈಮೀರಿ ಹೋಗಿರುತ್ತದೆ.

– ಚೇತನಾ ತೀರ್ಥಹಳ್ಳಿ (ಮಾಧ್ಯಮನೆಟ್.ಕಾಂ)

ಹಾಸ್ಟೆಲ್ ಹೊರಗುತ್ತಿಗೆ ನೌಕರರ ಮೇಲೆ ಕಿರುಕುಳ ಖಂಡಿಸಿ ಪ್ರತಿಭಟನೆ

ಗದಗ: ಸರ್ಕಾರಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಫೆ. 27ರಂದು ಜಿಲ್ಲಾಧಿಕಾರಿಗಳ ಕಛೇರಿ ಎದುರು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಹಾಗೂ ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘ ಗದಗ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು. ನಂತರ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು



ಪ್ರತಿಭಟನೆ ಉದ್ದೇಶಿಸಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಹಾಗೂ ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿಯವರು ಮಾತನಾಡಿ ಹತ್ತಾರು ವರ್ಷಗಳಿಂದ ದುಡಿಯುತ್ತಿರುವ ಹೊರಗುತ್ತಿಗೆ ನೌಕರರು ಗುತ್ತಿಗೆದಾರರಿಂದ ಶೋಷಣೆ ಅನುಭವಿಸುತ್ತಿದ್ದಾರೆ. ತಿಂಗಳುಗಟ್ಟಲೇ ಸಂಬಳ ಕೊಡದೆ ಸತಾಯಿಸುತ್ತಾರೆ. ಹಿಂದುಳಿದ ವರ್ಗಗಳ ಇಲಾಖೆಯ ಗುತ್ತಿಗೆದಾರ ಹಾಗೂ ಅಧಿಕಾರಿಗಳುಸೇರಿ ಸರ್ಕಾರ ಕೊಡುವ ಸಂಬಳದಲ್ಲಿ ತಿಂಗಳಿಗೆ ತಲಾ ಐದು ನೂರುಗಳನ್ನು ಅಕ್ರಮವಾಗಿ ವಸೂಲಿ ಮಾಡಿಕೊಳ್ಳುತ್ತಾರೆ. ಪಿ.ಎಫ್. ಮತ್ತು ಇ.ಎಸ್.ಐ ವಂತಿಗೆಯನ್ನು ನೌಕರರ ಸಂಬಳದಲ್ಲಿ ಕಡಿತ ಮಾಡಿ ತಾವೇ ಕಬಳಿಸುತ್ತಾರೆ. ಇಲಾಖೆ ಅಧಿಕಾರಿಗಳು ಇದನ್ನು ಕಂಡು ಕಾಣದವರಂತೆ ವರ್ತಿಸಿ ನೌಕರರ ಸುಲಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಅನ್ಯಾಯದ ವಿರುದ್ಧ ಜಿಲ್ಲಾಧಿಕಾರಿಗಳ ಕಚೇರಿ ಎದುರು ಅಹೋರಾತ್ರಿ ಹೋರಾಟ ನಡೆಸಲಾಗುತ್ತಿದೆ ನಡೆಸಲಾಗುತ್ತದೆ. ಈ ಕೂಡಲೇ ಗುತ್ತಿಗೆದಾರರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತೇವೆ. ಬಾಕಿ ಇರುವ ಪಿ.ಎಫ್. ಇ.ಎಸ್.ಐ ನೌಕರರ ಖಾತೆಗೆ ಜಮಾ ಆಗಬೇಕು. ಹಾಗೂ ಬಾಕಿ ಇರುವ ವೇತನ ಈ ಕೂಡಲೆ ಬಿಡುಗಡೆ ಮಾಡಬೇಕು. ಎಂದು ಆಗ್ರಹಿಸಿದರು.

ನಂತರ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಹಾಗೂ ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ ಗದಗ ಜಿಲ್ಲಾ ಸಮಿತಿ ಅಧ್ಯಕ್ಷರಾದ ಪೀರು ರಾಠೋಡ ಮಾತನಾಡಿದರು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯ ನಿರ್ವಾಹಕಾ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ,ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ,ವಸತಿ ಶಾಲಾಶಿಕ್ಷಣ ಸಂಸ್ಥೆ ಇಲಾಖೆ,ಗುತ್ತಿಗೆದಾರರು ಹಾಗೂ ಸಂಘಟನೆಯ ಮುಖಂಡರನ್ನೊಳಗೊಂಡ ಜಂಟಿ ಸಭೆ ಕರೆಯಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್.ಎಫ್.ಐ ಜಿಲ್ಲಾಧ್ಯಕ್ಷರಾದ ಶಿವಾನಂದ ಬೋಸ್ಲೆ, ಮುಖಂಡರಾದ ಶಾರದಾ ಪವಾರ, ರೂಪಣ್ಣ ಜಾಟೋತ್ತರ, ಶಿವಾಜಿ ಗಡ್ಡದ, ಮಹಾಂತೇಶ ಹಡಪದ, ಕಸೂರೆವ್ವ ಸೋಂಪೂರ, ಖಾಜಾಬಿ ಡಾಲಾಯತ್, ಪಾರ್ವತಿ ಸಜ್ಜನರ,ಸುಜತ ಮಲ್ಲಸಮುದ್ರ, ಮಂಜುಳಾ ಕೇಲೂರ, ಶಾಂತಾಬಾಯಿ ರಜಪೂತ, ಮಾಬುಬಿ ಲಕ್ಷ್ಮೇಶ್ವರ, ಸುನಂದಾ ಪಾಟೀಲ, ದ್ರಾಕ್ಷಾಯಣಿ ಬೆನ್ನೂರು, ರೇಣುಕಾ ಕನಕಮ್ಮನವರು ಸೇರಿದಂತೆ ಇತರರು ಭಾಗವಹಿಸಿದ್ದರು.



ತೊಗರಿ ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ಉಪವಾಸ ಸತ್ಯಾಗ್ರಹ

ತೊಗರಿ ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ಕಲ್ಬುರ್ಗಿಯಲ್ಲಿ 8ನೇ ದಿನಕ್ಕೆ ಕಾಲಿಟ್ಟ ಫೆ. 28ರಂದು ಅಮರಣಾಂತ ಉಪವಾಸ ಸತ್ಯಾಗ್ರಹದ ಸ್ಥಳಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ.ಕುಮಾರಸ್ವಾಮಿ ಭೇಟಿಕೊಟ್ಟು ಹೋರಾಟಕ್ಕೆ ಬೆಂಬಲಿಸಿದರು ಹಾಗು ಮಾಜಿ ಕೃಷಿ ಸಚಿವರಾದ ಬಂಡೆಪ್ಪ ಕಾಶಂಪುರ್ ಕೂಡ ಇದ್ದರು. ಹೋರಾಟದ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಮಾರುತಿ ಮಾನ್ಪಡೆ ವಹಿಸಿದ್ದರು.



ಬಾಗೇಪಲ್ಲಿ : ರೈತ ಸಂಘದ ಪ್ರತಿಭಟನೆ

ಬಾಗೇಪಲ್ಲಿ ಯಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಘಟಕ ತಾಲ್ಲೂಕು ಕಛೇರಿ ಮುಂದೆ ಪ್ರತಿಭಟನೆ ನಡೆಸಿತು.



ಫೇಸ್ ಬುಕ್‌ನಲ್ಲಿ



"ಮಿ.ಅನ್ಸಾರಿ,
ಎಲ್ಲಾ ಮುಸ್ಲಿಮರೂ ಭಯೋತ್ಪಾದಕರಲ್ಲ,
ಆದರೆ ಎಲ್ಲಾ ಭಯೋತ್ಪಾದಕೂ ಮುಸ್ಲಿಮರು".
"ಹೌದೌದು ಎಲ್ಲಾ ಮೋದಿಗಳೂ ವಂಚಕರಲ್ಲ,
ಆದರೆ ವಂಚಕರೆಲ್ಲಾ ಮೋದಿಗಳೇ ಅಂತ
ತಾನೆ"

– ಟಿ. ಸುರೇಂದ್ರ ರಾವ್





ಖಾಯಮಾತಿಗೆ ಆಗ್ರಹಿಸಿ ಪೌರ ಕಾರ್ಮಿಕರ ಪ್ರತಿಭಟನೆ

ಖಾಯಮಾತಿಗೆ ಆಗ್ರಹಿಸಿ ಪೌರ ಕಾರ್ಮಿಕರು ಪ್ರತಿಭಟನೆ ನಡೆಸಿದ ವರದಿಗಳು ತುಮಕೂರು ಮತ್ತು ಹಾಸನಗಳಿಂದ ಬಂದಿದೆ.

ಸುಡುವ ಬಿಸಿಲಲ್ಲಿ ಕೆಂಪು ಬಾವುಟ ಹಿಡಿದು "ನೇಮಕಾತಿ ಅಲ್ಲ, ನಮಗೆ ಖಾಯಂಮಾತಿ ಮಾಡಿ" ಎಂದು ಘೋಷಣೆಗಳ ಕೂಗುತ್ತ ನೂರಾರು ಪೌರ ಕಾರ್ಮಿಕರು ತುಮಕೂರಿನ ಟೌನ್ ಹಾಲ್ ವೃತ್ತದಿಂದ ಅಶೋಕ ರಸ್ತೆಯ ಮೂಲಕ ಜಿಲ್ಲಾಧಿಕಾರಿಗಳ ಕಛೇರಿ ತನಕ ಮೆರವಣಿಗೆ ನಡೆಸಿದರು.

ಮೂರು ತಿಂಗಳ ಬಾಕಿ ವೇತನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಹಾಗೂ ಎಲ್ಲಾ ಸ್ವಚ್ಚತಾ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವಂತೆ ಆಗ್ರಹಿಸಿ ಹಾಸನ ನಗರದ ಪೌರ ಕಾರ್ಮಿಕರು ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘಟನೆಯ ನೇತೃತ್ವದಲ್ಲಿ ನಗರ ಸಭೆಯ ಮುಂದೆ ಪ್ರತಿಭಟನೆಯನ್ನು ನಡೆಸಿದರು.

ಸಿರಿಯಾ ಬಾಂಬ್ ದಾಳಿ ವಿರುದ್ಧ ಪ್ರತಿಭಟನೆ

ಸಿರಿಯಾ ದೇಶದಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ಮಾರಣ ಹೋಮ ಖಂಡಿಸಿ ರಾಜ್ಯದ ಹಲವು ಕಡೆಗಳಿಂದ ಪ್ರತಿಭಟನೆ ನಡೆದ ವರದಿಗಳು ಬಂದಿವೆ. ಬೆಂಗಳೂರಿನ ಟೌನ್ ಹಾಲ್ ಎದುರು ಹಲವು ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು. ಹಾಸನ, ತುಮಕೂರು ಮತ್ತು ಕೋಲಾರದಿಂದಲೂ ಪ್ರತಿಭಟನೆ ನಡೆದ ವರದಿಗಳು ಬಂದಿವೆ.



ಬೆಂಗಳೂರಿನ ಟೌನ್ ಹಾಲ್



ಹಾಸನ




ಕೋಲಾರ

ಎಕ್ಸಿಡಿ ಕ್ಲಚ್ ಕಾರ್ಮಿಕರ ಹೋರಾಟಕ್ಕೆ ಜಯ

ಎಕ್ಸಿಡಿ ಕ್ಲಚ್ ಕಾರ್ಖಾನೆಯ ಆಡಳಿತವರ್ಗ ದಿನಾಂಕ 9.1.2018ರಿಂದ ಘೋಷಿಸಿದ ಅಕ್ರಮ ಬೀಗಮುದ್ರೆಯನ್ನು ಕರ್ನಾಟಕ ರಾಜ್ಯ ಸರ್ಕಾರ ದಿನಾಂಕ 27.02.2018ರಂದು ಆದೇಶ ಹೊರಡಿಸಿ ಕೂಡಲೇ ಜಾರಿಗೆ ಬರುವಂತೆ "ನಿಷೇದಗೊಳಿಸಿದೆ".

ಕಾರ್ಮಿಕರು ಆಡಳಿತವರ್ಗ ಕೇಳುವ ಕಾನೂನು ಬಾಹಿರ ಮುಚ್ಚಳಿಕೆ ಯಾವುದು ನೀಡದೆ ಕೆಲಸಕ್ಕೆ ಹಾಜರಾಗಲು ಅವಕಾಶ ನೀಡಬೇಕು ಎಂದಿದೆ ಆದೇಶ. ಕಳೆದ ಎರಡು ತಿಂಗಳುಗಳಿಂದ ಬದ್ಧತೆಯಿಂದ ಐಕ್ಯತೆಯಿಂದ ಕಾರ್ಮಿಕರು ನಡೆಸಿದ ಹೋರಾಟಕ್ಕೆ ಸಿಕ್ಕ ಜಯವಿದು. ಬೆದರಿಕೆಯೊಡ್ಡಿ ಕಾರ್ಮಿಕ ಸಂಘವನ್ನು ಮುರಿಯಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ನೀಡಿದ ಎಕ್ಸಿಡಿ ಕಾರ್ಮಿಕ ಸಂಗಾತಿಗಳಿಗೆ ಅಭಿನಂದನೆಗಳು.





ಕರ್ನಾಟಕವು 2018–19ರ ಬಜೆಟ್ಟಿನಲ್ಲಿ ಪ.ಜಾ. ಮತ್ತು ಪ.ಪಂ.ಗಳ ಉಪ ಯೋಜನೆಗಳಿಗೆ ತೆಗೆದಿಟ್ಟಿರುವ ಅನುದಾನ ಬಜೆಟ್ಟಿನ ಒಟ್ಟು ವೆಚ್ಚದ ಶೇ.13.40ರಷ್ಟಾಗುತ್ತದೆ ಮತ್ತು ಇದು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ(ಜಿಎಸ್‌ಡಿಪಿ) ಶೇ. 1.99 ರಷ್ಟಾಗುತ್ತದೆ. ಆದರೆ 2018–19ರಲ್ಲಿ ಕೇಂದ್ರವು ಪ.ಜಾ. ಮತ್ತು ಪ.ಪಂ.ಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಒಟ್ಟು ಹಣ, ಅದರ ಒಟ್ಟು ವೆಚ್ಚದ ಶೇ.3.89ರಷ್ಟಾಗುತ್ತದೆ ಮತ್ತು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ.0.51ರಷ್ಟಾಗುತ್ತದೆ.

ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳಂತೆ ಉಪಯೋಜನೆ ಕಾರ್ಯಕ್ರಮಗಳನ್ನು ನಿರ್ವಹಿಸಿದರೆ ಅವು ಪರಿಣಾಮಕಾರಿಯಾಗಿ ಫಲ ನೀಡುವುದು ಸಾಧ್ಯವಿಲ್ಲ. ಈ ಉಪಯೋಜನೆಗಳನ್ನು ಪರಿಶೀಲಿಸಿದರೆ ಅಲ್ಲಿ ಪ.ಜಾ. ಮತ್ತು ಪ.ಪಂ. ವಿಶಿಷ್ಟತೆಯು ಕಾಣುವುದಿಲ್ಲ. ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಉಪಯೋಜನೆ ಕಾರ್ಯಕ್ರಮಗಳಿಗೂ ಭಿನ್ನತೆಯೇನಿಲ್ಲ.



ಪ.ಜಾ ಮತ್ತು ಪ.ಪಂ. ಉಪಯೋಜನೆಗಳು: ಕೇಂದ್ರ ಮತ್ತು ಕರ್ನಾಟಕ ಬಜೆಟ್ಟುಗಳು

ಪ್ರೊ. ಟಿ. ಆರ್. ಚಂದ್ರಶೇಖರ

ಕರ್ನಾಟಕ ಸರ್ಕಾರವು 2013–14 ರಿಂದ ಪ.ಜಾ. ಮತ್ತು ಪ.ಪಂ.ಗಳ ಅಭಿವೃದ್ಧಿಗೆ ಅವರ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಬಜೆಟ್ಟಿನ ಯೋಜನಾ ವೆಚ್ಚದಲ್ಲಿ ಹಣವನ್ನು ಒದಗಿಸುವ ನಿಯಮವನ್ನು ಪಾಲಿಸಿಕೊಂಡು ಬರುತ್ತಿದೆ. ಆದರೆ 2017–18ರಲ್ಲಿ ಕೇಂದ್ರವು ಯೋಜನೆ ಮತ್ತು ಯೋಜನೇತರ ವೆಚ್ಚ ಅನ್ನುವ ಭಿನ್ನತೆಯನ್ನು ರದ್ದುಪಡಿಸಿತು. ಅದರಂತೆ ಕರ್ನಾಟಕವೂ ಅದನ್ನು ರದ್ದುಪಡಿಸಿದೆ. ಕರ್ನಾಟಕವು 2018–19ರ ಬಜೆಟ್ಟಿನಲ್ಲಿ ಪ.ಜಾ. ಮತ್ತು ಪ.ಪಂ.ಗಳ ಉಪ ಯೋಜನೆಗಳಿಗೆ ತೆಗೆದಿಟ್ಟಿರುವ ಅನುದಾನ ರೂ. 28,002 ಕೋಟಿ. ಇದು ಬಜೆಟ್ಟಿನ ಒಟ್ಟು ವೆಚ್ಚವಾದ ರೂ 2.09 ಲಕ್ಷ ಕೋಟಿಯಲ್ಲಿ ಶೇ.13.40ರಷ್ಟಾಗುತ್ತದೆ ಮತ್ತು ಇದು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ(ಜಿಎಸ್‌ಡಿಪಿ) ಶೇ. 1.99 ರಷ್ಟಾಗುತ್ತದೆ. ಆದರೆ 2018–19ರಲ್ಲಿ ಕೇಂದ್ರವು ಪ.ಜಾ. ಮತ್ತು ಪ.ಪಂ.ಗಳ ಅಭಿವೃದ್ಧಿಗೆ ಮೀಸಲಿಟ್ಟಿರುವ ಒಟ್ಟು ಹಣ ರೂ. 95,757 ಕೋಟಿ. ಇದು ಅದರ ಒಟ್ಟು ವೆಚ್ಚವಾದ ರೂ. 24.42 ಲಕ್ಷ ಕೋಟಿಯಲ್ಲಿ ಶೇ.3.89ರಷ್ಟಾಗುತ್ತದೆ ಮತ್ತು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ.0.51ರಷ್ಟಾಗುತ್ತದೆ. ಇಲ್ಲಿರುವ ವ್ಯತ್ಯಾಸವನ್ನು ಗಮನಿಸಬೇಕು. ಈ ವಿಷಯದಲ್ಲಿ ಅನುದಾದ ಮೊತ್ತಕ್ಕಿಂತ ಪರಿಶಿಷ್ಟರ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಕ್ರಮದಲ್ಲಿನ ಭಿನ್ನತೆಯು ಮುಖ್ಯವಾಗಿದೆ.

ನಮ್ಮ ದೇಶದಲ್ಲಿ ಚಾರಿತ್ರಿಕವಾಗಿ ಮತ್ತು ಸಾಂಪ್ರದಾಯಿಕವಾಗಿ ಪ್ರತ್ಯೇಕತನವನ್ನು, ಸಾಮಾಜಿಕ ತಾರತಮ್ಯವನ್ನು ಎದುರಿಸುತ್ತಿರುವ ವರ್ಗವೆಂದರೆ ಪ.ಜಾ. ಮತ್ತು ಪ.ಪಂ. ಸಮುದಾಯಗಳು. ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಈ ಸಮುದಾಯಗಳು ತಳಮಟ್ಟದಲ್ಲಿರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಒಟ್ಟು ಸಾಕ್ಷರತಾ ಪ್ರಮಾಣ 2011ರಲ್ಲಿ ಶೇ.75.40 ರಷ್ಟಿದ್ದರೆ ಪ.ಜಾತಿ ಮತ್ತು ಪ.ಪಂ. ಸಮುದಾಯಗಳ ಸಾಕ್ಷರತಾ ಪ್ರಮಾಣ ಕ್ರಮವಾಗಿ ಶೇ. 65.32 ಮತ್ತು ಶೇ.62.05. ಇಲ್ಲಿರುವ ಅಂತರವನ್ನು ಅಸಮಾನತೆಯ ಮಾಪನವಾಗಿ ಪರಿಗಣಿಸಬಹುದು. ಈ ಸಮುದಾಯಗಳ ಅಭಿವೃದ್ಧಿಗಾಗಿ ಐದನೆಯ ಯೋಜನೆಯ ಅವಧಿಯಲ್ಲಿ ಪ.ಜಾ. ಮತ್ತು ಪ.ಪಂ. ವಿಶೇಷ ಘಟಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಈಗ ಇವುಗಳನ್ನು ಪ.ಜಾ. ಮತ್ತು ಪ.ಪಂ. ಉಪಯೋಜನೆಗಳೆಂದು ಕರೆಯಲಾಗುತ್ತದೆ. ಕರ್ನಾಟಕ ಸರ್ಕಾರವು 2013–14ರಲ್ಲಿ ಈ ವರ್ಗಗಳಿಗೆ ಅವರ ಜನಸಂಖ್ಯೆಗನುಗುಣವಾಗಿ ಬಜೆಟ್ಟಿನಲ್ಲಿ ಅನುದಾನ ನೀಡಬೇಕೆಂಬ ಕಾನೂನನ್ನು ಜಾರಿಗೊಳಿಸಿತು ಮತ್ತು ಅದರಂತೆ ಅನುದಾನವನ್ನು ನೀಡುತ್ತಾ ಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ 2018–19 ಬಜೆಟ್ ಭಾಷಣದಲ್ಲಿ ಹೇಳಿರುವಂತೆ 2008–09 ರಿಂದ 2012–13 ರವರೆಗೆ ಈ ಉಪಯೋಜನೆಗಳಿಗೆ ಅಂದಿನ ಸರ್ಕಾರಗಳು ನೀಡಿದ್ದ ಒಟ್ಟು ಅನುದಾನ ರೂ.22,261 ಕೋಟಿ(ವಾರ್ಷಿಕ ರೂ.4452 ಕೋಟಿ). ಆದರೆ 2013–14 ರಿಂದ 2017–18ರ ಐದು ವರ್ಷಗಳ ಅವಧಿಯಲ್ಲಿ ಸಿದ್ದರಾಮಯ್ಯ ಸರ್ಕಾರ ಸದರಿ ಉಪಯೋಜನೆಗಳಿಗೆ ನೀಡಿರುವ ಮೊತ್ತ ರೂ. 88,395 ಕೋಟಿ (ವಾರ್ಷಿಕ ರೂ. 17,679 ಕೋಟಿ). ಅಂದರೆ 2008 ರಿಂದ 2013ರವರೆಗಿನ ಉಪಯೋಜನೆಗಳ ಅನುದಾನವು ಆ ಐದು ವರ್ಷಗಳ ಒಟ್ಟು ಬಜೆಟ್ ವೆಚ್ಚದ ಶೇ.6.12ರಷ್ಟಾಗಿದ್ದರೆ 2013–18ರವರೆಗಿನ ಉಪಯೋಜನೆಗಳ ಅನುದಾನವು ಆ ಐದು ವರ್ಷಗಳ ಬಜೆಟ್ ವೆಚ್ಚದ ಶೇ.12.29ರಷ್ಟಾಗುತ್ತದೆ. ಈ ಸರ್ಕಾರವು 2018–19ರಲ್ಲಿ ಉಪಯೋಜನೆಗಳಿಗೆ ನೀಡಿರುವ ಅನುದಾನ ರೂ. 19,900 ಕೋಟಿ(ಪ.ಜಾ. ಉಪಯೋಜನೆ) ಮತ್ತು ರೂ. 8,102 ಕೋಟಿ(ಪ.ಪಂ. ಉಪಯೋಜನೆ).

ರಾಜ್ಯದ ಒಟ್ಟು ಬಜೆಟ್ ವೆಚ್ಚದಲ್ಲಿ ಈ ಯೋಜನೆಗಳಿಗೆ ನೀಡಿರುವ ಮೊತ್ತ ಕ್ರಮವಾಗಿ ಶೇ. 9.57 ಮತ್ತು ಶೇ. 3.82ರಷ್ಟಾಗುತ್ತದೆ. ಜನಸಂಖ್ಯೆಗನುಗುಣವಾಗಿ ಅನುದಾನ ನೀಡುವ ಕ್ರಮವನ್ನು ಕೇಂದ್ರ ಸರ್ಕಾರವು ಪಾಲಿಸುತ್ತಿಲ್ಲ. ವಾಸ್ತವವಾಗಿ ಅದು ಉಪಯೋಜನೆ ಎನ್ನುವ ನುಡಿಯನ್ನು ಬಳಸುವುದನ್ನು ಕೈಬಿಟ್ಟಿದೆ. ಅದಕ್ಕೆ ಪ್ರತಿಯಾಗಿ ಅಲ್ಲಿನ ಆಳುವ ಪಕ್ಷದ ದಾನ–ದತ್ತಿ–ಉಂಬಳಿ ಸಿದ್ಧಾಂತಕ್ಕೆ ಅನುಗುಣವಾಗಿ ಇದನ್ನು ಪ.ಜಾ. ಕಲ್ಯಾಣ ಮತ್ತು ಪ.ಪಂ. ಕಲ್ಯಾಣ ಕಾರ್ಯಕ್ರಮ ಎಂದು ಕರೆದಿದೆ. ಅದು 2018–19ರಲ್ಲಿ ಪ.ಜಾ. ಕಲ್ಯಾಣಕ್ಕೆ ರೂ. 56,618 ಕೋಟಿ ಮತ್ತು ಪ.ಪಂ. ಕಲ್ಯಾಣಕ್ಕೆ ರೂ 39,134 ಕೋಟಿ ಅನುದಾನ ಮೀಸಲಿಟ್ಟಿದೆ. ಅಭಿವೃದ್ಧಿ ಅನ್ನುವುದು ಹಕ್ಕೇ ವಿನಾ ದತ್ತಿ–ದಾನವಲ್ಲ. 'ಕಲ್ಯಾಣ' ಅನ್ನುವುದು ಅಂತಹ ದತ್ತಿ–ದಾನದ ಸಂಗತಿಯಾಗಿದೆ. ಇಲ್ಲಿ ಅನುಕಂಪದ ಸಂಗತಿಯಿದೆ. ಅಭಿವೃದ್ಧಿಯು ಅನುಕಂಪದ ಸಂಗತಿಯಲ್ಲ.

ಉಪಯೋಜನೆಗಳು ಏಕೆ ಬೇಕು?

ಈಗಾಗಲೆ ಹೇಳಿರುವಂತೆ ಉಪಯೋಜನೆಗಳ ಬಗ್ಗೆ ಇಂದಿನ ಕೇಂದ್ರ ಸರ್ಕಾರಕ್ಕೆ ಮತ್ತು ಅಲ್ಲಿನ ಆಳುವ ಪಕ್ಷಕ್ಕೆ ನಂಬಿಕೆಯಿಲ್ಲ. ಎಲ್ಲರನ್ನೂ ಒಂದೇ ಮಾನದಂಡದಲ್ಲಿ ಅದು ಕಾಣುವ ದೃಷ್ಟಿಕೋನವನ್ನು ಅದು ಅಳವಡಿಸಿಕೊಂಡಿದೆ. ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರು ಪ್ರತಿಪಾದಿಸಿದ ಸಕಾರಾತ್ಮಕ ತಾರತಮ್ಯ ನೀತಿಯನ್ನು ಇಂದಿನ ಕೇಂದ್ರ ಸರ್ಕಾರವು ಒಪ್ಪುವುದಿಲ್ಲ. ಎಲ್ಲರನ್ನು ಒಂದೇ ಅಭಿವೃದ್ಧಿ ಯೋಜನೆಯಲ್ಲಿ ಕೂಡಿಹಾಕುವ ಕ್ರಮ ಅದರದ್ದಾಗಿದೆ. ಅದರ ಘೋಷಣೆ 'ಸಬ್ ಕಾ ಸಾತ್ ಸಬ್ ಕಾ ವಿಕಾಸ್'. ಅಮರ್ತ್ಯ ಸೇನ್ ಹೇಳುವ ಧಾರಣಾ ಸಾಮರ್ಥ್ಯ ಹೆಚ್ಚಿರುವವರಿಗೂ ಮತ್ತು ಕಡಿಮೆಯಿರುವವರಿಗೂ ಒಂದೇ ಕ್ರಮವನ್ನು ಅನುಸರಿಸಬೇಕೆಂಬುದು ಇಂದಿನ ಕೇಂದ್ರ ಸರ್ಕಾರದ ಸಿದ್ಧಾಂತವಾಗಿದೆ. ಇದನ್ನು ನಾವು ಅಖಂಡ ಅಥವಾ ರಾಷ್ಟ್ರೀಯ ಏಕತಾ ಸಿದ್ಧಾಂತ ಎಂದು ಕರೆಯಬಹುದು.

ಈಗಾಗಲೆ ಹೇಳಿರುವಂತೆ ನಮ್ಮದು ಅಖಂಡ ಸಮಾಜವೂ ಅಲ್ಲ ಮತ್ತು ಏಕಾತ್ಮಕ ವ್ಯವಸ್ಥೆಯೂ ಅಲ್ಲ. ಇದು ಬಹುವಚನ ಸಮಾಜ. ಇಲ್ಲಿ ಅಭಿವೃದ್ಧಿಯ ಫಲಗಳು ಸಮಾಜದ ಎಲ್ಲರಿಗೂ ಸಮಾನವಾಗಿ ದೊರೆಯುವುದಿಲ್ಲ. ಉಳ್ಳವರು, ಮೇಲುವರ್ಗದವರು, ಉನ್ನತ ಜಾತಿಗಳು ಅಭಿವೃದ್ಧಿಯ ಫಲಗಳನ್ನು ಹೆಚ್ಚು ಹೆಚ್ಚು ದೋಚಿಕೊಂಡು ಬಿಡುತ್ತವೆ. ಏಕೆಂದರೆ ಅವರಿಗೆ ಧಾರಣಾ ಸಾಮರ್ಥ್ಯ ಸದೃಢವಾಗಿರುತ್ತದೆ. ಪರಿಶಿಷ್ಟರ ಧಾರಣಾ ಸಾಮರ್ಥ್ಯವು ಅತ್ಯಂತ ಕೆಳಮಟ್ಟದಲ್ಲಿದೆ. ಈ ಬಗೆಯ ಅಸಮಾನತೆಯನ್ನು ದೃಢಪಡಿಸುವ ಅನೇಕ ಅಧ್ಯಯನಗಳು ಇಂದು ನಮಗೆ ಲಭ್ಯವಿವೆ. ಸಮಾನತೆಯಿಂದ ಕೂಡಿರುವ ಸಮಾಜದಲ್ಲಿ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಕ್ರಮಗಳು ಸಮಾನವಾಗಿದ್ದರೆ ಅಲ್ಲಿ ಅಸಮಾನತೆಯು ಉಲ್ಬಣಗೊಳ್ಳುತ್ತದೆ. ವಿನಾ ಕಡಿಮೆಯಾಗುವುದಿಲ್ಲ. ಪ್ರಖ್ಯಾತ ಸಮಾಜ ವಿಜ್ಞಾನಿ ಜಾನ್ ರಾಲ್ಸ್ ಇದನ್ನು ಭಿನ್ನತೆಯ ನಿಯಮ ಅನ್ನುತ್ತಾನೆ. ಅಸಮಾನತೆಯಿಂದ ಕೂಡಿರುವ ಸಮಾಜದಲ್ಲಿ ಅಭಿವೃದ್ಧಿಯ ಫಲಗಳು ಹೆಚ್ಚು ಹೆಚ್ಚಾಗಿ ವಂಚಿತರಿಗೆ, ಸಮಾಜದಲ್ಲಿ ಅಂಚಿನಲ್ಲಿರುವವರಿಗೆ, ಸಾಮಾಜಿಕ ಪ್ರತ್ಯೇಕತನವನ್ನು ಅನುಭವಿಸುತ್ತಿರುವವರಿಗೇ ಪ.ಜಾ. ಮತ್ತು ಪ.ಪಂ. ಉಪಯೋಜನೆಗಳು.



ಉಪಯೋಜನೆಗಳ ಕಾರ್ಯಸಾಧನೆ

ಇದರಿಂದ ಪರಿಶಿಷ್ಟರಿಗೆ ಒಂದಲ್ಲ ಒಂದು ರೀತಿಯಲ್ಲಿ ನೆರವಾಗುತ್ತಿರಬಹುದು. ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಆ ಜಿಲ್ಲೆಗಳ ಒಟ್ಟು ಜನಸಂಖ್ಯೆಯಲ್ಲಿ ಪ.ಜಾ. ಮತ್ತು ಪ.ಪಂ.ಗಳ ಜನಸಂಖ್ಯೆಯ ಪ್ರಮಾಣ ಶೇ30 ಮೀರುತ್ತದೆ. ಇದು ರಾಜ್ಯಮಟ್ಟದಲ್ಲಿ ಶೇ24ರಷ್ಟಿದೆ. ಈ ಸಂಗತಿಗಳ ಕಡೆಗೆ ಸರ್ಕಾರ ಗಮನ ನೀಡಬೇಕಾಗುತ್ತದೆ. ವಾಸ್ತವವಾಗಿ ಪ.ಜಾ. ಮತ್ತು ಪ.ಪಂ.ಗಳ ಅಭಿವೃದ್ಧಿ ಅಂದರೆ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿ ಎಂದೇ ಭಾವಿಸಬೇಕಾಗುತ್ತದೆ. ಆದರೆ ಇದರ ಅನುಷ್ಠಾನ ತಳಮಟ್ಟದಲ್ಲಿ ತುಂಬ ದುರ್ಬಲವಾಗಿದೆ. ಇದರ ಆಡಳಿತ ಹೇಳಿಕೊಳ್ಳುವಂತಿಲ್ಲ. ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಉಪಯೋಜನೆಗಳನ್ನು ರೂಪಿಸಲಾಗುತ್ತಿದೆ. ಆದರೆ ಪರಿಶಿಷ್ಟರ ಪ್ರಾದೇಶಿಕ ಆಯಾಮವನ್ನು ಗಮನಿಸಬೇಕು.

ಮೊದಲನೆಯದಾಗಿ ಕರ್ನಾಟಕದಲ್ಲಿ ಪ.ಜಾ. ಮತ್ತು ಪ.ಪಂ. ಉಪಯೋಜನೆಗಳಿಗೆ ಅನುದಾನವನ್ನೇನೊ ಬಜೆಟ್ಟಿನಲ್ಲಿ ಘೋಷಿಸಲಾಗುತ್ತದೆ. ಆದರೆ ಅದರಲ್ಲಿ ಎಲ್ಲವನ್ನು ಬಿಡುಗಡೆ ಮಾಡುವುದಿಲ್ಲ. ಬಿಡುಗಡೆ ಮಾಡಿದ್ದನ್ನು ಪೂರ್ತಿ ಖರ್ಚು ಮಾಡುವುದಿಲ್ಲ.

ಎರಡನೆಯದಾಗಿ ಎಲ್ಲಕ್ಕಿಂತ ಮುಖ್ಯವಾಗಿ ಕೇಂದ್ರ ಮತ್ತು ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಉಪಯೋಜನೆಯಲ್ಲಿಯೂ 250–300 ಕಾರ್ಯಕ್ರಮಗಳಿರುತ್ತವೆ ಮತ್ತು ಅವುಗಳಲ್ಲಿ 20–30 ಲಕ್ಷ ರೂಪಾಯಿಯ ಕಾರ್ಯಕ್ರಮಗಳಿಂದ ನೂರಾರು ಕೋಟಿಯ ರೂಪಾಯಿಗಳ ಕಾರ್ಯಕ್ರಮಗಳು ಇರುತ್ತವೆ. ಹೀಗೆ ಅನುದಾನವನ್ನು ಸಣ್ಣ ಸಣ್ಣ ಮೊತ್ತದಲ್ಲಿ ನೂರಾರು ಕಾರ್ಯಕ್ರಮಗಳ ಮೇಲೆ ಹರಡುವುದರಿಂದ ಅಲ್ಲಿ ಜನರ ಬದುಕಿನ ಮೇಲೆ ಕಾಣಬಹುದಾದಂತಹ ಪರಿಣಾಮ ಉಂಟಾಗುವುದು ಸಾಧ್ಯವಿಲ್ಲ. ಒಟ್ಟು 38 ಇಲಾಖೆಗಳಿಗೆ ಅನುದಾನವನ್ನು ಎರಡೂ ಉಪಯೋಜನೆಗಳಲ್ಲಿ ಎರಡೂ ವಲಯಗಳಿಗೆ ಸಂಬಂಧಿಸಿದಂತೆ ಹಂಚಲಾಗುತ್ತದೆ. ಈ ಬಗೆಯ ಸಾಮಾನ್ಯೀಕರಣದಿಂದಾಗಿ ಉಪಯೋಜನೆಗಳು ನಿರ್ದಿಷ್ಠ ಪರಿಣಾಮವನ್ನು ಬೀರುವುದರಲ್ಲಿ ವಿಫಲವಾಗಿವೆ.

ಮೂರನೆಯದಾಗಿ ಇದು ರಾಜ್ಯದ ರಾಜಧಾನಿ–ಕೇಂದ್ರಿತ ಕಾರ್ಯಕ್ರಮವಾಗಿರುವಂತೆ ಕಾಣುತ್ತದೆ. ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಮಟ್ಟದಲ್ಲಿ ಸದರಿ ಕಾರ್ಯಕ್ರಮಗಳ ಪರಿಣಾಮ ಕಂಡುಬರುವುದಿಲ್ಲ. ಉಪಯೋಜನೆಗೆ ನೀಡುವ ಅನುದಾನದಲ್ಲಿ ಎರಡು ವಲಯಗಳಿವೆ. ಒಂದು ರಾಜ್ಯ ವಲಯ ಮತ್ತು ಎರಡು ಜಿಲ್ಲಾ ವಲಯ. ರಾಜ್ಯದ 2018–19ನೆಯ ಸಾಲಿನ ಬಜೆಟ್‌ನ ಪ.ಜಾ. ಮತ್ತು ಪ.ಪಂ. ಉಪಯೋಜನೆಗಳಲ್ಲಿ ರಾಜ್ಯ ವಲಯದ ಪಾಲು ಶೇ.80ಕ್ಕಿಂತ ಅಧಿಕವಿದ್ದರೆ ಜಿಲ್ಲಾ ವಲಯದ ಪಾಲು ಶೇ.20ಕ್ಕಿಂತ ಕಡಿಮೆಯಿದೆ. ಆದರೆ ಯಾವುದೇ ವಲಯವಿರಲಿ, ಅವುಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳು ಮತ್ತು ಅಧಿಕಾರಿ ವರ್ಗ ಒಂದೇ

ಪುಟ 11 ಕ್ಕೆ

ಅಲ್ಪಸಂಖ್ಯಾತರಿಗೆ ಬಜೆಟ್ಟಿನಲ್ಲೇನಿದೆ?

ಕೇಂದ್ರ ಸರ್ಕಾರದ ಅಖಂಡ ನೀತಿಯ ಪರಿಣಾಮವಾಗಿ ಹೆಚ್ಚಿನ ಹಾನಿ ಅನುಭವಿಸುತ್ತಿರುವವರು ಅಲ್ಪಸಂಖ್ಯಾತರು. ಇದನ್ನು ಎಚ್ಚರಿಕೆಯಿಂದ ಗಮನಿಸಬೇಕು. ಕೇಂದ್ರ ಸರ್ಕಾರವು ಅಲ್ಪಸಂಖ್ಯಾತರಿಗೆ 2018–19ರ ಬಜೆಟ್ಟಿನಲ್ಲಿ ನೀಡಿರುವ ಅನುದಾನ ರೂ 4700 ಕೋಟಿ. ಆದರೆ ಕರ್ನಾಟಕ ಸರ್ಕಾರವು ಈ ಬಾಬ್ತಿಗೆ ರೂ2281 ಕೋಟಿ ತೆಗೆದಿರಿಸಿದೆ. ಕೇಂದ್ರದ ಅಲ್ಪಸಂಖ್ಯಾತರ ಬಜೆಟ್ ಒಟ್ಟು ಬಜೆಟ್ ವೆಚ್ಚದಲ್ಲಿ ಶೇ. 0.20 ರಷ್ಟಾದರೆ ಕರ್ನಾಟಕದ್ದು ಶೇ. 0.95ರಷ್ಟಾಗುತ್ತದೆ.



ಪಾಕಿಸ್ತಾನದೊಂದಿಗೆ ಮಾತುಕತೆಗಳಿಲ್ಲ ಎಂಬ ನಿಲುವನ್ನು ಕೈಬಿಡಬೇಕು



ಪಾಕಿಸ್ತಾನದೊಂದಿಗೆ ಮಾತುಕತೆಗಳಿಗೆ ಎಲ್ಲ ದಾರಿಗಳನ್ನು ಮುಚ್ಚಿ ಮೋದಿ ಸರಕಾರ ಸ್ವತಃ ತನ್ನನ್ನು ಒಂದು ಮೂಲೆಗೆ ತಳ್ಳಿಕೊಂಡಿದೆ. ಮಿಂಚಿನ ಪ್ರಹಾರಗಳ ನಂತರವೂ ಕಣಿವೆಯೊಳಗೆ ಉಗ್ರಗಾಮಿ ದಾಳಿಗಳು ನಿಂತಿಲ್ಲ. ಮತ್ತು ಹತೋಟಿ ರೇಖೆಯಲ್ಲಿ ಕದನವಿರಾಮ ಚಿಂದಿಯಾಗಿದೆ. ಭದ್ರತಾ ಪಡೆಗಳು ಮತ್ತು ನಾಗರಿಕರು ಗಾಯಾಳುಗಳು ಮತ್ತು ಸಾವುಗಳ ಮೂಲಕ ತೆರುವ ಬೆಲೆಗಳು ಹೆಚ್ಚುತ್ತಲೇ ಸಾಗಿವೆ. ಕಾಶ್ಮೀರದ ಬಗ್ಗೆ ಏನೆಲ್ಲ ಅಬ್ಬರ ಮತ್ತು ರಾಷ್ಟ್ರೀಯವಾದಿಯೆನ್ನುವ ನಿಲುವುಗಳೇನೇ ಇದ್ದರೂ, ಪಾಕಿಸ್ತಾನ ದೊಂದಿಗೆ ಒಂದು ಸಂವಾದ ಜಮ್ಮು ಮತ್ತು ಕಾಶ್ಮೀರ ಪ್ರಶ್ನೆಯ ಒಂದು ರಾಜಕೀಯ ಇತ್ಯರ್ಥಕ್ಕೆ ಬರುವುದರ ಅನಿವಾರ್ಯ ಭಾಗ ಎಂಬುದನ್ನು ಮೋದಿ ಸರಕಾರ ಅರಿಯಬೇಕಾಗಿದೆ.



ಪ್ರಕಾಶ ಕಾರಟ್

ಪಾಕಿಸ್ತಾನ ಕುರಿತಂತೆ ಮೋದಿ ಸರಕಾರದ ಧೋರಣೆ ಮುಂದಿನ ದಾರಿಗಾಣದೆ ನಿಂತಿದೆ. ಆಗಸ್ಟ್ 2015 ರಲ್ಲಿ ಸಂವಾದವನ್ನು ನಿಲ್ಲಿಸಿದ ಮೇಲೆ ಭಯೋತ್ಪಾದನೆ ನಿಲ್ಲುವ ವರೆಗೆ ಮಾತುಕತೆ ಇಲ್ಲ ಎಂಬ ನಿಲುವನ್ನು ಸರಕಾರ ಗಟ್ಟಿಯಾಗಿ ತಳೆದಿದೆ. ಸಪ್ಟಂಬರ್ 2016ರಲ್ಲಿ ಹತೋಟಿ ರೇಖೆಯ ಆಚೆ ಮಿಂಚಿನ ಪ್ರಹಾರಗಳು ಗಡಿಯಾಚೆಯಿಂದ ಬರುವ ಭಯೋತ್ಪಾದನೆಗೆ ಭಾರತದ ದೃಢ ಪ್ರತಿಕ್ರಿಯೆ ಎಂದು ಡಂಗುರ ಸಾರಲಾಗಿತ್ತು. ಆಗಿನ ರಕ್ಷಣಾ ಮಂತ್ರಿ ಮನೋಹರ ಪರ್ರಿಕರ್ ಕಳೆದ ಕೆಲವು ವರ್ಷಗಳಲ್ಲಿ ಸತತ ಕದನ ವಿರಾಮ ಉಲ್ಲಂಘನೆಗಳ ನಂತರ ಇದು ಏಕಮಾತ್ರ ತಕ್ಕ ಉತ್ತರವಾಗಿತ್ತು ಎಂದು ಹೇಳಿಕೊಂಡಿದ್ದರು.

ಆದರೆ ಮಿಂಚಿನ ಪ್ರಹಾರಗಳ ನಂತರದ ಘಟನೆಗಳು ಹತೋಟಿ ರೇಖೆಯ ಆಚೆಯಿಂದ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಅಂತರ್ರಾಷ್ಟ್ರೀಯ ಗಡಿಯಾಚೆಯಿಂದ ಶೆಲ್‌ದಾಳಿ ಮತ್ತು ಗುಂಡಿನ ಹಾರಾಟಗಳ ನಿರಂತರ ಹೆಚ್ಚಳವನ್ನು ತೋರಿಸುತ್ತಿದೆ. ನವಂಬರ್ 2003ರಲ್ಲಿ ಕದನ ವಿರಾಮ ಆದಂದಿನಿಂದ, 2017 ಇದುವರೆಗಿನ ಅತಿ ಹೆಚ್ಚು ಕದನ ವಿರಾಮ ಉಲ್ಲಂಘನೆಗಳನ್ನು ಕಂಡಿದೆ. ಹತೋಟಿ ರೇಖೆಯ ಬಳಿ 860 ಮತ್ತು ಅಂತರ್ರಾಷ್ಟ್ರೀಯ ಗಡಿಯಲ್ಲಿ ಇನ್ನೂ 120 ಘಟನೆಗಳು ನಡೆದಿವೆ.

ಕಳೆದ ಮೂರು ತಿಂಗಳಲ್ಲಿ –ಡಿಸೆಂಬರ್ 2017 ಮತ್ತು 2018ರ ಮೊದಲ ಎರಡು ತಿಂಗಳುಗಳಲ್ಲಿ– ಪರಿಸ್ತಿತಿ ಹದಗೆಟ್ಟಿದೆ. ಈ ವರ್ಷದ ಮೊದಲ ಎರಡು ತಿಂಗಳಲ್ಲಿ 400 ಉಲ್ಲಂಘನೆಗಳು ನಡೆದಿವೆ. ಭಾರತ ಶೆಲ್ ದಾಳಿ ಮತ್ತು ಗುಂಡು ಹಾರಾಟಗಳಲ್ಲಿ 16 ಸೈನಿಕರನ್ನು ಕಳಕೊಂಡಿದೆ ಮತ್ತು ಪಾಕಿಸ್ತಾನ 23 ಸೈನಿಕರನ್ನು ಕಳಕೊಂಡಿರುವುದಾಗಿ ವರದಿಯಾಗಿದೆ.

ಸತತ ಶೆಲ್‌ದಾಳಿಗಳು ಮತ್ತು ಫಿರಂಗಿ ಗುಂಡುಗಳು ಎರಡೂ ಕಡೆಗಳಲ್ಲಿ ಹತ್ತಾರು ನಾಗರಿಕ ಜೀವಗಳನ್ನು ಬಲಿತೆಗೆದುಕೊಂಡಿವೆ. ಭಾರತದ ಕಡೆಯಲ್ಲಿ ಸಾವಿರಾರು ಮಂದಿಯನ್ನು ಅವರ ಮನೆಗಳಿಂದ ಖಾಲಿ ಮಾಡಿಸಬೇಕಾಗಿ ಬಂದಿದೆ. ಉರಿ ವಲಯದಲ್ಲಿ 2000 ಗ್ರಾಮಸ್ಥರು ಫೆಬ್ರುವರಿ 22ರಿಂದ ಉರಿ ಪಟ್ಟಣದಲ್ಲಿ ಆಶ್ರಯ ಪಡೆದಿದ್ದಾರೆ. ಶಾಲೆಗಳು ಆಗಾಗ ಮುಚ್ಚುತ್ತಿವೆ ಮತ್ತು ಜೀವನಾಧಾರಗಳು ಅಸ್ತವ್ಯಸ್ತಗೊಂಡಿವೆ.

ಮಿಂಚಿನ ಪ್ರಹಾರಗಳು ಸೇನಾ ಮತ್ತು ಬಿಎಸ್‌ಎಫ್ ಕ್ಯಾಂಪುಗಳ ಮೇಲೆ ಗಡಿಯಾಚೆಯಿಂದ ಉಗ್ರಗಾಮಿಗಳ ದಾಳಿಗಳನ್ನೇನೂ ನಿಲ್ಲಿಸಿಲ್ಲ. ಇದರಲ್ಲಿ ಇತ್ತೀಚಿನದೆಂದರೆ, ಜಮ್ಮುನಲ್ಲಿ ಸುಂಜ್ವಾನ್ ಸೇನಾ ಕ್ಯಾಂಪಿನ ಮೇಲೆ ಮತ್ತು ಶ್ರೀನಗರದಲ್ಲಿ ಸಿಆರ್‌ಪಿಎಫ್ ಕ್ಯಾಂಪಿನ ಮೆಲೆ ನಡೆದಿರುವ ದಾಳಿಗಳು.

ಎಲ್ಲ ಪ್ರತಿಭಟನೆಗಳು ಮತ್ತು ಪ್ರತ್ಯೇಕತಾವಾದಿ ಬೇಡಿಕೆಗಳು ಪಾಕಿಸ್ತಾನೀ–ಪ್ರೇರಿತ ಎಂಬ ಮೋದಿ ಸರಕಾರದ ಏಕ ಆಯಾಮದ ನೋಟ ಜಮ್ಮು ಮತ್ತು ಕಾಶ್ಮೀರದೊಳಗೆ ರಾಜಕೀಯ ಸಂವಾದಕ್ಕೆ ಒಂದು ಗಂಭೀರ ಹೆಜ್ಜೆಯಿಡದಂತೆ ತಡೆದಿಟ್ಟಿದೆ. ಅದರ ಕೇವಲ ಭದ್ರತಾ ಮತ್ತು ಮಿಲಿಟರಶಾಹಿ ತೆರನ ನಿಲುವು ಕಣಿವೆಯಲ್ಲಿ ಪರಿಸ್ತಿತಿಯನ್ನು ಮತ್ತಷ್ಟು ಹದಗೆಡಿಸಿದೆ.

ಇಂತಹ ಒಂದು ಸನ್ನಿವೇಶದಲ್ಲಿಯೇ ಮುಖ್ಯಮಂತ್ರಿ ಮೆಹಬೂಬ ಮುಫ್ತಿ ವಿಧಾನ ಸಭೆಯಲ್ಲಿ "ರಕ್ತಪಾತವನ್ನು ನಾವು ತಡೆಯಬೇಕಾದರೆ ಪಾಕಿಸ್ತಾನದೊಂದಿಗೆ ಸಂವಾದ ಅಗತ್ಯ ..ಯುದ್ಧ ಒಂದು ಆಯ್ಕೆಯಲ್ಲವಾದ್ದರಿಮದ ನಾವು ಮಾತಾಡಲೇ ಬೇಕು" ಎಂದು ಹೇಳಿರುವುದು. ಇದನ್ನು ತಕ್ಷಣವೇ ಬಿಜೆಪಿ ಮತ್ತು ಕೇಂದ್ರ ಸರಕಾರ ಅಲ್ಲಗಳೆದಿವೆ. ಬಿಜೆಪಿ ಪ್ರಧಾನ ಕಾರ್ಯದರ್ಶಿ ರಾಮ ಮಾಧವ್ ಭಯೋತ್ಪಾದನೆ ಮತ್ತು ಮಾತುಕತೆ ಜತೆಜತೆಯಾಗಿ ಹೋಗಲು ಸಾಧ್ಯವಿಲ್ಲ ಎಂದು ಪ್ರತ್ಯುತ್ತರ ನೀಡಿದ್ದಾರೆ.

ಪಾಕಿಸ್ತಾನದೊಂದಿಗೆ ಮಾತುಕತೆಗಳಿಗೆ ಎಲ್ಲ ದಾರಿಗಳನ್ನು ಮುಚ್ಚಿ ಮೋದಿ ಸರಕಾರ ಸ್ವತಃ ತನ್ನನ್ನು ಒಂದು ಮೂಲೆಗೆ ತಳ್ಳಿಕೊಂಡಿದೆ. ಕಣಿವೆಯೊಳಗೆ ಉಗ್ರಗಾಮಿ ದಾಳಿಗಳು ನಿಂತಿಲ್ಲ. ಮತ್ತು ಹತೋಟಿ ರೇಖೆಯಲ್ಲಿ ಕದನವಿರಾಮ ಚಿಂದಿಯಾಗಿದೆ. ಭದ್ರತಾ ಪಡೆಗಳು ಮತ್ತು ನಾಗರಿಕರು ಗಾಯಾಳುಗಳು ಮತ್ತು ಸಾವುಗಳ ಮೂಲಕ ತೆರುವ ಬೆಲೆಗಳು ಹೆಚ್ಚುತ್ತಲೇ ಸಾಗಿವೆ.

ಈ ಕಣ್ಣುಟ್ಟಿ ಕಟ್ಟಿಕೊಂಡಿರುವ ತಿಕ್ಕಾಟದ ನಿಲುವನ್ನು ಕೈಬಿಡುವ ತುರ್ತು ಅಗತ್ಯ ಇದೆ. ಎಲ್ಲಕ್ಕೂ ಮೊದಲು, ಹತೋಟಿ ರೇಖೆಯಲ್ಲಿ ಮತ್ತು ಜಮ್ಮ ಮತ್ತು ಕಾಶ್ಮೀರದಲ್ಲಿ ಅಂತರ್ರಾಷ್ಟ್ರೀಯ ಗಡಿಯಲ್ಲಿ ಕದನ ವಿರಾಮವನ್ನು ಮತ್ತು ಶಂತಿಯನ್ನು ಮರುಸ್ಥಾಪಿಸಲು ಮಾತುಕತೆಗಳು ನಡೆಯಬೇಕು. ವಿಶ್ವಾಸ ಕುದುರಿಸುವ ಕ್ರಮಗಳನ್ನು ಆರಂಭಿಸಬೇಕು. ಇದನ್ನು, ಗಡಿಯಾಚೆಯಿಂದ ಉಗ್ರಗಾಮಿಗಳ ನುಸುಳಿಕೆಯನ್ನು ನಿಲ್ಲಿಸಲು ದೃಢ ಕ್ರಮಗಳನ್ನು ಕೈಗೊಳ್ಳುವುದನ್ನು ಮುಂದುವರೆಸುತ್ತೇವೆ ಎಂದು ಸ್ಪಷ್ಟ ಪಡಿಸುತ್ತಲೇ ಸರಕಾರ ಇದನ್ನು ಮಾಡಬಹುದಾಗಿದೆ.

ಅದೇ ಕಾಲದಲ್ಲಿ, ಪಾಕಿಸ್ತಾನದೊಂದಿಗೆ ಒಂದು ಸಮಗ್ರ ಸಂವಾದವನ್ನು ಪುನರಾರಂಭಿಸಲು ಸರಕಾರ ಮಾತುಕತೆಗಳನ್ನು ಆರಂಭಿಸಬೇಕು. "ಮಾತುಕತೆಗಳಿಲ್ಲ" ಎಂಬ ನಿಲುವು ತಳೆದಿರುವಾಗಲೇ, ಎರಡೂ ದೇಶಗಳ ರಾಷ್ಟ್ರೀಯ ಭದ್ರತಾ ಸಲಹೆಗಾರರು ಮೂರನೇ ದೇಶಗಳಲ್ಲಿ ಭೇಟಿಯಾಗಿದ್ದಾರೆ. ಮಾರ್ಚ್‌ತಿಂಗಳ ಮೂರನೇ ವಾರದಲ್ಲಿ ದಿಲ್ಲಿಯ ಡಬ್ಲ್ಯುಟಿಒ ಮಂತ್ರಿಮಟ್ಟದ ಅನೌಪಚಾರಿಕ ಸಭೆಯಲ್ಲಿ ಭಾಗವಹಿಸಲು ಭಾರತ ಪಾಕಿಸ್ತಾನದ ವಾಣಿಜ್ಯ ಮಂತ್ರಿಗಳನ್ನು ಕೂಡ ಆಹ್ವಾನಿಸಿದೆ. ಇದನ್ನು ಅನುಸರಿಸಿ ಸಂವಾದವನ್ನು ಮತ್ತೆ ಆರಂಭಿಸುವುದು ಹೇಗೆ ಎಂಬ ಬಗ್ಗೆ ಮಾತುಕತೆಗಳು ನಡೆಯಬೇಕು. ಕಾಶ್ಮೀರದ ಬಗ್ಗೆ ಏನೆಲ್ಲ ಅಬ್ಬರ ಮತ್ತು ರಾಷ್ಟ್ರೀಯವಾದಿಯೆನ್ನುವ ನಿಲುವುಗಳು ಏನೇ ಇದ್ದರೂ, ಪಾಕಿಸ್ತಾನದೊಂದಿಗೆ ಒಂದು ಸಂವಾದ ಜಮ್ಮು ಮತ್ತು ಕಾಶ್ಮೀರ ಪ್ರಶ್ನೆಯ ಒಂದು ರಾಜಕೀಯ ಇತ್ಯರ್ಥಕ್ಕೆ ಬರುವುದರ ಅನಿವಾರ್ಯ ಭಾಗ ಎಂಬುದನ್ನು ಮೋದಿ ಸರಕಾರ ಅರಿಯಬೇಕಾಗಿದೆ.

ಪಿಎನ್‌ಬಿ ಹಗರಣದ ಸ್ವತಂತ್ರ ತನಿಖೆ ನಡೆಯಬೇಕು–ಸುಪ್ರಿಂ ಕೋರ್ಟ್ ಮೇಲುಸ್ತುವಾರಿಯಲ್ಲಿ ನಡೆಯಬೇಕು–ಪ್ರಧಾನ ಮಂತ್ರಿಗಳ ಕಚೇರಿಯ ಪಾತ್ರದ ತನಿಖೆ ಆಗಬೇಕು–ಹಣಕಾಸು ಮಂತ್ರಿಗಳು ನೈತಿಕ ಹೊಣೆಯಿಂದ ರಾಜೀನಾಮೆ ನೀಡಬೇಕು

ಜನ ಏಕತಾ ಜನ ಅಧಿಕಾರ್ ಆಂದೋಲನದ ಆಗ್ರಹ

ಸಾಮೂಹಿಕ ಸಂಘಟನೆಗಳು, ವರ್ಗ ಸಂಘಟನೆಗಳು ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯಾದ ಜನ ಏಕತಾ ಜನ ಅಧಿಕಾರ್ ಆಂದೋಲನ(ಜೆಇಜೆಎಎ)ಪಂಜಾಬ್ ನ್ಯಾಶನಲ್ ಬ್ಯಾಂಕಿನ (ಪಿಎನ್‌ಬಿ) ಹಗರಣವನ್ನು ತಡೆಯುವಲ್ಲಿ ನರೇಂದ್ರ ಮೋದಿ ಸರಕಾರ ಅತ್ಯಂತ ವಿಫಲವಾಗಿದೆ, ಅದು ಮಾಡಿದ್ದು ಮತ್ತು ಮಾಡಿಲ್ಲದಿರುವುದು ಈ ಕ್ರಿಮಿನಲ್ ಕೃತ್ಯಕ್ಕೆ ಕಾರಣವಾಗಿದೆ, ಮೊದಲೇ ಮಾಹಿತಿ ಇದ್ದರೂ ಪ್ರಮುಖ ಆರೋಪಿಗಳು ದೇಶ ಬಿಟ್ಟು ಓಡಿ ಹೋಗುವಲ್ಲಿ ಅದರ ಪಾತ್ರವೂ ಇದೆ ಎಂದು ಬಲವಾಗಿ ಖಂಡಿಸಿದೆ. ಇದರ ತನಿಖೆಯಾಗಬೇಕು ಎಂದು ಆಗ್ರಹಿಸಿದೆ

ಈ ಹಗರಣದ ಪ್ರಮುಖ ಅಪರಾಧಿಗಳಾದ ನೀರವ್ ಮೋದಿ ಮತ್ತು ಮೆಹುಲ್ ಚೊಕ್ಸಿಗೆ ಪ್ರಧಾನ ಮಂತ್ರಿಗಳು ನಿಕಟವಾಗಿರುವ ಸೂಚನೆಗಳು ಇವೆ. ಆದ್ದರಿಂದ ಸುಪ್ರಿಂ ಕೋರ್ಟ್ ಈ ತನಿಖೆಯ ಮೇಲುಸ್ತುವಾರಿ ನಡೆಸಬೇಕು, ಸಿಬಿಐ ತನಿಖಾ ತಂಡ ಪ್ರಧಾನ ಮಂತ್ರಿಗಳ ಕಚೇರಿಯ ಪ್ರಭಾವದಿಂದ ಮುಕ್ತವಾಗಿರುವಂತೆ ನಿಗಾ ವಹಿಸಬೇಕು ಎಂದು ಜೆಇಜೆಎಎ ಹೇಳಿದೆ.

ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಈ ಹಗರಣಕ್ಕೆ ನೈತಿಕ ಜವಾಬ್ದಾರಿ ಹೊತ್ತು ರಾಜೀನಾಮೆ ನೀಡಬೇಕು ಎಂದೂ ಜೆಇಜೆಎಎ ಆಗ್ರಹಿಸಿದೆ. ಪಿಎನ್‌ಬಿ ಹಗರಣಕ್ಕೆ ಕೇಂದ್ರದ ಹಣಕಾಸು ಇಲಾಖೆ ಮತ್ತು ರಿಝರ್ವ್ ಬ್ಯಾಂಕ್(ಆರ್‌ಬಿಐ) ಎರಡೂ ಸಮನಾಗಿ ಹೊಣೆಗಾರರು ಎಂದು ಅದು ಹೇಳಿದೆ. ಬ್ಯಾಂಕುಗಳು ನೀಡುವ ಎಲ್ಲ ದೊಡ್ಡ ಸಾಲಗಳನ್ನು ಸುಪ್ರಿಂ ಕೋರ್ಟಿನ ನೇರ ಉಸ್ತುವಾರಿಯಲ್ಲಿ ಒಂದು ಸ್ವತಂತ್ರ ಸಂಸ್ಥೆಯ ಕಟ್ಟುನಿಟ್ಟಾದ ಪರೀಕ್ಷಣೆಗೆ ಒಳಪಡಿಸಬೇಕು ಎಂದು ಅದು ಸೂಚನೆ ಇಟ್ಟಿದೆ.

ವಿಫಲಗೊಂಡಿರುವ ಕಾರ್ಪೊರೇಟ್ ಸಾಲಗಳಿಂದಾಗಿ ಬ್ಯಾಂಕುಗಳು ಅಪಾರ ನಷ್ಟಗಳನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ ಈ ವಂಚನೆಯ ಆಘಾತಕಾರಿ ಕತೆ ಹೊರಬರುತ್ತಿದೆ. ವಂಚನೆಯ ಇಂತಹ ಪ್ರಕರಣಗಳು ಬ್ಯಾಂಕಿಂಗ್ ವ್ಯವಸ್ಥೆಯ ಅಸ್ತಿತ್ವವನ್ನೇ ಬುಡಮೇಲು ಮಾಡುತ್ತವೆ, ಜನರ ವಿಶ್ವಾಸ ಕಳಕೊಳ್ಳುವಂತಾಗಿ ಕೊನೆಗೆ ಕುಸಿದು ಬೀಳಬಹುದು ಎಂದು ಜೆಇಜೆಎಎ ಎಚ್ಚರಿಸಿದೆ.

ನವ–ಉದಾರವಾದಿ ಧೋರಣೆಗಳಿಂದಾಗಿಯೇ ಇಂತಹ ಹಗರಣಗಳು ನಡೆಯುತ್ತಿವೆ. ಇದು ಕೇವಲ ಪಿಎನ್‌ಬಿಗೆ ಸೀಮಿತವಾದ ವಿಷಯವಲ್ಲ. ಕೆಲವು ಕೆಳಮಟ್ಟದ ಅಧಿಕಾರಿಗಳನ್ನು ಬಲಿಪಶುಗಳಾಗಿ ಮಾಡಿ ನಿಜವಾದ ಸಂಗತಿಗಳ ಬಗ್ಗೆ ಚರ್ಚೆ ನಡೆಯದಂತೆ ಪ್ರಯತ್ನಿಸಲಾಗುತ್ತಿದೆ. ಸರಕಾರ ಸಂಸತ್ತಿನಲ್ಲಿ ಎಫ್‌ಆರ್‌ಡಿಐ ಮಸೂದೆಯನ್ನು ತರಾತುರಿಯಿಂದ ಪಾಸು ಮಾಡಿಕೊಳ್ಳಲು ಹೊರಟಿದೆ. ದೊಡ್ಡ ಕಾರ್ಪೊರೇಟ್‌ಗಳು ಸಾಲ ಹಿಂದಿರುಗಿಸದ್ದರಿಂದ ಆಗುವ ಬ್ಯಾಂಕ್ ನಷ್ಟಗಳನ್ನು ಜನಸಾಮಾನ್ಯರ ಹೆಗಲಿಗೆ ದಾಟಿಸುವುದಕ್ಕಾಗಿ ಈ ತರಾತುರಿ ಎಂದಿರುವ ಜೆಇಜೆಎಎ ಚಮಚಾ ಬಂಡವಾಳಶಾಹಿಯ ವಿನಾಶಕಾರಿ ದುಷ್ಪರಿಣಾಮಗಳನ್ನು, ಬ್ಯಾಂಕಿಂಗ್ ವ್ಯವಸ್ಥೆ ಹೊರಬೇಕಾಗಿ ಬಂದಿದೆ ಎನ್ನುತ್ತ ಇಂತಹ ವಿನಾಶಕಾರಿ ಧೋರಣೆಗಳಿಗೆ ಪ್ರತಿರೋಧವನ್ನು ಕಟ್ಟಿ ಬೆಳೆಸಲು ತಾನು ಜನಸಮೂಹಗಳನ್ನು ಅಣಿನೆರೆಸುವುದಾಗಿ ಹೇಳಿದೆ.

ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಎಐಟಿಯುಸಿ ಅಧ್ಯಕ್ಷೆ ಅಮರ್‌ಜಿತ್ ಕೌರ್. ಸಿಐಟಿಯು ಅಧ್ಯಕ್ಷೆ ಕೆ. ಹೇಮಲತಾ, ಹಿರಿಯ ರೈತ ಮುಖಂಡ ಡಾ. ಸುನೀಲಂ, ಅತುಲ್ ಕುಮಾರ್ ಅಂಜನ್, ಮಹಿಳಾ ಸಂಘಟನೆಗಳ ಮುಖಂಡರಾದ ಮರಿಯಮ್ ಧವಳೆ, ಆನಿ ರಾಜ, ಕವಿತಾ ಕೃಷ್ಣನ್, ವಿದ್ಯಾರ್ಥಿ ಸಂಘಟನೆಗಳ ಮುಖಂಡರಾದ ವಿಕ್ರಂ ಸಿಂಗ್ ಮತ್ತಿತರರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ನವ ಕರ್ನಾಟಕ ನಿರ್ಮಾಣಕ್ಕಾಗಿ ಕಾರ್ಮಿಕರ ಪ್ರಣಾಳಿಕೆ 2018

ದುಡಿಯುವವರ ಬಾಯಿ ಮೊಸರಾಗುತ್ತಿಲ್ಲ

(ಮುನ್ನುಡಿಯಿಂದ)


'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಜನಪ್ರಿಯ ಗಾದೆಯ ಮಾತೊಂದಿದೆ. ದುಡಿಮೆಯ ಮಹತ್ವವನ್ನು ಸಾರುವ ಗಾದೆ ಇದು. ಆದರೆ ಅಸಮಾನತೆಯೇ ಅಡಿಪಾಯವಾಗಿರುವ ನಮ್ಮ ಈ ಸಾಮಾಜಿಕ ವ್ಯವಸ್ಥೆಯಲ್ಲಿ ನಾವು ಇಂದು ಯಾರ ಕೈ ಕೆಸರಾಗುತ್ತಿದೆ? ಅದರ ಫಲವಾಗಿ 'ಯಾರ ಬಾಯಿ ಮೊಸರಾಗುತ್ತಿದೆ'? ಎಂದು ಸರಿಯಾಗಿ ನೋಡಬೇಕಿದೆ. ನಮ್ಮ ಸಮಾಜದಲ್ಲಿ 'ದುಡಿಯುವವರು' ಮತ್ತು 'ದುಡಿಸುವವರು' ಎಂಬ ವ್ಯತ್ಯಾಸವು ಡಾಳಾಗಿ ಎದ್ದು ಕಾಣುತ್ತಿದೆ. ಕೈ ಕೆಸರು ಮಾಡಿಕೊಂಡು ದುಡಿಯುವವರ ಬಾಯಿ ಮೊಸರಾಗುತ್ತಿಲ್ಲ, ಬದುಕು ಹಸನಾಗುತ್ತಿಲ್ಲ. ಸುಮ್ಮನೆ ಕೂತು ತಿನ್ನುವ ಧನಿಕ ಧಣಿಗಳೇ ಎಲ್ಲವನ್ನೂ ಬಾಚಿಕೊಳ್ಳುತ್ತಿದ್ದಾರೆ.

ಒಟ್ಟಾರೆಯಾಗಿ 1991ರಲ್ಲಿ ಪ್ರಾರಂಭವಾದ ನವ ಉದಾರೀಕರಣ ನೀತಿಗಳ ನಂತರ ಇದುವರೆಗೂ 17 ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳನ್ನು ನಡೆಸುವ ಮುಖಾಂತರ ಆಳುವ ವರ್ಗಗಳನ್ನು ಪ್ರಶ್ನಿಸಲಾಗಿದೆ. ಆದರೆ ಆಳುವ ವರ್ಗಗಳ ಬಂಡವಾಳಗಾರರ, ಭೂಮಾಲೀಕರ ಹಿತಾಸಕ್ತಿಗನುಗುಣವಾಗಿ ವರ್ತಿಸಿವೆಯೇ ಹೊರತು ಈ ಮುಷ್ಕರಗಳಲ್ಲಿ ಕಾರ್ಮಿಕ ವರ್ಗದ ಬೇಡಿಕೆಗಳಿಗೆ ಕಿವಿಗೊಡಲಿಲ್ಲ. ಬದಲಿಗೆ ತೀವ್ರಗೊಳಿಸಿವೆ.

ರಾಜ್ಯದಲ್ಲಿಯೂ ಕನಿಷ್ಠ ಕೂಲಿಯ ಮತ್ತಿತರ ಬೇಡಿಕೆಗಳಿಗಾಗಿ ಹಲವು ವರ್ಷಗಳಿಂದ ಸತತವಾಗಿ ಹೋರಾಟಗಳನ್ನು ನಡೆಸಲಾಗುತ್ತಿದೆ. 2009ರಲ್ಲಿ ರಾಜ್ಯದಾದ್ಯಂತ ನಡೆದ ಕಾರ್ಮಿಕರ ಮೇಲಿನ ಲಾಠಿ ಚಾರ್ಜ್ ಸೇರಿದಂತೆ ಪ್ರತಿವರ್ಷ ಹೆಚ್ಚು ಕಡಿಮೆ ಸಿಐಟಿಯು ನೇತೃತ್ವದಲ್ಲಿ ಚಳುವಳಿಗಳು ನಡೆಯುತ್ತಲೇ ಬಂದಿವೆ. ಆದರೆ ಈ ಬೇಡಿಕೆಯನ್ನು ಈಡೇರಿಸುವ ಬದಲಿಗೆ ಕಾರ್ಮಿಕರಿಗಾಗಿ ಜಂಟಿ ಸಭೆಗಳನ್ನು ನಡೆಸುವ ಸೌಜನ್ಯವೂ ಇಲ್ಲ. ಕಾರ್ಮಿಕರ ವಿಚಾರಗಳನ್ನು ಚರ್ಚಿಸಲು 'ಕರ್ನಾಟಕ ಲೇಬರ್ ಕಾನ್ಫರೆನ್ಸ್' ತ್ರಿಪಕ್ಷೀಯ ವೇದಿಕೆಯನ್ನು ರಚಿಸಲು ಒತ್ತಾಯಿಸಿದರೆ 'ಕಾರ್ಮಿಕರಿಗೆ ಸನ್ಮಾನ'ವನ್ನು ಮಾಡುತ್ತೇವೆ ಎನ್ನುತ್ತಾರೆ.

ರಾಜ್ಯದಲ್ಲಿ ನವ ಕರ್ನಾಟಕ ನಿರ್ಮಾಣವಾಗಬೇಕಾದರೆ ಕೇವಲ ಜಾಹಿರಾತುಗಳ, ಭಾಗ್ಯಗಳ ಬದಲಿಗೆ ಜನರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಬೇಕು, ಆ ಮೂಲಕ ಉತ್ಪಾದನೆ, ಹೆಚ್ಚಾಗಬೇಕು ಹಾಗಾದಾಗ ಮಾತ್ರ ಕೃಷಿ ಮತ್ತು ಕೈಗಾರಿಕಾ ರಂಗ ಹೆಚ್ಚಿನ ಚೈತನ್ಯವನ್ನು ಪಡೆದಂತಾಗುತ್ತದೆ. ಅದರಿಂದ ನಿರುದ್ಯೋಗದ ಸಮಸ್ಯೆಗಳಿಗೂ ಉತ್ತರ ಸಿಗುತ್ತದೆ.

ಈ ಹಿನ್ನೆಲೆಯಲ್ಲಿ ಸಿಐಟಿಯು ರಾಜ್ಯ ಸಮಿತಿ ಬಿಡುಗಡೆ ಮಾಡುತ್ತಿರುವ ಪ್ರಶ್ನೆಗಳ ಆಧಾರದ ಪ್ರಣಾಲಿಕೆಯನ್ನು ದುಡಿಯುವ ಜನತೆ ಓದಬೇಕು ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಈ ಸಮಸ್ಯೆಗಳಿಗೆ ಕಾರಣೀಭೂತರಾದಂತಹವರಿಗೆ ಬುದ್ದಿ ಕಲಿಸಲು ಸಾಧ್ಯವಾಗಬೇಕು ಮಾತ್ರವಲ್ಲದೆ ದುಡಿಯುವ ಜನತೆಯ ಪ್ರಣಾಲಿಕೆಯನ್ನು ಹೊಂದಿರುವ ಎಡಪಕ್ಷಗಳನ್ನು ಬೆಂಬಲಿಸಬೇಕು.



ನುಡಿದಂತೆ ನಡೆದಿವೆಯೆ ಸರ್ಕಾರಗಳು?

ರಾಜ್ಯದ ದುಡಿಯುವ ಜನತೆಯು ಕೆಂಬಾವುಟದ ನೇತೃತ್ವದಲ್ಲಿ ಹಲವು ದಶಕಗಳಿಂದ ಕೆಲವು ಕನಿಷ್ಠ ಬೇಡಿಕೆಗಳಿಗಾಗಿ ಹೋರಾಡುತ್ತಾ ಬಂದಿದ್ದಾರೆ. ಕಳೆದೊಂದು ದಶಕದಲ್ಲಿ ರಾಜ್ಯದಲ್ಲಿನ 2 ಸರ್ಕಾರಗಳ ಮುಂದೆ ನಮ್ಮ ಬೇಡಿಕೆಗಳನ್ನು ಮಂಡಿಸುತ್ತ, ಅವುಗಳಿಗಾಗಿ ನಿರಂತರ ಹೋರಾಟವನ್ನು ಕೆಲವು ಬಾರಿ ಜಂಟಿಯಾಗಿ ಹಲವು ಬಾರಿ ಪ್ರತ್ಯೇಕವಾಗಿ ನಡೆಸುತ್ತಾ ಬಂದಿದ್ದೇವೆ.

ಈ ಎಲ್ಲಾ ಹೋರಾಟಗಳ ಪರಿಣಾಮವಾಗಿ ಹಲವಾರು ಅಲ್ಪಸ್ವಲ್ಪ ಪ್ರತಿಫಲಗಳನ್ನು ಕಾರ್ಮಿಕರು ಪಡೆದುಕೊಳ್ಳಲು ಸಾಧ್ಯವಾಗಿದೆ. ಆದರೆ ಅದೇ ವೇಳೆ ಹಲವು ಮಹತ್ತರ ಬೇಡಿಕೆಗಳನ್ನು ರಾಜ್ಯ ಸರ್ಕಾರಗಳ ಮುಂದೆ ಕಳೆದ ಹತ್ತು ವರ್ಷಗಳಿಂದ ಇಡುತ್ತಾ ಅವುಗಳಿಗಾಗಿ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದೇವೆ.

ಈ ಹೋರಾಟಗಳಲ್ಲಿ ಹತ್ತಾರು ಸಾವಿರ ಕಾರ್ಮಿಕರು ವಿವಿಧ ಹಂತಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ದಿನಗಳ ಮುಷ್ಕರ ನಡೆಸಿ ತಮ್ಮ ವೇತನಗಳನ್ನು ಕಳೆದುಕೊಂಡಿದ್ದಾರೆ. ಪ್ರತಿ ಹೋರಾಟದ ಕೊನೆಗೆ ಸರಕಾರಗಳು ಆಶ್ವಾಸನೆ ಕೊಡುತ್ತಲೇ ಬಂದಿವೆ. ಆದರೆ ಅವನ್ನು ಪಾಲಿಸಿದ್ದು ಜಾರಿ ಮಾಡಿದ್ದು ಅಪರೂಪ. ನುಡಿದಂತೆ ನಡೆದಿಲ್ಲ

(ಕಾರ್ಮಿಕರ ಪ್ರಣಾಳಿಕೆಯ ಪ್ರಮುಖ ಬೇಡಿಕೆಗಳು ಬಾಕ್ಸ್ ನಲ್ಲಿವೆ)

ರಾಜ್ಯವ್ಯಾಪಿ ಸಮಾನ ಕನಿಷ್ಟ ವೇತನ :

ರಾಜ್ಯದಲ್ಲಿನ 74 ಅನುಸೂಚಿತ ಉದ್ಯೋಗಗಳಿಗೆ ಕನಿಷ್ಟ ವೇತನವನ್ನು ಪ್ರತ್ಯೇಕವಾಗಿ ಪ್ರತಿಬಾರಿ ಅಧಿಸೂಚಿಸುವ ಬದಲು ರಾಜ್ಯಕ್ಕೆಲ್ಲ ಸಾಮಾನ್ಯ ಕನಿಷ್ಟ ವೇತನದ ಒಂದೇ ಅಧಿಸೂಚನೆಯನ್ನು ಹೊರಡಿಸಬೇಕು. ಆ ಮೂಲಕ ಪ್ರತಿ ಉದ್ಯೋಗಕ್ಕೂ ಪ್ರತಿಭಾರಿ ಅಧಿಸೂಚನೆ ಹೊರಡಿಸಲು ತೆಗೆದುಕೊಳ್ಳುವ ಸಮಯವನ್ನು ಉಳಿಸಬಹುದು, ತ್ವರಿತವಾಗಿ ಕನಿಷ್ಟ ವೇತನ ನಿಗದಿ ಕ್ರಮಗಳನ್ನು ಪೂರೈಸಿ, ಕಾರ್ಮಿಕರಿಗೆ ಸಹಕಾರಿಯಾಗಬಹುದು ಎಂಬುದು CITU ಪ್ರತಿಪಾದನೆಯಾಗಿದೆ. ರಾಜ್ಯವು ಇಂದು ಬಹುರಾಷ್ಟ್ರೀಯ ಬಂಡವಾಳದ ಆಕರ್ಷಣೀಯ ಕೇಂದ್ರವಾಗಿದೆ. ರಾಜ್ಯದ ತಲಾ ವಾರ್ಷಿಕ ಆದಾಯವು ರೂ.1,45,791 ರೂಗಳಾಗಿವೆ. ರಾಷ್ಟ್ರದಲ್ಲಿ ಅತಿ ಹೆಚ್ಚು ವಿದೇಶ ನೇರ ಬಂಡವಾಳ ಹರಿದು ಬರುತ್ತಿರುವ ರಾಜ್ಯವಾಗಿ ರಾಜ್ಯವು ಹೊರಹೊಮ್ಮಿದೆ.

ಇಂತಹ ಪರಿಸ್ಥಿತಿಯಲ್ಲಿ ರೂ.18,000/– ಸಮಾನ ಕನಿಷ್ಟ ವೇತನ ನಿಗದಿ ಮಾಡಬೇಕು ಎಂಬುದು CITU ಮತ್ತಿತರೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಒತ್ತಾಯವಾಗಿದೆ. ಈ ಬೇಡಿಕೆ ಕುರಿತು ಕೇಂದ್ರ ಸರ್ಕಾರವಂತೂ ರಾಷ್ಟ್ರವ್ಯಾಪಿ ಸಮಾನ ಕನಿಷ್ಟ ವೇತನ ಕುರಿತು ಬಾಯಿ ಬಿಡುತ್ತಿಲ್ಲ. ಆದರೆ ರಾಜ್ಯ ಸರ್ಕಾರದ ನಡವಳಿಕೆ 'ಕೊಟ್ಟು ಕೊಡದಂತೆ–ಕೊಡದೆಯು ಕೊಟ್ಟಂತಹ' ನಾಟಕವಾಡುತ್ತಿದೆ.

ಸಮಾನ ಕನಿಷ್ಟ ವೇತನ ರೂಪಿಸಲು ರಾಜ್ಯದ ಕಾರ್ಮಿಕರು 2008ರಿಂದಲೂ CITU ನೇತೃತ್ವದಲ್ಲಿ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದಾರೆ. ಅಂದಿನ ಮುಖ್ಯಮಂತ್ರಿಗಳು ಹೋರಾಟದ ತೀವ್ರತೆಗೆ ಮಣಿದು ರಚಿಸಿದ್ದ ಕನಿಷ್ಟ ವೇತನ ಕಾಯ್ದೆ–1936 ರಡಿಯ ಕಲಂ 5(1)(a) ಸಭೆಯನ್ನೇ ಸೇರಿಲ್ಲ. ಆ ಸಮಿತಿಯನ್ನು ಸೇರಿಸಿ ವರದಿ ಪಡೆದು ರಾಜ್ಯವ್ಯಾಪಿ ಸಮಾನ ಕನಿಷ್ಟ ವೇತನ ರೂಪಿಸಿ, ರೂ.18,000 ಕನಿಷ್ಟ ವೇತನ ನಿಗದಿ ಮಾಡುವ ಬದಲು, ಒಂದೊಂದೆ ಅಧಿಸೂಚಿತ ಉದ್ಯೋಗಗಳಿಗೆ ಪ್ರತ್ಯೇಕವಾಗಿ ಕನಿಷ್ಟ ವೇತನವನ್ನು ಹತ್ತು ಸಾವಿರದಿಂದ 14,000 ರೂಗಳವರೆಗೆ ನಿಗದಿಗೊಳಿಸಲು ಮುಂದಾಗಿದೆ.

ರಾಜ್ಯ ಸರ್ಕಾರವು ತನ್ನದೆ

ಈ ಶಾಸನ ಇಲ್ಲದಿರುವ ಕಾರಣ ಕಾರ್ಮಿಕರು ಸಂಘ ರಚಿಸಿಕೊಂಡೊಡನೆ ಮುಂದಾಳುಗಳು ಮಾತ್ರವಲ್ಲದೆ ಇತರರನ್ನು ಅಮಾನತ್ತು ಮಾಡುವ ಹಾಗು ವಜಾಗೊಳಿಸುವ ಕ್ರಮಗಳನ್ನು ಅನುಸರಿಸಿ ಕಾರ್ಮಿಕರಿಗೆ ಸಂಘ ರಚಿಸಿಕೊಳ್ಳುವ ತಮ್ಮ ಸಂವಿಧಾನದತ್ತ ಮೂಲಭೂತ ಹಕ್ಕನ್ನೇ ಇಲ್ಲದಾಗಿಸಲು ಮಾಲೀಕರು ಮುಂದಾಗುತ್ತಿದ್ದಾರೆ. ಅದಕ್ಕೆ ಕೇಂದ್ರ ರಾಜ್ಯ ಸರ್ಕಾರಗಳ ಈ ಕ್ರಮಗಳು ಅನುವುಗೊಳಿಸುತ್ತಿವೆ.

ಸ್ಕೀಂ ನೌಕರರಿಗೂ ಕನಿಷ್ಟ ವೇತನ ಹಾಗು ನೌಕರರನ್ನಾಗಿ ಪರಿಗಣನೆ :

ರಾಷ್ಟ್ರ ಹಾಗೂ ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಅಂಗನವಾಡಿ, ಬಿಸಿಊಟ ಮತ್ತು ಆಶಾ ಮುಂತಾದ ಸ್ಕೀಂ ನೌಕರರು ಹಲವಾರು ವರ್ಷಗಳಿಂದ ದುಡಿಯುತ್ತಾ ಬಂದಿದ್ದಾರೆ. ಸರ್ಕಾರ ವಿವಿಧ ಜನಕಲ್ಯಾಣ ಯೋಜನೆಗಳನ್ನು ಜನತೆಗೆ ತಲುಪಿಸುವ ಈ ಸ್ಕೀಂ ನೌಕರರು ಮಾತ್ರ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಡಿಯ ನೌಕರರಾಗಿಲ್ಲ. ಗೌರವಧನ ಆಧಾರಿತವಾಗಿ ದುಡಿಮೆ ಮಾಡುವವರಾಗಿದ್ದಾರೆ.

ರಾಜ್ಯದ ಜನತೆ ಆರೋಗ್ಯ, ಮಕ್ಕಳು, ಮಹಿಳೆಯರ ಪೌಷ್ಟಿಕತೆ ಕಾಪಾಡಬೇಕಾದ ಕರ್ತವ್ಯ ನಿಭಾಯಿಸುತ್ತಿರುವ ಇವರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಕೆಂದು 2012ರಲ್ಲಿ

ನೀವು ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್), ಸಿಪಿಐ(ಎಂ) ಮತ್ತಿತರ ರಾಜಕೀಯ ಪಕ್ಷಗಳ ರಾಜಕೀಯ ಪ್ರಣಾಳಿಕೆಗಳ ಬಗ್ಗೆ ಕೇಳಿದ್ದೀರಿ. ಅವನ್ನು ಓದಿರಲೂಬಹುದು. ಆದರೆ ಒಂದು ಜನವಿಭಾಗ ತಮ್ಮ ಪ್ರಣಾಳಿಕೆ ಬಿಡುಗಡೆ ಮಾಡುವುದು ಕೇಳಿದ್ದೀರಾ? ಅದರಲ್ಲೂ ಸಾಮಾನ್ಯವಾಗಿ ರಾಜಕೀಯ ಲೆಕ್ಕಾಚಾರಗಳಲ್ಲಿ ಲೆಕ್ಕಕ್ಕೆ ಬರದ ಕಾರ್ಮಿಕರು ಪ್ರಣಾಳಿಕೆ ಹೊರಡಿಸುವುದು ಖಂಡಿತ ಕೇಳಿರುವುದಿಲ್ಲ. ಹೌದು. ಕಾರ್ಮಿಕರು ಕರ್ನಾಟಕ ವಿಧಾನಸಭೆ ಚುನಾವಣೆಗೆ ತಮ್ಮ ಪ್ರಣಾಳಿಕೆ ಬಿಡುಗಡೆ ಮಾಡಿದ್ದಾರೆ. ಈ ಪ್ರಣಾಳಿಕೆಯನ್ನು ಜಾರಿ ಮಾಡಲು ಆಶ್ವಾಸನೆ ಕೊಡುವ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡಲು ನಿರ್ಧರಿಸಿದ್ದಾರೆ. ದೇಶದ ಮತ್ತು ರಾಜ್ಯದ ಕಾರ್ಮಿಕರ ಅತಿ ದೊಡ್ಡ ಸಂಘಟನೆಯಾದ ಸಿಐಟಿಯು ಕಾರ್ಮಿಕರ ಪರವಾಗಿ ಈ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಅದರ ಕೆಲವು ಆಯ್ದ ಭಾಗಗಳು.

ಅಧಿಸೂಚನೆಗಳನ್ನು ಮಾನ್ಯ ಹೈಕೋರ್ಟ್‌ನಲ್ಲಿ ಪ್ರತಿಪಾದಿಸಿಕೊಳ್ಳಲು, ಅವುಗಳನ್ನು ಸುಪ್ರೀಂ ಕೋರ್ಟ್ ಕನಿಷ್ಟ ವೇತನ ಕುರಿತು ನೀಡಿರುವ ತೀರ್ಪುಗಳ ಆಧಾರದಲ್ಲಿ ಪ್ರತಿಪಾದಿಸಿಕೊಳ್ಳುವಲ್ಲಿ ತೋರುತ್ತಿರುವ ನಿರ್ಲಕ್ಷ್ಯ ದಿಂದಾಗಿ ಕೈಯಿಗೆ ಬಂದದ್ದು ಬಾಯಿಗೆ ಬರದಂತಾಗಿದೆ.

ಗುತ್ತಿಗೆ, ಹೊರಗುತ್ತಿಗೆ ಮುಂತಾದ ಖಾಯಮೇತರರ ಖಾಯಂಗೆ

ಶಾಸನ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ:

2014 ಜನವರಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಂದಿನ ಕಾರ್ಮಿಕ ಸಚಿವರು ಹಾಗೂ ಸಿಐಟಿಯು ರಾಜ್ಯ ನಿಯೋಗದೊಂದಿಗೆ ನಡೆದಿದ್ದ ಸಭೆಯಲ್ಲಿ ಮುಖ್ಯಮಂತ್ರಿಗಳೇ ನೀಡಿದ್ದ ನಿರ್ದೇಶನದಂತೆ "ಗುತ್ತಿಗೆ ಹಾಗೂ ಇತರೆ ಕಾಯೇಂತರರನ್ನು ಕಾಯಂಗೊಳಿಸಲು" ತಮಿಳುನಾಡು ಹಾಗೂ ಅಸ್ಸಾಂ ಮಾದರಿಯ ಶಾಸನಕ್ಕೆ ಕರಡು ತಯಾರಾಗಿ ಕಾರ್ಮಿಕ ಭವನದಲ್ಲಿದೆ. ಆದರೆ ನಾಲ್ಕು ವರ್ಷಗಳಾದರೂ ಸಹಾ ಆ ಕರಡು ಮಸೂದೆಯು ವಿಕಾಸ ಸೌಧ–ವಿಧಾನಸೌಧ ತಲುಪುವ ಭಾಗ್ಯ ಪಡೆಯಲಿಲ್ಲ. ಆದರೆ ರಾಜ್ಯದಲ್ಲಿ ಪ್ರತಿ ವರ್ಷ ಗುತ್ತಿಗೆ, ಹೊರಗುತ್ತಿಗೆ, ಅರೆಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಾ ಬಂದಿದೆ.

ಮಾದರಿ ಮಾಲೀಕರಾಗಬೇಕಾದ ಸರ್ಕಾರ ತನ್ನ ಇಲಾಖೆಗಳಲ್ಲಿ ಹಾಗೂ ತನ್ನ ಅಧೀನದ ಉದ್ದಿಮೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ನೌಕರರನ್ನು ಹೆಚ್ಚಿಸುತ್ತ ಖಾಯಂ ನೌಕರರ ಬದಲು ಇಂತಹ ಹೊರಮೂಲದ ನೌಕರರಿಂದಲೇ ದುಡಿಸಿಕೊಳ್ಳಲು ಮುಂದಾಗಿದೆ. ಸುಪ್ರೀಂ ಕೋರ್ಟ್ ತೀರ್ಪನ್ನೂ ಸಹಾ ಲೆಕ್ಕಿಸದೆ ಕನಿಷ್ಟ ವೇತನವನ್ನು ಸರಿಯಾಗಿ

ನೀಡದೆ ದುಡಿಸಿಕೊಳ್ಳುತ್ತಿವೆ.

NEEM ಮತ್ತು NETAP ಟ್ರೈನಿಗಳನ್ನು ಬಳಸಿ ಬಂಡವಾಳಗಾರರು ಒಂದೆಡೆ ಕಾಯಂ ಕಾರ್ಮಿಕರ ಸಾಮೂಹಿಕ ಚೌಕಾಸಿ ಮತ್ತು ಮುಷ್ಕರದ ಸಾಮರ್ಥ್ಯವನ್ನು ಕಡಿಮೆ ಮಾಡಲು ಮತ್ತೊಂದೆಡೆ ಗುತ್ತಿಗೆ ಮುಂತಾದ ಕಾರ್ಮಿಕರನ್ನು ಹೊರಹಾಕಿ ಅವರನ್ನೇ ಬಳಸಲು ಅನುವುಗೊಳಿಸಿದೆ.

ಗುತ್ತಿಗೆ ಮುಂತಾದ ಕಾರ್ಮಿಕರಿಗೆ 'ಸಮಾನ ಕೆಲಸಕ್ಕೆ ಸಮಾನ ವೇತನ' ನೀಡಬೇಕೆಂಬ ಸುಪ್ರೀಂಕೋರ್ಟ್‌ನ 2017ರ ತೀರ್ಪನ್ನು ಜಾರಿಗೊಳಿಸಲು ಕೇಂದ್ರದಲ್ಲಿರುವ ಅಥವಾ ರಾಜ್ಯದಲ್ಲಿರುವ ಸರ್ಕಾರಗಳು ಯಾವು ಸಹಾ ಕ್ರಮವಹಿಸುತ್ತಿಲ್ಲ ಮಾತ್ರವಲ್ಲ ದಿವ್ಯ ಮೌನಕ್ಕೆ ಶರಣಾಗಿವೆ.

ಕಾರ್ಮಿಕ ಸಂಘ ಮಾನ್ಯತೆಗೆ ಶಾಸನ ;

ಕಾರ್ಮಿಕ ಸಂಘ ಮಾನ್ಯ ಮಾಡುವ ಶಾಸನಕ್ಕೆ ಕರಡು ತಯಾರಾಗಿ, ಕಾನೂನು, ಹಣಕಾಸು ಇಲಾಖೆ ಅನುಮೋದನೆ ಪಡೆದು ಕ್ಯಾಬಿನೆಟ್ ವಿಭಾಗದಲ್ಲಿದೆ. ಆದರೆ ಮಾಲಿಕರ ಒತ್ತಡಕ್ಕೆ ಮಣಿದು ಸರ್ಕಾರ, ಸಿಐಟಿಯು ನಿಯೋಗದೊಂದಿಗೆ ಚೌಕಾಸಿ ಮಾಡುತ್ತಾ, ಹೊರಗಿನವರು ಯಾರು ಇರಬಾರದು ಎಂಬ ಷರತ್ತಿಗೆ ಒಪ್ಪಿಕೊಂಡರೆ, ಮಸೂದೆ ಅಂಗೀಕರಿಸುವ ಪ್ರಸ್ತಾಪವನ್ನು 2017 ಜನವರಿಯಲ್ಲಿ ಸಿಐಟಿಯು ನಡೆಸಿದ ಅಹೋರಾತ್ರಿ ಧರಣಿಯ ನಂತರ ಹಾಲಿ ಕಾರ್ಮಿಕ ಸಚಿವರು ಪ್ರಸ್ತಾಪಿಸುತ್ತಾರೆ. ಮಹಾರಾಷ್ಟ್ರ ಮಾದರಿಯ ಕಾರ್ಮಿಕ ಸಂಘ ಮಾನ್ಯತೆಗೆ ಹಾಗೂ ಅಕ್ರಮ ಕಾರ್ಮಿಕ ನಡಾವಳಿಕೆ ತಡೆ ಕಾಯ್ದೆಗೆ ಸಿಐಟಿಯು ಒತ್ತಾಯಿಸಿದರೆ ರಾಜ್ಯದ ಕರಡು ಕೇವಲ ಕಾರ್ಮಿಕ ಸಂಘ ಮಾನ್ಯತೆಗೆ ಮಾತ್ರ ಕರಡು ಮಸೂದೆ ಸಿದ್ಧಪಡಿಸಿದೆ.

ನಡೆದ 45ನೇ ಭಾರತಿಯ ಕಾರ್ಮಿಕರ ಸಮ್ಮೇಳನವು ಸರ್ವಾನುಮತದ ಶಿಫಾರಸ್ಸನ್ನು ಮಾಡಿದೆ. ಆದರೆ ಅದನ್ನು ಪರಿಗಣಿಸಲು ಕೇಂದ್ರ ಅಥವಾ ರಾಜ್ಯ ಸರ್ಕಾರವಾಗಲಿ ತಯಾರಿಲ್ಲ ಎಂಬುದು ಅವರ ನೌಕರ ವಿರೋಧಿ ನಿಲುಮೆಯನ್ನು ತೋರುತ್ತದೆ, ಮಾತ್ರವಲ್ಲದೆ ಈ ಯೋಜನೆಗಳಿಗಾಗಿನ ಅವರ ಬದ್ಧತೆಯನ್ನು ತೋರುತ್ತದೆ.

ಈ ಯೋಜನೆಗಳಿಗೆ ವರ್ಷಂ ಪ್ರತಿ ಕೇಂದ್ರ ಸರ್ಕಾರವು ತನ್ನ ಅನುದಾನವನ್ನು ಕಡಿತ ಮಾಡುತ್ತಿದೆ. ವೇತನ ಹೆಚ್ಚಳಕ್ಕೆ ಕ್ರಮವಹಿಸುತ್ತಿಲ್ಲ. ಪ್ರತಿಭಾರಿ ರಾಜ್ಯ ಸರ್ಕಾರದೊಂದಿಗೆ ಗುದ್ದಾಡಿ ಹೋರಾಟ ನಡೆಸಿ ಅಲ್ಪಸ್ವಲ್ಪ ವೇತನ ಹೆಚ್ಚಳ ಮಾಡಿಸಿಕೊಳ್ಳುವ ಪರಿಸ್ಥಿತಿ ಪ್ರತಿ ವರ್ಷದಾಗಿದೆ.

ಇದಕ್ಕೆ ಪರಿಹಾರ ಎಂದರೆ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸನ್ನು ಜಾರಿಗೊಳಿಸಲು ಕ್ರಮವಹಿಸಬೇಕು. ಅದುವರೆಗೆ ಇತರೆ ಉದ್ಯೋಗಗಳ ರೀತಿ ಸ್ಕೀಂ ನೌಕರರನ್ನು ಕನಿಷ್ಟ ವೇತನ ಅನುಸೂಚಿಯ ವ್ಯಾಪ್ತಿಗೆ ಒಳಪಡಿಸಿ, ಕನಿಷ್ಟ ವೇತನವನ್ನು ಜಾರಿಗೊಳಿಸಬೇಕು.

ಪಂಚಾಯಿತಿ ನೌಕರರಿಗೆ ಕನಿಷ್ಟ ವೇತನ ಜಾರಿಗೊಂಡಿದ್ದರೂ ಸಹಾ, ವೇತನಾನುದಾನವಿಲ್ಲದ ಕಾರಣ, ನಿಗದಿಯಾಗಿರುವ ಕನಿಷ್ಟ ವೇತನ ಹಲವು ತಿಂಗಳುಗಳು ಮಾತ್ರವಲ್ಲದೆ ಕೆಲವೆಡೆ ವರ್ಷಗಳ ಕಾಲ ಬಾಕಿ ಉಳಿದಿರುವ ಉದಾಹರಣೆಗಳಿವೆ. ಅದನ್ನು ಸರಿಪಡಿಸಲು ಅವರ ವೇತನವನ್ನು ರಾಜ್ಯ ಬಜೆಟ್‌ನ ಯೋಜನೇತ್ತರ ವ್ಯಾಪ್ತಿಗೆ ಒಳಪಡಿಸಬೇಕು. ಮಾತ್ರವಲ್ಲದೆ ಅವರಿಗೆ ಸೇವಾ ನಿಯಾಮಾವಳಿಗಳನ್ನು ರೂಪಿಸಿ ಜಾರಿಗೊಳಿಸಬೇಕು.

ಎಲ್ಲಾ ಜಿಲ್ಲೆಗಳಲ್ಲಿ ಕಾರ್ಮಿಕ ನ್ಯಾಯಾಲಯ:

ಕಾರ್ಮಿಕ ಕಾನೂನುಗಳಡಿಯ ವ್ಯಾಜ್ಯಗಳನ್ನು ಕಾರ್ಮಿಕ ಕಾನೂನಿನ್ವಯ 6 ತಿಂಗಳೊಳಗಾಗಿ ವಿಲೇವಾರಿ ಮಾಡಬೇಕಿದೆ. ಇತ್ತೀಚೆಗೆ ನ್ಯಾಯಾಲಯಗಳ ತೀರ್ಪಿನನ್ವಯ 'ಮನೆ ಬಾಗಿಲಿಗೆ ನ್ಯಾಯ' ಎಂಬ ಪರಿಕಲ್ಪನೆಯಡಿ, ಕೈಗಾರಿಕಾ ವಿವಾದಗಳನ್ನು ಆಯಾಯ ಜಿಲ್ಲಾ ವ್ಯಾಪ್ತಿ ನ್ಯಾಯಾಲಯಗಳಿಗೆ ವರ್ಗಾಯಿಸಲಾಗುತ್ತಿದೆ. ಪರಿಣಾಮವಾಗಿ ಆಯಾಯ ಪ್ರದೇಶದಲ್ಲಿ ನ್ಯಾಯಾಲಯಗಳಿಗೆ ಕೈಗಾರಿಕಾ ವಿವಾದಗಳನ್ನು ರಾಜ್ಯ ಸರ್ಕಾರ ಶಿಫಾರಸ್ಸು ಮಾಡುತ್ತಿದೆ. ಈಗಾಗಲೇ ಅಲ್ಲಿರುವ ಇತರೆ ವ್ಯಾಜ್ಯಗಳ ಜೊತೆ ಸೇರಿ ಈ ವ್ಯಾಜ್ಯಗಳು ಸಹಾ ವಿಳಂಬವಾಗುವ ಸಾಧ್ಯತೆಗಳು ಹೆಚ್ಚಾಗಿವೆ.

ಸದ್ಯಕ್ಕಂತು ಇದು ಮಾಲೀಕರಿಗೆ ಸಹಕಾರಿಯಾಗಲಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆ ಅತ್ಯಗತ್ಯವಾಗಿದೆ.

ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ ಶಾಸನ ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತ ಮಂಡಳಿಗೆ ನಿಧಿ ಹಾಗು ಕಲ್ಯಾಣ ಯೋಜನೆಗಳು:

ಕಾರ್ಮಿಕ ಸಂಘಟನೆಗಳ ಹೋರಾಟದ ಪರಿಣಾಮವಾಗಿ 2008ರಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತ ಕಾಯ್ದೆಯನ್ನು ರಾಷ್ಟ್ರದ ಸಂಸತ್ತು ಅಂಗೀಕರಿಸಿದೆ. ಆನಂತರ ರಾಜ್ಯದಲ್ಲಿ 2009ರಲ್ಲಿಯೇ 'ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತ ಮಂಡಳಿ' ರಚನೆಯಾಗಿದೆ. ಆದರೆ ಅಂದಿನಿಂದ ಇಂದಿನವರೆಗೆ ಮಂಡಳಿಗೆ ಅಗತ್ಯ ನಿಧಿಯನ್ನು ಯಾವುದೇ ರಾಜ್ಯ ಸರ್ಕಾರವಾಗಲೀ–ಕೇಂದ್ರ ಸರ್ಕಾರವಾಗಲಿ ತಮ್ಮ ಬಜೆಟ್‌ನಿಂದ ನೀಡಿಲ್ಲ ಮಾತ್ರವಲ್ಲದೆ ಕಲ್ಯಾಣ ಯೋಜನೆಗಳನ್ನು ರೂಪಿಸಿ ರಾಜ್ಯದಲ್ಲಿನ 154 ಉದ್ಯೋಗಗಳಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರಿಗೆ ಅದರ ಪ್ರಯೋಜನಗಳನ್ನು ನೀಡಿಲ್ಲ. ಮಂಡಳಿ ರಚನೆಯಾಗಿ 9 ವರ್ಷಗಳಾಗಿದ್ದರೂ ಸಹಾ ಕಲ್ಯಾಣ ಯೋಜನೆಗಳು ಜಾರಿಯಾಗಿಲ್ಲ.

ಕೈಗಾರಿಕಾ ಕಾರ್ಮಿಕರ ನಿವೃತ್ತಿ ವಯಸ್ಸು 58 ರಿಂದ 60:

ಸರಾಸರಿ ಜೀವಿತ ಅವಧಿಯು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಿವೃತ್ತಿ ವಯಸ್ಸನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೌಕರರಿಗೆ ಮತ್ತು ಅದರಡಿಯ ಉದ್ದಿಮೆಗಳಿಗೆ ಹೆಚ್ಚಿಸಲಾಗಿದೆ. ಆದರೆ ಖಾಸಗಿ ಕೈಗಾರಿಕೆಗಳಲ್ಲಿ ನಿವೃತ್ತಿ ವಯಸ್ಸನ್ನು ಹೆಚ್ಚಿಸಿಲ್ಲ. ಹಾಲಿ ರಾಜ್ಯ ಸರ್ಕಾರವು 2017ರಲ್ಲಿ ಮಾದರಿ ಸ್ಥಾಯಿ ಆದೇಶಗಳಿಗೆ ತಿದ್ದುಪಡಿ ತಂದರೂ ಸಹಾ ಅದನ್ನು



ಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ರಾಜ್ಯ ಸರ್ಕಾರ ತನ್ನ ಅಧಿಸೂಚನೆಯನ್ನು ಪ್ರತಿಪಾದಿಸಿಕೊಳ್ಳಲು ತೋರಿರುವ ನಿರ್ಲಕ್ಷ್ಯದಿಂದಾಗಿ ತಾನೇ ಹೊರಡಿಸಿರುವ ನಿವೃತ್ತಿ ವಯಸ್ಸಿನ ಹೆಚ್ಚಳದ ಅಧಿಸೂಚನೆಯ ಲಾಭ ರಾಜ್ಯದಲ್ಲಿನ ಹಿರಿಯ ಕಾರ್ಮಿಕರಿಗೆ ಲಭಿಸಿದಂತಾಗಿದೆ.

ಸಾರ್ವಜನಿಕ ಉದ್ದಿಮೆಗಳ ರಕ್ಷಣೆ :

ಬೆಂಗಳೂರು ಮತ್ತು ರಾಜ್ಯವು ಸಾರ್ವಜನಿಕ ಉದ್ದಿಮೆಗಳ ನೆಲೆಯಾಗಿದೆ. ಆದರೆ ಕೇಂದ್ರ ರಾಜ್ಯ ಸರ್ಕಾರಗಳ ಶೇರು ವಿಕ್ರಯ ಮತ್ತು ಖಾಸಗೀಕರಣ ನೀತಿಗಳ ಪರಿಣಾಮಗಳಿಂದಾಗಿ ಒಂದೊಂದಾಗಿ ಖಾಸಗಿಯವರಿಗೆ ಮಾರಾಟಗೊಳ್ಳುತ್ತಿವೆ ಇಲ್ಲ ಮುಚ್ಚಲ್ಪಡುತ್ತಿವೆ.

ಕೇಂದ್ರ ಸರ್ಕಾರವು HMT ಕಾರ್ಖಾನೆಯನ್ನು ಮುಚ್ಚಿದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು (SBM) ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ವಿಲೀನಗೊಳಿಸಿದೆ. ಇದೀಗ 1.25 ಲಕ್ಷ ಕೋಟಿ ಬೆಲೆಯ BEML ಕಾರ್ಖಾನೆಯನ್ನು 1250 ಕೋಟಿ ರೂಗಳಿಗೆ ರಿಲೆಯನ್ಸ್‌ನ ಅಂಬಾನಿಗಳಿಗೆ ಪರಭಾರೆ ಮಾಡಲು ಮುಂದಾಗಿದೆ.

ಕೇರಳದ ಹಾಲಿ ಎಡರಂಗ ಸರ್ಕಾರವು ಕಳೆದ 5 ವರ್ಷಗಳಿಂದ ಮುಚ್ಚಲ್ಪಟ್ಟಿದ್ದ ಗೇರುಬೀಜ ಪರಿಷ್ಕರಣ ಕಾರ್ಖಾನೆಗಳನ್ನು ತೆರೆಯಲು ಕ್ರಮವಹಿಸಿದೆ. ರಾಜ್ಯ ಸಾರ್ವಜನಿಕ ಉದ್ದಿಮೆಗಳನ್ನು ಲಾಭದಾಯಕವಾಗಿಸಲು ಸಫಲವಾಗಿದೆ. ಆದರೆ ರಾಜ್ಯ ಸರ್ಕಾರ ಮಾತ್ರ ಈ ನಿಟ್ಟಿನಲ್ಲಿ ಏನು ಕ್ರಮವಹಿಸಿಲ್ಲ.

ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಿನ ಜಾರಿ ಮತ್ತು ಕಾರ್ಮಿಕ ಕಾನೂನುಗಳ ತಿದ್ದುಪಡಿ:

ಹಾಲಿ ಇರುವ ಕಾರ್ಮಿಕ ಕಾನೂನುಗಳ ಜಾರಿಯಲ್ಲಿನ ಕೊರತೆಯ ಕಾರಣ, ಕಾರ್ಮಿಕ ಕಾನೂನಿನ ಉಲ್ಲಂಘನೆ ಹೆಚ್ಚುತ್ತಿದೆ. ಮಾತ್ರವಲ್ಲದೆ ತೀವ್ರಗೊಳ್ಳುತ್ತಿದೆ. ಪರಿಣಾಮವಾಗಿ ಕೆಲವು ಕಾರ್ಖಾನೆಗಳಲ್ಲಿ 100 ಕಾಯಂ ಕಾರ್ಮಿಕರಿದ್ದರೆ 900 ಇತರೆ ಬಳಸಿ ಬಿಸಾಕಬಹುದಾದ ಕಾರ್ಮಿಕರಿದ್ದಾರೆ. ಕಾರ್ಮಿಕ ಇಲಾಖೆಯಲ್ಲಿನ ಸಿಬ್ಬಂದಿ ಕೊರತೆ, ಇರುವ ಸಿಬ್ಬಂದಿಯ ಕಾರ್ಯಕ್ಷಮತೆಯ ಕೊರತೆ, ಕಾರ್ಯಭಾರ ಮುಂತಾದವು ಕಾರ್ಮಿಕ ಕಾನೂನುಗಳ ಉಲ್ಲಂಘನೆಗೆ ದೊಡ್ಡ ಕೊಡುಗೆ ನೀಡುತ್ತಿವೆ.

ಕೇಂದ್ರ ಸರ್ಕಾರವು 44 ಕೇಂದ್ರ ಕಾರ್ಮಿಕ ಕಾನೂನುಗಳನ್ನು 4 ಸಂಹಿತೆಗಳನ್ನಾಗಿಸುವ ನೆಪದಲ್ಲಿ, ಕಾರ್ಮಿಕ ಹಕ್ಕುಗಳನ್ನು ಇಲ್ಲದಾಗಿಸಿ ಬಂಡವಾಳಪರ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ತರಲು ಮುಂದಾಗಿದೆ. ಈಗಾಗಲೇ ರಾಜಸ್ಥಾನ, ಮಧ್ಯಪ್ರವೇಶ, ಆಂಧ್ರಪ್ರದೇಶಗಳಲ್ಲಿ ತಿದ್ದುಪಡಿ ಮಾಡಲಾಗಿದೆ. ರಾಜ್ಯ ಸರ್ಕಾರವು ತಿದ್ದುಪಡಿ ಹಾದಿಯ ಬದಲು ನೀತಿಗಳ ಹೆಸರಲ್ಲಿ ಕೇಂದ್ರದ ನಿಟ್ಟಿನಲ್ಲಿ ಸಾಗಿದೆ.

ರಾಜ್ಯದಲ್ಲಿರುವ 10 ಲಕ್ಷ ಬೀಡಿ ಕಾರ್ಮಿಕರು 2020ನೇ ಇಸವಿಗೆ ತಂಬಾಕು ನಿಷೇಧದಿಂದಾಗಿ ಉದ್ಯೋಗವನ್ನು ಕಳೆದುಕೊಳ್ಳುವ ಅಪಾಯದಲ್ಲಿ ಇದ್ದಾರೆ. ಇವರಿಗೆ ಪರ್ಯಾಯ ಬದುಕು ರೂಪಿಸಬೇಕಾಗಿರುವ ಕೇಂದ್ರ – ರಾಜ್ಯ ಸರ್ಕಾರಗಳು ಯಾವುದೇ ಕ್ರಮಗಳನ್ನು ವಹಿಸದೆ ನಿರ್ಲಕ್ಷ ತೋರುತ್ತಿವೆ.

ರಾಜ್ಯ ಸರ್ಕಾರ ಪೌರ ಕಾರ್ಮಿಕರನ್ನೆಲ್ಲಾ ಖಾಯಂಗೊಳಿಸಿದೆ ಎಂಬಂತೆ ಜನರ ನಡುವೆ ಬಿಂಬಿಸಲಾಗಿದೆ. ಇದು ವಾಸ್ತವ ಅಲ್ಲ.

ದುಡಿಮೆಯ ಸ್ಥಳಗಳಲ್ಲಿ ಮಹಿಳೆಯರ ಮೇಲಾಗುತ್ತಿರುವ ಲೈಂಗಿಕ ದಬ್ಬಾಳಿಕೆಗಳನ್ನು ತಡೆಯಲು ಸಮಿತಿಗಳನ್ನು ರಚಿಸಬೇಕು, ಎಲ್ಲ ದುಡಿಯುವ ಮಹಿಳೆಯರಿಗೂ ಹೆರಿಗೆ ಸೌಲಭ್ಯ ಮತ್ತು ಶಿಶುವಿಹಾರ ಮತ್ತು ವಿಶ್ರಾಂತಿ ಕೊಠಡಿಗಳ ಸೌಲಭ್ಯಗಳನ್ನು ಒದಗಿಸಬೇಕು.

ಕರ್ನಾಟಕ ಕಾರ್ಮಿಕ ಸಮ್ಮೇಳನ :

ಡಾ॥ ಬಿ.ಆರ್.ಅಂಬೇಡ್ಕರ್ ರವರು ಕಾರ್ಮಿಕ ಸಚಿವರಾಗಿ ಆರಂಭಿಸಿದ್ದ "ಭಾರತೀಯ ಕಾರ್ಮಿಕ ಸಮ್ಮೇಳನ" (ILC) ಮಾದರಿಯಲ್ಲಿ ರಾಜ್ಯದಲ್ಲೂ ಸಹಾ ತ್ರಿಪಕ್ಷೀಯವಾದ 'ಕರ್ನಾಟಕ ಕಾರ್ಮಿಕ ಸಮ್ಮೇಳನ' (KLC) ನಡೆಸಿ ಕಾರ್ಮಿಕರ ಬೇಡಿಕೆಗಳ ಕುರಿತು ಸರ್ವಸಮ್ಮತಿ ರೂಪಿಸಬೇಕೆಂಬ ಬೇಡಿಕೆ ಕುರಿತು ರಾಜ್ಯ ಸರ್ಕಾರವು ಕ್ರಮವಹಿಸುತ್ತಿಲ್ಲ.

2017 ಸೆಪ್ಟೆಂಬರ್ 14ರ ಮಹಾನಡೆ ರ್‍ಯಾಲಿ ವೇಳೆ ಡಾ॥ಬಿ.ಆರ್.ಅಂಬೇಡ್ಕರ್‌ರವರು ಕಾರ್ಮಿಕ ಸಚಿವರಾಗಿದ್ದ 75ನೇ ವರ್ಷಾಚರಣೆ ಅಂಗವಾಗಿ ಪ್ರಥಮ ಕರ್ನಾಟಕ ಸಮ್ಮೇಳನವನ್ನು 2017ರಲ್ಲಿ ನಡೆಸಬೇಕು, ಅದರಲ್ಲಿ ಕಾರ್ಮಿಕರ ಬೇಡಿಕೆಗಳ ಕುರಿತು ಸರ್ವಸಮ್ಮತಿ ರೂಪಿಸಬೇಕೆಂದು ರಾಜ್ಯ ಸರ್ಕಾರವನ್ನು ಕೋರಲಾಗಿತ್ತು. ಅದಕ್ಕೆ ಒಪ್ಪಿದ್ದ ಸರ್ಕಾರ, ಕರ್ನಾಟಕ ಕಾರ್ಮಿಕ ಸಮ್ಮೇಳನ ನಡೆಸುವ ಕ್ರಮವಹಿಸಲಿಲ್ಲ. ನುಡಿದಂತೆ ನಡೆಯಲಿಲ್ಲ.

ಮೇಕ್ ಇನ್ ಇಂಡಿಯಾ
ಮೇಕ್ ಇನ್ ಕರ್ನಾಟಕ :

ನವಭಾರತ ಎಂದು ಕೇಂದ್ರ ಸರ್ಕಾರ, ನವ ಕರ್ನಾಟಕ ಎಂದು ರಾಜ್ಯ ಸರ್ಕಾರ ಮುನ್ನೋಟ 2025 ಅನ್ನು ಪ್ರಕಟಿಸಿವೆ. ರಾಜ್ಯ ಸರ್ಕಾರವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಸಮೃದ್ಧ ಕರ್ನಾಟಕ, ಸೌಹಾರ್ದ ಕರ್ನಾಟಕ ಸಮತೆಯ ಕರ್ನಾಟಕ, ಅವಿಷ್ಕಾರಿ ಕರ್ನಾಟಕ, ಪ್ರಗತಿಪರ ಕರ್ನಾಟಕ ಮುಂತಾದ ಘೋಷಣೆಗಳನ್ನು ಪ್ರಕಟಿಸಿದೆ.

ಆದರೆ ಈ ಯಾವುದೇ ಘೋಷಣೆಗಳಲ್ಲೂ ದುಡಿಯುವ ಜನತೆಯ ಹಕ್ಕುಗಳ ಸಂರಕ್ಷಣೆಗೆ ಸಮಸ್ಯೆಗಳು ಪ್ರಶ್ನೆಗಳಿಗೆ ಉತ್ತರ ನೀಡುವ ಯಾವುದೇ ಕ್ರಮಗಳಿಲ್ಲದಾಗಿವೆ. ಬದಲಾಗಿ ಅವರ ಹಕ್ಕುಗಳನ್ನು ಕಸಿಯುವ ಬಂಡವಾಳಕ್ಕೆ ಅನುವುಗೊಳಿಸುವ ಕ್ರಮಗಳಾಗಿವೆ.

ಕೇಂದ್ರ–ರಾಜ್ಯ ಸರ್ಕಾರಗಳ ಘೋಷಣೆಗಳಿಗೆ ಪ್ರತಿಯಾಗಿ **CITU "ದುಡಿಯುವ ಜನತೆಯ ಹಕ್ಕುಗಳ ಸಂರಕ್ಷಣೆಗಾಗಿ ಸಮೃದ್ಧ–ಸಮಗ್ರ–ಸೌಹಾರ್ದ ಕರ್ನಾಟಕ"** ಎಂಬ ಘೋಷಣೆಯೊಂದಿಗೆ ದುಡಿಯುವ ಜನತೆಯ ಮೇಲೆ ವಿವರಿಸಿದ ಬೇಡಿಕೆಗಳ ಜೊತೆ 'ಕಾರ್ಮಿಕರ ಪ್ರಣಾಳಿಕೆ–2018' ಅನ್ನು ಪ್ರಕಟಿಸುತ್ತಿದೆ.

ಸಮೃದ್ಧ ಕರ್ನಾಟಕ ಸಮಗ್ರ ಕರ್ನಾಟಕ :

ರಾಜದಲ್ಲಿನ ಕಾರ್ಖಾನೆಗಳಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿನ ಒಟ್ಟು ಮೌಲ್ಯವರ್ಧನೆ ರೂ.2,34,204/– ಅದರಲ್ಲಿನ ವೇತನದ ಪಾಲು ರೂ. 38,604/– ಅಂದರೆ 16.45 ಶೇಕಡವಾದರೆ, ನಿವ್ವಳ ಲಾಭವು ರೂ.1,41,463/– ಅಂದರೆ 60.40 ಶೇಕಡವಾಗಿದೆ. ಸಮೃದ್ಧ ಕರ್ನಾಟಕ ಎಂದರೆ ಕಾರ್ಮಿಕರ ಮತ್ತು ದುಡಿಯುವ ಜನರ ಕನಿಷ್ಟ ಹಕ್ಕುಗಳನ್ನು ಸಂರಕ್ಷಿಸಿ ಬದುಕನ್ನು ಉಳಿಸುವ ಕರ್ನಾಟಕವಾಗಬೇಕಿದೆ. ಬಂಡವಾಳಕ್ಕೆ ದುಡಿಯುವ ಜನತೆಯನ್ನು ಬಲಿಕೊಡುವ ಕರ್ನಾಟಕವಾಗಬಾರದಾಗಿದೆ.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆಂದೇ ರಾಜ್ಯಕ್ಕೆ ಅನ್ವಯಿಸಿರುವ ಸಂವಿಧಾನದ ಪರಿಚ್ಛೇಧ 371(ಜೆ) ಅನ್ವಯ ಅಗತ್ಯ ಕ್ರಮಗಳನ್ನು ಸಮರ್ಥವಾಗಿ ಸಮರ್ಪಕವಾಗಿ ಜಾರಿಗೊಳಿಸಬೇಕಿದೆ.

ಸೌಹಾರ್ದ ಕರ್ನಾಟಕ :

ದುಡಿಯುವ ಜನರ ಹಕ್ಕುಗಳಿಗಾಗಿ, ಸಂಕಷ್ಟಕ್ಕೀಡಾಗಿರುವ ವಾರ್ಷಿಕ ಪರಿಸ್ಥಿತಿಯಲ್ಲಿ ರೈತರ– ಕೂಲಿಕಾರರ ಹಿತರಕ್ಷಣೆಗೆ ಜನತೆಯ ಹೋರಾಟವು ಹೆಚ್ಚುತ್ತಿರುವ ತೀವ್ರವಾಗುತ್ತಿರುವ ಸಂದರ್ಭದಲ್ಲಿ ಜನತೆಯ ಒಗ್ಗಟ್ಟನ್ನು ಮುರಿಯಲು ಹಲವಾರು ಕಡೆ ಕೋಮುವಾದಿ, ಮೂಲಭೂತವಾದಿ ಶಕ್ತಿಗಳು ಜನತೆಯನ್ನು ವಿಭಜಿಸಲು ಯತ್ನಿಸಿವೆ.

ಈ ಎಲ್ಲಾ ಕಾರಣಗಳಿಂದಾಗಿ **"ದುಡಿಯುವ ಜನರ ಹಕ್ಕುಗಳ ಸಂರಕ್ಷಣೆಗಾಗಿ ಸಮೃದ್ಧ ಸಮಗ್ರ ಸೌಹಾರ್ದ ಕರ್ನಾಟಕ"** ಘೋಷವಾಕ್ಯವನ್ನು ಕಾರ್ಮಿಕರ ಪ್ರಣಾಳಿಕೆ –2018 ಒಳಗೊಂಡಿದೆ. ಈ ನಿಟ್ಟಿನಲ್ಲಿ ಕಾರ್ಮಿಕ ಹಕ್ಕುಗಳನ್ನು ಇಲ್ಲದಾಗಿಸಲು ಕೇಂದ್ರ ಸರ್ಕಾರ ಮುಂದಾಗಿರುವಾಗ ಕಾರ್ಮಿಕ ಹಕ್ಕುಗಳನ್ನು ಬಲಪಡಿಸಲು ಕಾರ್ಮಿಕ ಹಕ್ಕುಗಳನ್ನು ಉಳಿಸಬೇಕೆಂಬ ಘೋಷಣೆಯನ್ನು ಸಿಐಟಿಯು ಮುಂದಿರಿಸಿದೆ.

ಮುಂಬರುವ 2018 ವಿಧಾನಸಭಾ ಚುನಾವಣೆಯಲ್ಲಿ ದುಡಿಯುವ ಜನತೆಯ ಮತ, ಐಕ್ಯತೆ ಮತ್ತು ಹಕ್ಕುಗಳಿಗಾಗಿ ಇರಬೇಕೆಂದು ಮನವಿ ಮಾಡುತ್ತದೆ. ದುಡಿಯುವ ಜನರ ಐಕ್ಯತೆಗೆ ಮತ್ತು ಹಕ್ಕುಗಳಿಗೆ ಧಕ್ಕೆ ತರುವ ಎಲ್ಲಾ ಶಕ್ತಿಗಳನ್ನು ಪ್ರತಿರೋಧಿಸಿ ಹಿಮ್ಮೆಟ್ಟಿಸಬೇಕೆಂದು ಕೋರುತ್ತಾ, ದುಡಿಯುವ ಜನತೆಯ ಪರ ಶಕ್ತಿಗಳನ್ನು ಬಲಪಡಿಸಬೇಕೆಂದು ವಿನಂತಿಸುತ್ತದೆ. ●

ಕಾರ್ಮಿಕರ ಪ್ರಣಾಳಿಕೆ–2018

* ರೂ. 18000 ಸಮಾನ ಕನಿಷ್ಟ ವೇತನ
* ಗುತ್ತಿಗೆ ಮುಂತಾದ ಕಾಯಂಯೇತ್ತರರ ಕಾಯಂಗೆ ಶಾಸನ
* ಸಮಾನ ಕೆಲಸಕ್ಕೆ ಸಮಾನ ವೇತನ ಸುಪ್ರೀಂ ಕೋರ್ಟ್ ತೀರ್ಪಿನ ಜಾರಿ
* ಸಂಘ ಮಾನ್ಯತೆಗೆ ಶಾಸನ ಸಾಮೂಹಿಕ ಚೌಕಾಸಿ ಹಕ್ಕಿನ ಖಾತ್ರಿ
* ಅಸಂಘಟಿತ ಕಾರ್ಮಿಕರ ಭವಿಷ್ಯನಿಧಿ ಶಾಸನ
* ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತ ಮಂಡಳಿಗೆ ನಿಧಿ–ಕಲ್ಯಾಣ ಯೋಜನೆಗಳು
* ಸ್ಕೀಂ ನೌಕರರಿಗೂ ಕನಿಷ್ಟ ವೇತನ ನೌಕರರಾಗಿ ಪರಿಗಣನೆ
* ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯ
* ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಿನ ಜಾರಿ
* ಸಾರ್ವಜನಿಕ ಉದ್ದಿಮೆಗಳ ಸಂರಕ್ಷಣೆ
* ಬೆಲೆ ಏರಿಕೆ ನಿಯಂತ್ರಣ
* ಸಾರ್ವತ್ರಿಕ ಪಡಿತರ ವ್ಯವಸ್ಥೆ
* ವಸತಿಹೀನ ಅಸಂಘಟಿತ ಕಾರ್ಮಿಕರಿಗೆ ವಸತಿ
* ಭಾರತೀಯ ಕಾರ್ಮಿಕ ಸಮ್ಮೇಳನ ಮಾದರಿ ಕರ್ನಾಟಕ ಕಾರ್ಮಿಕ ಸಮ್ಮೇಳನ
* ನಿರುದ್ಯೋಗ ನಿವಾರಣೆ ಉದ್ಯೋಗ ಸೃಷ್ಟಿ
* ಕೈಗಾರಿಕಾ ಕಾರ್ಮಿಕರ ನಿವೃತ್ತಿ ವಯಸ್ಸು 60 ಕ್ಕೆ ಹೆಚ್ಚಳ
* ನೂತನ ಪಿಂಚಣಿ ಬದಲು ಖಾತ್ರಿ ಪಿಂಚಣಿ
* ಡಾ॥ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ರೈತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ
* ಶಿಕ್ಷಣದ ಹಕ್ಕು ಕಾಯಿದೆ ಸಮರ್ಪಕ ಜಾರಿ
* ಆರೋಗ್ಯದ ಹಕ್ಕು
* ಕೃಷಿ ಕೂಲಿಕಾರ್ಮಿಕರಿಗೆ ಸೇವಾ ಸೌಲಭ್ಯಗಳ ಶಾಸನ

ವಿಶೇಷ ಲೇಖನ

ಭಾರತದಲ್ಲಿ ಇತರೇ ಯಾವುದೇ ದೇಶಕ್ಕೆ ಹೋಲಿಸಿದಾಗ ಸಾರ್ವಜನಿಕ ಆರೋಗ್ಯಕ್ಕೆ ಕಡಿಮೆ (ಜಿಡಿಪಿಯ ಹಾಗೂ ತಲಾ ಖರ್ಚುಗಳ ಪ್ರಮಾಣದಲ್ಲಿ) ಖರ್ಚು ಮಾಡಲಾಗುತ್ತಿದೆ. ನೆರೆಹೊರೆಯ ದೇಶಗಳಾದ ಶ್ರೀಲಂಕಾ, ಚೀನಾ ಹಾಗೂ ನೇಪಾಳವೂ ಕೂಡ ಆರೋಗ್ಯಕ್ಕೆ ಭಾರತಕ್ಕಿಂತ ಹೆಚ್ಚು ಹಣ ಖರ್ಚು ಮಾಡುತ್ತಿವೆ! ಇತ್ತೀಚೆಗೆ ರಾಷ್ಟ್ರೀಯ ಆರೋಗ್ಯ ವೆಚ್ಚದ ಅಂದಾಜಿನ ಪ್ರಕಾರ ವ್ಯಕ್ತಿ ತನ್ನ ಜೇಬಿನಿಂದ ಮಾಡಿದ ಖರ್ಚು ಒಟ್ಟು ಆರೋಗ್ಯ ವೆಚ್ಚದ 72.9% ಆಗಿದೆ ಹಾಗೂ ಸಾರ್ವಜನಿಕ ಆರೋಗ್ಯ ವೆಚ್ಚ ಒಟ್ಟು ಆಂತರಿಕ ವೆಚ್ಚದ 1.1% ಆಗಿದೆ. ಕಾಲ ಕ್ರಮೇಣ ಆರ್ಥಿಕ ನೀತಿಗಳು ಸಾರ್ವಜನಿಕ ಸೇವೆಗಳ ಮೇಲಿನ ವೆಚ್ಚವನ್ನು ಕಡಿಮೆ ಮಾಡಿದ್ದರಿಂದ ಆರೋಗ್ಯ ಹಾಗೂ ಶಿಕ್ಷಣ ಖಾಸಗೀ ಕ್ಷೇತ್ರದ ಮೇಲೆ ಅವಲಂಬಿಸಿದೆ. 1980ರ ಸುಮಾರಿಗೆ ಜನರು ಸಾರ್ವಜನಿಕ ಸೇವೆಗಿಂತ ಖಾಸಗೀ ಸೇವೆಗಳ ಮೇಲೆ ಅವಲಂಬಿಸಿದ್ದರು. ಆದರೆ 1990ರ ವೇಳೆಗೆ, ತೋರಿಸುವಂತೆ ಈ ಅವಲಂಬನೆ 80% ಗೆ ಏರಿದೆ.

(ಇದು ಭಾರತದ ಆರೋಗ್ಯ ಸೇವೆ ಬಗ್ಗೆ ದೀರ್ಘ ಲೇಖನದ ಎರಡನೇ ಭಾಗ. ಮೊದಲ ಭಾಗದಲ್ಲಿ ಭಾರತದ ಆರೋಗ್ಯ ಮತ್ತು ಆರೋಗ್ಯ ಸೇವೆಯ ಸ್ಥಿತಿ ಬಗ್ಗೆ ವಿವರಿಸಲಾಗಿತ್ತು. ಈ ಎರಡನೇ ಭಾಗದಲ್ಲಿ ಭಾರತದ ಆರೋಗ್ಯ ಸೇವೆ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಹೇಳಲಾಗಿದೆ. ಮುಂದಿನ ಭಾಗ 3ರಲ್ಲಿ ಪರಿಹಾರಗಳ ಬಗ್ಗೆ ಇರುತ್ತದೆ.)



ಭಾರತದ ಆರೋಗ್ಯ ಸೇವೆ: ಸ್ಥಿತಿ, ಸವಾಲುಗಳು, ಪರಿಹಾರಗಳು

ಡಾ. ಪ್ರಕಾಶ್ ರಾವ್

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಿರ್ಲಕ್ಷ

ಯಾವ ದೇಶದಲ್ಲಿ ಸಾರ್ವತ್ರಿಕ (Universal) ಆರೋಗ್ಯ ಪಾಲನೆ ವ್ಯವಸ್ಥೆ ಇದೆಯೋ ಅಲ್ಲಿ ಸಾರ್ವಜನಿಕ ಆರೋಗ್ಯ ಸ್ಥಿತಿಗತಿ ಸುಧಾರಿಸಿದೆ. ಕೇವಲ ಸಾರ್ವತ್ರಿಕ ಆರೋಗ್ಯ ಪಾಲನೆ (Universal Health Care) ವ್ಯವಸ್ಥೆಯಷ್ಟೆ ಆರೋಗ್ಯ ಕಾಪಾಡಲು ಸಾಕಾಗುವುದಿಲ್ಲ. ಒಳ್ಳೆ ಆರೋಗ್ಯಕ್ಕೆ ಸುಧಾರಿಸಿದ ಪೌಷ್ಟಿಕ ಆಹಾರ ಸೇವನೆ, ಕುಡಿಯುವ ನೀರು, ನೈರ್ಮಲ್ಯ ಸಾಧನೆ, ಉದ್ಯೋಗ, ಶಿಕ್ಷಣ, ಅಭಿವೃದ್ಧಿ, ಒಳ್ಳೆ ಕೆಲಸ, ಜೀವಿಸುವ ವಾತಾವರಣ, ಮಾದಕ–ದ್ರವ್ಯ ಚಟ ಇಲ್ಲದಿರುವುದು, ಪರಿಸರ ನೈರ್ಮಲ್ಯ ಹಾಗೂ ಅಸಮಾನತೆ ಇಲ್ಲದಿರುವುದು ಮುಖ್ಯವಾಗುತ್ತದೆ. ಬಡತನ ಕಡಿಮೆಯಾದಷ್ಟು ಆರೋಗ್ಯ ಸುಧಾರಣೆ ಸಾಧ್ಯವಾಗುತ್ತದೆ.

ಸೂಕ್ತ ಆರೋಗ್ಯ ಪಾಲನೆ ನೀಡಲು ಬಲಿಷ್ಠ ಹಾಗೂ ಸಮಗ್ರ ಆರೋಗ್ಯ ವ್ಯವಸ್ಥೆ ಇರಬೇಕಾಗುತ್ತದೆ. ಇದು ಜನರು ಆರೋಗ್ಯ ಪಾಲನೆಗೆ ಮಾಡುವ ಖರ್ಚು ಹಾಗೂ ಅವರ ಆರೋಗ್ಯ ಪಾಲನೆಯ ಅಗತ್ಯತೆಗಳನ್ನು ಬೇರ್ಪಡಿಸುತ್ತದೆ. ಇದು ಆರೋಗ್ಯ ವೆಚ್ಚವನ್ನು ಪರಿಣಾಮಕಾರಿಯಾಗಿ ಹತೋಟಿಗೆ ತರುತ್ತದೆ ಹಾಗೂ ಖಾಸಗೀ ಕ್ಷೇತ್ರ ನಿಯಂತ್ರಣವಿಲ್ಲದೇ ಬೆಳೆಯುವುದನ್ನು ಹತೋಟಿಗೆ ತರುತ್ತದೆ ಹಾಗೂ ಅನೈತಿಕ ಅನುಷ್ಠಾನವನ್ನು ತಡೆಗಟ್ಟುತ್ತದೆ.

ಭಾರತದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ನಿರಂತರವಾಗಿ ಕಡೆಗಣಿಸಲ್ಪಟ್ಟಿದೆ, ಕಡಿಮೆ ಹಣ ಹೂಡಿಕೆಗೆ ಒಳಗಾಗಿದೆ ಹಾಗೂ ಕೆಲವೇ ಸೇವೆಗಳನ್ನು ನೀಡುತ್ತಾ ಬಂದಿದೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು ಪ್ರಾರಂಭಿಸಿ ಕೆಲವು ಸೇವೆಗಳನ್ನು ಸೇರಿಸಿ ವ್ಯವಸ್ಥೆಯನ್ನು ಸ್ವಲ್ಪಮಟ್ಟಿಗೆ ಬಲಪಡಿಸಲಾಯಿತು. ಆದರೆ ಈಗ ತಿಳಿದುಬಂದಿರುವುದೇನೆಂದರೆ ಮುಂಗಡ ಪತ್ರದಲ್ಲಿ ಹಣಕಾಸಿನ ಕಡಿತದಿಂದ ವ್ಯವಸ್ಥೆ ಮೊದಲಿನ ಪರಿಸ್ಥಿತಿಗೆ ಹೋಗುತ್ತಿದೆ.

ಭಾರತದಲ್ಲಿ ಆರೋಗ್ಯಕ್ಕೆ ಕಡಿಮೆ ಹಣಕಾಸಿನ ಹೂಡಿಕೆಯಿಂದಾಗಿ ಅಗತ್ಯ ಆರೋಗ್ಯ ತಳರಚನೆಯನ್ನು ಸಾಧಿಸಲಾಗುತ್ತಿಲ್ಲ. ಆರೋಗ್ಯ ಕಾಯ/ಪಡೆಯನ್ನು ಕಟ್ಟಲಾಗುತ್ತಿಲ್ಲ. ಅಗತ್ಯ ಉಪಕರಣ, ರೋಗನಿದಾನ ಸೌಲಭ್ಯ ಹಾಗೂ ಔಷಧಿಗಳನ್ನು ದೊರಕುವಂತೆ ಮಾಡಲಾಗುತ್ತಿಲ್ಲ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಪರಿಣಾಮಕಾರಿಯಾಗಲು ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಯ ಹಾಸಿಗೆ, ಹಾಗೂ ವೈದ್ಯರ ದಾದಿಯರ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿಲ್ಲ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಲ್ಲಿ 23 ಸಾವಿರ ವೈದ್ಯರು, 35 ಶವಿರ ದಾದಿಯರು 70 ಸಾವಿರ ಎ.ಎನ್.ಎಮ್ ಹಾಗೂ 10 ಸಾವಿರ ಆಡಳಿತ ಮಂಡಲಿ ಸಿಬ್ಬಂದಿಗಳನ್ನು ಸೇರಿಸಿಕೊಂಡ ಮೇಲೆ ಅದು ಸ್ವಲ್ಪ ಮಟ್ಟಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಸರಕಾರದ ಸಾರ್ವಜನಿಕ ಆರೋಗ್ಯ ಗುಣಮಟ್ಟಕ್ಕನುಗುಣವಾಗಿ ಈಗಿರುವ ಸಿಬ್ಬದಿಗಳು ಕೇವಲ ಮೂರನೆ ಒಂದು ಭಾಗದಷ್ಟು ಮಾತ್ರ ಇದೆ. ಈಗ ಸೇರಿಸಲಾದ ಸಿಬ್ಬಂದಿಗಳನ್ನು ಗುತ್ತಿಗೆ ಮೇಲೆ ತೆಗೆದುಕೊಳ್ಳಲಾಗಿದೆ ಹಾಗೂ ಅವರಿಗೆ ಇತರೇ ಸಿಬ್ಬಂದಿಗಿರುವ ಜವಾಬ್ದಾರಿಯನ್ನು ನಿಗದಿಪಡಿಸಿ ಅವರಿಗೆ ಕೊಡುವ ಅರ್ಧದಷ್ಟು ಸಂಬಳವನ್ನು ನೀಡಲಾಗುತ್ತಿದೆ ಹಾಗೂ ಅವರಿಗೆ ಯಾವ ತರಹದ ಕೆಲಸದ ಸಮಯದ ವ್ಯಾಪ್ತಿಯನ್ನು ನಿಗದಿಪಡಿಸಲಾಗಿಲ್ಲ.

ರಾಜ್ಯದಲ್ಲಿ ಉಪಕೇಂದ್ರಗಳು (SC) ಪ್ರಾಥಮಿಕ ಆರೋಗ್ಯ ಕೇಂದ್ರ (PHC) ಹಾಗೂ ಸಮುದಾಯ ಆರೋಗ್ಯ ಕೇಂದ್ರ(CHC)ಗಳ ಸಂಖ್ಯೆ ಕಡಿಮೆ ಇದೆ. ರಾಷ್ಟ್ರೀಯವಾಗಿ 10 ಸಾವಿರ ಜನಸಂಖ್ಯೆಗೆ ಕೇವಲ 0.16 ಸೌಲಭ್ಯಗಳಿದ್ದು, ಸುಮಾರು 5.5 ಸರಕಾರಿ ರೋಗಿ ಹಾಸಿಗೆಗಳಿವೆ. ಹೊರರೋಗಿ ವಿಭಾಗದಲ್ಲಿ ರೋಗಿಯ ಸಂಖ್ಯೆ 55(1000 ಜನಸಂಖ್ಯೆಗೆ) 1995–96 ರಿಂದ 100.7 2014ಕ್ಕೆ ಏರಿದೆ ಹಾಗೂ ಈ ಏರಿಕೆ ಪಟ್ಟಣಗಳಲ್ಲಿ ಗ್ರಾಮೀಣ ಪ್ರದೇಶಕ್ಕಿಂತ ಹೆಚ್ಚಾಗಿದೆ. ಇದೇ ವೇಳೆಯಲ್ಲಿ ಒಳರೋಗಿಗಳ ಸಂಖ್ಯೆ ಮೂರುಪಟ್ಟು ಹೆಚ್ಚಿದೆ ಅಂದರೆ 15 ರಿಂದ 44ಕ್ಕೆ(1000 ಜನಸಂಖ್ಯೆಗೆ) (1995–96) ಆದರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಯ ಹಾಸಿಗೆ ಸಂಖ್ಯೆ 1980 ರಿಂದ ಅದೇ ಮಟ್ಟದಲ್ಲಿದೆ.

ಉಪಕೇಂದ್ರಗಳಲ್ಲಿ (ಎಸ್‌ಸಿ) 21 ರಾಜ್ಯಗಳಲ್ಲಿ ಸೌಲಭ್ಯಗಳ ಕಡಿತ ಕಂಡುಬಂದಿದೆ ಹಾಗೂ ಉಪಕೇಂದ್ರಗಳ ಸಂಖ್ಯೆಯಲ್ಲೂ ಕಡಿತ ಕಂಡುಬಂದಿದೆ. ಕೋಷ್ಟಕ 1ರಲ್ಲಿ ಹೆಚ್ಚು ಕಡಿತ ಇರುವ ರಾಜ್ಯಗಳ ವಿವರಗಳನ್ನು ಕೊಡಲಾಗಿದೆ.

ಜಮ್ಮು	44%
ಉತ್ತರ ಪ್ರದೇಶ	33.9%
ಝಾರಖಂಡ	34.5%
ಮೇಘಾಲಯ	46.6%
ಬಿಹಾರ್	47.7%
ದೆಹಲಿ	50.6%

ಕೋಷ್ಟಕ 1 – ಉಪಕೇಂದ್ರಗಳಲ್ಲಿ ಸೌಲಭ್ಯಗಳ ಕಡಿತದ ಪ್ರಮಾಣ

ಅದೇ ರೀತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಉತ್ತರಪ್ರದೇಶ, ದೆಹಲಿ, ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಝಾರಖಂಡಗಳಲ್ಲಿ 28.6 ರಿಂದ 69.8% ಸೌಲಭ್ಯಗಳ ಕೊರತೆ ಕಂಡುಬಂದಿದೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಪ್ರತಿಶತ 30ಕ್ಕಿಂತ ಹೆಚ್ಚು ಸೌಲಭ್ಯಗಳ ಕೊರತೆ ಮಧ್ಯಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಲ, ಆಂಧ್ರಪ್ರದೇಶ, ಕರ್ನಾಟಕ, ಸಿಕ್ಕಿಂ, ಅಸ್ಸಾಂ, ತ್ರಿಪುರ, ಉತ್ತರ ಪ್ರದೇಶ, ಬಿಹಾರ ಹಾಗೂ ದೆಹಲಿಯಲ್ಲಿ ಕಂಡುಬಂದಿದೆ. ರಾಷ್ಟ್ರೀಯವಾಗಿ ಕಂಡುಬಂದ ಕಡಿತ – ಉಪಕೇಂದ್ರದಲ್ಲಿ 30.1%, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 24.1%, ಹಾಗೂ ಸಮುದಾಯ ಆರೋಗ್ಯ ಕೇಂದ್ರದಲ್ಲಿ 37.9% (ಭಾರತ ಸರಕಾರ ಅಂಕೆ–ಸಂಖ್ಯೆ). 76.4% ಉಪಕೇಂದ್ರಗಳಲ್ಲಿ ನೀರಿನ ಸರಬರಾಜಿಲ್ಲ. 63.3% ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ 54.6% ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನೀರು ಲಭ್ಯವಿಲ್ಲ. 32.5% ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆರಿಗೆ ಕೋಣೆ ಇಲ್ಲ. 10 ರಲ್ಲಿ 7 (70.9) ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವಿದ್ಯುತ್ ಸೌಲಭ್ಯವಿಲ್ಲ. (ಎನ್.ಆರ್.ಹೆಚ್.ಎಂ 2011) ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಕೆ ಪೂರ್ತಿ ಮಟ್ಟದಲ್ಲಿ ಆಗದಿರುವುದಕ್ಕೆ ಕಾರಣ, ಅಲ್ಲಿ ಎಲ್ಲ ಪ್ರಾಥಮಿಕ ಪಾಲನಾ ಸೇವೆಗಳು ಲಭ್ಯವಿಲ್ಲದಿರುವುದು ಸುಮಾರು ಎಲ್ಲ ಉಪಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಲಸಿಕೆ ಸೇವೆಯೊಂದಿಗೆ ಕೇವಲ ಕೆಲವೇ ಸೇವೆಗಳನ್ನು ನೀಡುತ್ತಿರುವುದು. ಉದಾ: ಗರ್ಭಿಣಿ ಪರೀಕ್ಷೆ, ದೀರ್ಘಕಾಲದ ಆರೋಗ್ಯ ಸಮಸ್ಯೆಗಳಾದ ರಕ್ತದ ಏರೊತ್ತಡ, ಸಕ್ಕರೆ ಕಾಯಿಲೆ ಇದ್ದವರನ್ನು ಬೇರೆಡೆಗೆ ಚಿಕಿತ್ಸೆಗೆ ಕಳುಹಿಸುತ್ತಾರೆ. ಅದೇ ರೀತಿ ರಾಷ್ಟ್ರೀಯ ಕಾರ್ಯಕ್ರಮದಡಿ ಚಿಕಿತ್ಸೆ ನೀಡಬೇಕಾದ ಸಾಂಕ್ರಾಮಿಕ ರೋಗಗಳನ್ನು ಬಿಟ್ಟು ಬೇರೆ ಸಾಂಕ್ರಾಮಿಕ ರೋಗಗಳು ಚಿಕಿತ್ಸೆಗೆ ಇತರೆಡೆಗೆ ಕಳುಹಿಸುತ್ತಾರೆ. ಇದರರ್ಥ ಕೇವಲ ಆರೋಗ್ಯ ಅಗತ್ಯತೆಗಳ ಕೇವಲ 20% ಮಾತ್ರ ಈ ಕೇಂದ್ರಗಳು ನಿರ್ವಹಿಸುತ್ತಿವೆ. ತಳರಚನೆಯನ್ನು ವಿಸ್ತರಿಸುವಿಕೆ, ಖಾಲೀ ಹುದ್ದೆಗಳನ್ನು ತುಂಬುವಿಕೆಯೊಂದಿಗೆ ಗುಣಮಟ್ಟದ ಚಿಕಿತ್ಸೆ ನೀಡುವುದರ ಬಗ್ಗೆ ಈ ಕೇಂದ್ರ ಕೂಡಲೆ ಜವಾಬ್ದಾರಿ ವಹಿಸಬೇಕಿದೆ.

ಸಾರ್ವಜನಿಕ ಆರೋಗ್ಯಕ್ಕೆ ಕಡಿಮೆ ಖರ್ಚು: ಜನರ ಜೇಬಿನಿಂದ ಹೆಚ್ಚು ಖರ್ಚು

ಭಾರತದಲ್ಲಿ ಇತರೇ ಯಾವುದೇ ದೇಶಕ್ಕೆ ಹೋಲಿಸಿದಾಗ ಸಾರ್ವಜನಿಕ ಆರೋಗ್ಯಕ್ಕೆ ಕಡಿಮೆ (ಜಿಡಿಪಿಯ ಹಾಗೂ ತಲಾ ಖರ್ಚುಗಳ ಪ್ರಮಾಣದಲ್ಲಿ) ಖರ್ಚು ಮಾಡಲಾಗುತ್ತಿದೆ. ನೆರೆಹೊರೆಯ ದೇಶಗಳಾದ ಶ್ರೀಲಂಕಾ, ಚೀನಾ ಹಾಗೂ ನೇಪಾಳವೂ ಕೂಡ ಆರೋಗ್ಯಕ್ಕೆ ಭಾರತಕ್ಕಿಂತ ಹೆಚ್ಚು ಹಣ ಖರ್ಚು ಮಾಡುತ್ತಿವೆ! ಪ್ರತಿ ವ್ಯಕ್ತಿಗೂ ಆರೋಗ್ಯದ ಮೇಲೆ ಸಾರ್ವಜನಿಕ ಹಣ ಹೂಡಿಕೆ ಅತಿ ಬಡದೇಶಗಳ ಹೂಡಿಕೆಯಷ್ಟಿದೆ ಹಾಗೂ ಮಧ್ಯ ಆದಾಯದ ದೇಶಕ್ಕಿಂತಲೂ ಬಹಳ ಕಡಿಮೆ ಇದೆ. ಇತ್ತೀಚೆಗೆ ಜಾಗತಿಕ ಆರೋಗ್ಯ ಪಾಲನೆ ವ್ಯವಸ್ಥೆ ಅಳವಡಿಸಿರುವ ಬ್ರೆಜಿಲ್, ಥೈಲ್ಯಾಂಡ್ ಹಾಗೂ ದಕ್ಷಿಣ ಆಫ್ರಿಕಾ ಆರೋಗ್ಯಕ್ಕೆ ಒಟ್ಟು ಆಂತರಿಕ ಉತ್ಪನ್ನದ 3.5% ಹಣವನ್ನು ಮೇಲೆ ಖರ್ಚು ಮಾಡುತ್ತಿವೆ, ಆದರೆ ಭಾರತ ಕೇವಲ 1% ಹಣವನ್ನು ಖರ್ಚುಮಾಡುತ್ತಿವೆ.

ಆರೋಗ್ಯಕ್ಕೆ ಹಣಕಾಸಿನ ಹೂಡಿಕೆ

ಸಾರ್ವಜನಿಕ ಆರೋಗ್ಯ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರು ಹೂಡಿಕೆ ಇತರೇ ದೇಶಗಳಿಗೆ ಹೋಲಿಸಿದರೆ ಅತಿ ಕಡಿಮೆ ಇದೆ (1.1%).

ಭಾರತ ಆರೋಗ್ಯ ಕ್ಷೇತ್ರದಲ್ಲಿ ಅತಿ ಹೆಚ್ಚು ಖಾಸಗೀಕರಣ ಹೊಂದಿದ ದೇಶ. ಆರೋಗ್ಯದ ಮೇಲೆ ಮಾಡಿದ 100 ರೂ. ವೆಚ್ಚದಲ್ಲಿ 70 ರೂ. ಗಿಂತ ಹೆಚ್ಚು ಹಣ ಜನರ ಜೇಬಿನಿಂದಲೇ ಬರುತ್ತದೆ. ಅಂದರೆ ಜನರೇ ಮಾಡಿದ ಆರೋಗ್ಯ ವೆಚ್ಚ.

- ಈ ಆರೋಗ್ಯ ವೆಚ್ಚದಿಂದಾಗಿ ಪ್ರತಿ ವರ್ಷ 5.5 ಕೋಟಿ ಜನರು ಬಡತನ ರೇಖೆಗಿಂತ ಕೆಳಗೆ ಸರಿಯುತ್ತಿದ್ದಾರೆ. ಇದು ಜಗತ್ತಿನ 177 ದೇಶಗಳ ಜನಸಂಖ್ಯೆಗಿಂತ ಹೆಚ್ಚು.
- ಔಷಧಿಗಳ ಮೇಲೆ ಮಾಡುವ ವೆಚ್ಚ 3.4 ಕೋಟಿ ಜನರನ್ನು ಬಡತನಕ್ಕೆ ತಳ್ಳುತ್ತದೆ.
- 2004 ರಲ್ಲಿ 30% ಗ್ರಾಮೀಣ ಜನರು ಹಾಗೂ 20% ಪಟ್ಟಣದ ಜನರು ಅನಾರೋಗ್ಯದಿಂದ ಬಳಲುತ್ತಿದ್ದರೂ, ಹಣಕಾಸಿನ ಬಿಕ್ಕಟ್ಟಿನಿಂದಾಗಿ ಚಿಕಿತ್ಸೆ ಪಡೆಯಲು ಸಾಧ್ಯವಾಗಲಿಲ್ಲ.
- ಆರ್ಥಿಕ ಹಾಗೂ ಸಾಮಾಜಿಕವಾಗಿ, ಹಿಂದುಳಿದ ಜನರು ಚಿಕಿತ್ಸೆಯ ಖರ್ಚಿನಿಂದಾಗಿ ಬಡತನ ರೇಖೆಯಿಂದ ಕೆಳಗಿಳಿಯುತ್ತಿದ್ದಾರೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಕುಂಠಿತಗೊಂಡಿರುವುದರಿಂದ ಜನರು ಚಿಕಿತ್ಸೆ ಪಡೆಯಲು ಖಾಸಗೀ ವ್ಯವಸ್ಥೆಗೆ ಮೊರೆ ಹೋಗುತ್ತಾರೆ ಅಥವಾ ಸಾರ್ವಜನಿಕ ಆಸ್ಪತ್ರೆಯ ಆದೇಶದಂತೆ ಖಾಸಗಿ ಔಷಧಿ ಅಂಗಡಿಗಳಿಂದ ಚಿಕಿತ್ಸೆ ಪಡೆಯುತ್ತಾರೆ. ಭಾರತೀಯರು ತಮ್ಮ ಚಿಕಿತ್ಸೆಗೆ ಹಣಕೊಟ್ಟು ಕೊಳ್ಳಬೇಕಾಗಿರುವುದು, ಒಟ್ಟು ವೆಚ್ಚದ 73% ಆಗಿದ್ದು ಅದು ಜಗತ್ತಿನ ಯಾವುದೇ ದೇಶಕ್ಕೆ ಹೋಲಿಸಿದರೂ ಅತಿ ಹೆಚ್ಚಾಗಿದೆ. ಭಾರತದಲ್ಲಿ ಆರೋಗ್ಯಕ್ಕೆ ಒಟ್ಟು 100 ರೂ. ಖರ್ಚಾದರೆ ಸರಕಾರ ಕೇವಲ 27 ರೂಪಾಯಿಗಳನ್ನು ಖರ್ಚು ಮಾಡುತ್ತದೆ. ಯಾವ ವ್ಯವಸ್ಥೆಯಲ್ಲಿ ಹಣ ಪಡೆದು ಚಿಕಿತ್ಸೆ ಪಡೆಯಬೇಕಾಗುತ್ತದೋ, ಅಲ್ಲಿ ಅನೇಕರಿಗೆ ಚಿಕಿತ್ಸೆ ದೊರಕದಿರುವಿಕೆ, ಅನೇಕ ರೋಗಿಗಳು ಚಿಕಿತ್ಸೆ ಪಡೆಯದಿರುವಿಕೆ, ತಡೆಗಟ್ಟಬಹುದಾದ ಸಾವುಗಳ ಸಂಭವಿಸಿ ಜನರು ಬಡತನದತ್ತ ಸರಿಯುತ್ತಾ, ಸಾಲಗಾರರಾಗುತ್ತಾರೆ. ಭಾರತದಲ್ಲಿ ಬಡಜನರು ತಮ್ಮ ಆಸ್ತಿ ಮಾರಿ ಚಿಕಿತ್ಸೆ ಪಡೆಯಬೇಕಾದ ಸನ್ನಿವೇಶ ಬಂದೊದಗಿದೆ. ಜನರು ದಿನನಿತ್ಯದ ಹೊರರೋಗಿ ಚಿಕಿತ್ಸೆಗೆ ತಮ್ಮ ಜೇಬಿನಿಂದ ಹಣ ಖರ್ಚು ಮಾಡುತ್ತಿದ್ದು, ಇತ್ತೀಚೆಗೆ ಆಸ್ಪತ್ರೆಗೆ ಹೋದಾಗ ವಿಪರೀತ ಖರ್ಚು ಮಾಡುವ ಪರಿಸ್ಥಿತಿ ಬಂದೊದಗಿದೆ. ಇತ್ತೀಚೆಗೆ ರಾಷ್ಟ್ರೀಯ ಆರೋಗ್ಯ ವೆಚ್ಚದ ಅಂದಾಜಿನ ಪ್ರಕಾರ ವ್ಯಕ್ತಿ ತನ್ನ ಜೇಬಿನಿಂದ ಮಾಡಿದ ಖರ್ಚು ಒಟ್ಟು ಆರೋಗ್ಯ ವೆಚ್ಚದ 72.9% ಆಗಿದೆ ಹಾಗೂ ಸಾರ್ವಜನಿಕ ಆರೋಗ್ಯ ವೆಚ್ಚ ಒಟ್ಟು ➚

ಆಂತರಿಕ ವೆಚ್ಚದ 1.1% ಆಗಿದೆ.

ಖಾಸಗಿ ಆರೋಗ್ಯ ಕ್ಷೇತ್ರದ ಬೆಳವಣಿಗೆ ಹಾಗೂ ಸಾರ್ವಜನಿಕ ವಿಮೆ ವಿಸ್ತರಣೆ

ಕಾಲ ಕ್ರಮೇಣ ಆರ್ಥಿಕ ನೀತಿಗಳು ಸಾರ್ವಜನಿಕ ಸೇವೆಗಳ ಮೇಲಿನ ವೆಚ್ಚವನ್ನು ಕಡಿಮೆ ಮಾಡಿದ್ದರಿಂದ ಆರೋಗ್ಯ ಹಾಗೂ ಶಿಕ್ಷಣ ಖಾಸಗೀ ಕ್ಷೇತ್ರದ ಮೇಲೆ ಅವಲಂಬಿಸಿದೆ. 1980ರ ಸುಮಾರಿಗೆ ಜನರು ಸಾರ್ವಜನಿಕ ಸೇವೆಗಿಂತ ಖಾಸಗೀ ಸೇವೆಗಳ ಮೇಲೆ ಅವಲಂಬಿಸಿದ್ದರು. ಆದರೆ 1990ರ ವೇಳೆಗೆ, ಕೋಷ್ಟಕ 2 ತೋರಿಸುವಂತೆ ಈ ಅವಲಂಬನೆ 80% ಗೆ ಏರಿದೆ.

ಹಿಂದಿನ ದಶಕದಲ್ಲಿ ಸರಕಾರದ ಆರ್ಥಿಕ ನೀತಿ ಹಾಗೂ ಆದ್ಯತೆಗಳಲ್ಲಿ ಬದಲಾವಣೆಗಳಾಗಿವೆ. ಆರೋಗ್ಯ ಸೇವೆಗಳನ್ನು ನೀಡಲು ಖಾಸಗೀ ಕ್ಷೇತ್ರವನ್ನು ಬಳಸಿಕೊಳ್ಳಲಾಗಿದೆ ಹಾಗೂ ಆರೋಗ್ಯ ಸೇವೆಗಳನ್ನು ಸುಧಾರಿಸುತ್ತೇವೆ ಎಂದು ಹೇಳುವ ನೆಪದಲ್ಲಿ ಸಾರ್ವಜನಿಕ (ಸರ್ಕಾರದ) ದುಡ್ಡನ್ನು ಬಳಸಿಕೊಳ್ಳಲಾಗುತ್ತಿದೆ. ಈ ಬೆಳವಣಿಗೆಯನ್ನು ಅರುಣಾಚಲ ಪ್ರದೇಶ ಹಾಗೂ ಕರ್ನಾಟಕದಲ್ಲಿ ನೋಡಬಹುದಾಗಿದೆ. ಇದಲ್ಲದೇ ಬಿಹಾರ ಹಾಗೂ ಪಶ್ಚಿಮ ಬಂಗಾಳದಲ್ಲಿ ಸರಕಾರ ವೈದ್ಯಕೀಯ ಪ್ರಯೋಗಾಲಯಗಳ ಸೇವೆಗಳನ್ನು ಖಾಸಗೀ ಕ್ಷೇತ್ರದಿಂದ ಪಡೆಯಲಾಗುತ್ತದೆ. ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ ಹಾಗೂ ಆರೋಗ್ಯಶ್ರೀ ವಿಮಾ ಯೋಜನೆಗಳಲ್ಲಿ ಸರಕಾರ ಹಣ ಹೂಡಿ ಖಾಸಗೀ ಕ್ಷೇತ್ರಕ್ಕೆ ಲಾಭ ಮಾಡಿಕೊಡಲಾಗುತ್ತಿದೆ. ಈ ಯೋಜನೆಗಳಿಂದ ಜನರಿಗೆ ಕಡಿಮೆ ಸೌಲಭ್ಯಗಳು ದೊರಕಿದಂತಾಗುತ್ತಿವೆ, ಹಾಗೂ ಬಡಜನರಿಗೆ ಸೇವೆಗಳು ನಿರಾಕರಣೆಯಾಗುತ್ತಿವೆ. ಇದರ ಪರಿಣಾಮ ಜನರು ಆರೋಗ್ಯ ಸೇವೆ ಪಡೆಯಲು ತಮ್ಮ ಜೇಬಿನಿಂದ ಖರ್ಚು ಮಾಡುವ ಪ್ರಸಂಗ ಬಂದೊದಗಿದೆ.

ಖಾಸಗಿ ಕ್ಷೇತ್ರದ ತೀವ್ರ ಬೆಳವಣಿಗೆಯಾದರೂ ಅದು ಎಲ್ಲೆಡೆ ದೊರಕುವಂತಾದರೂ, ಅಲ್ಲಿ ಕೆಲವು ಗಂಭೀರ ಸಮಸ್ಯೆಗಳಿವೆ. ಇದಕ್ಕೆ ಕಾರಣ ಖಾಸಗೀ ಕ್ಷೇತ್ರ. ವ್ಯಾಪಾರೀ ಮನೋವೃತ್ತಿಯಿಂದ ಅಪಾರ ಲಾಭ ಮಾಡಲು ಮುಂದಾಗಿರುವುದು ಹಾಗೂ ಯಾವುದೇ ನಿಯಂತ್ರಣವಿಲ್ಲದಿರುವುದು. ಇದರಿಂದಾಗಿ ಗ್ರಾಮೀಣ ಹಾಗೂ ಪಟ್ಟಣಗಳ ಸೇವೆಗಳಲ್ಲಿ ಅಸಮಾನತೆ, ಸೇವೆಗಳು ಉಪಯೋಗಕ್ಕೆ ಬಾರದಂತಾಗಿರುವುದು, ಅನಗತ್ಯ ಹಾಗೂ ಅಸಮಂಜಸ ಚಿಕಿತ್ಸೆಯಿಂದ ಜನರ ಶೋಷಣೆ, ಹೆಚ್ಚು ಚಿಕಿತ್ಸಾವೆಚ್ಚ, ಗುಣಮಟ್ಟದ ಚಿಕಿತ್ಸೆ ಇಲ್ಲದಿರವುದು ಹಾಗೂ ರೋಗಿಗಳ ಹಕ್ಕು ಉಲ್ಲಂಘನೆಯಾಗಿರುವುದು ವ್ಯಾಪಕವಾಗಿ ಕಂಡುಬರುತ್ತದೆ. ಜನರ ಮೇಲೆ ಈ ಹೊರೆಯಲ್ಲದೆ, ಔಷಧಿ ಕಂಪನಿಗಳು ತಯಾರಿಸುವ, ಮಾರುವ ಅಸಮಂಜಸ(ಅನುಪಯುಕ್ತ, ದುಬಾರಿ) ಔಷಧಿಗಳು, ಅನಗತ್ಯ ಸಂಮಿಶ್ರ ಔಷಧಿಗಳು, ದುಬಾರಿ ಔಷಧಿಗಳು ಹೊರೆಯಾಗಿವೆ. ಹಿಂದಿನ 20 ವರ್ಷಗಳಲ್ಲಿ ಖಾಸಗೀ ವೈದ್ಯಕೀಯ ಕಾಲೇಜುಗಳು ಹೆಚ್ಚುತ್ತಿದ್ದು ಇದು ಖಾಸಗೀ ವೈದ್ಯಕೀಯ ಕ್ಷೇತ್ರದ ಬಲವರ್ಧನೆಗೆ ಕಾರಣವಾಗಿದೆ. ಭಾರತದಲ್ಲಿ ಕೆಲವು ಖಾಸಗೀ ವೈದ್ಯಕೀಯ ಕೇಂದ್ರಗಳನ್ನು ಬಿಟ್ಟರೆ ಈ ಕ್ಷೇತ್ರ ಸಾಮಾನ್ಯವಾಗಿ ಕಡಿಮೆ ಗುಣಮಟ್ಟದ ಹಾಗೂ ದುಬಾರಿ ಚಿಕಿತ್ಸೆ ನೀಡುತ್ತಿದೆ.

ಸೆಂಟ್ರಲ್ ಡ್ರಗ್ ಸ್ಟ್ಯಾಂಡರ್ಡ್ಸ್ ಕಂಟ್ರೋಲ್ ಓರ್ಗನೈಝೇಷನ್ (CDSCO), ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ವೈದ್ಯರ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್, ವೈದ್ಯ ಕ್ಷೇತ್ರದ ಮೇಲ್ವಿಚಾರಣೆ ಹಾಗೂ ನಿಯಂತ್ರಣದ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಹಿಂದೆ ಬಿದ್ದಿದೆ.

ಖಾಸಗೀ ಕ್ಷೇತ್ರದಲ್ಲಿ ಸಮಸ್ಯೆಗಳಿದ್ದಾಗ್ಯೂ, ಈ ಕೇಂದ್ರಗಳಿಗೆ ಸರಕಾರ ಸಾರ್ವಜನಿಕರಿಗೆ ಸೇವೆ ಒದಗಿಸುತ್ತೇವೆ ಎಂಬ ನೆಪ ಹೂಡಿ ಅಪಾರ ಹಣವನ್ನು ನೀಡುತ್ತಿವೆ. ಅರೋಗ್ಯ ವಲಯದ ಕೇಂದ್ರ ಹಾಗೂ ರಾಜ್ಯ ಸರಕಾರದ ಸಂಸ್ಥೆಗಳು, ವಿಮಾ ಕಂಪನಿಗಳನ್ನು ಹುಟ್ಟುಹಾಕಿ ಜನರಿಗೆ ಆರೋಗ್ಯ ಸೇವೆಗಳನ್ನು ಒದಗಿಸಲು ಈ ವಿಮಾ ಕಂಪನಿಗಳಿಗೆ ನಿರಂತರವಾಗಿ ಹಣ (Premium) ನೀಡುತ್ತಿವೆ ಹಾಗೂ ಇದು ಸರಕಾರದ ಮೇಲೆ ಹೊರೆಯಾಗಿದೆ. ಕರ್ನಾಟಕದ ಯಶಸ್ವಿನಿ ಆರೋಗ್ಯ ವಿಮಾ ಯೋಜನೆ 2003ರಲ್ಲಿ ಹಾಗೂ ಆಂಧ್ರಪ್ರದೇಶದ ರಾಜೀವ್ ಅರೋಗ್ಯಶ್ರೀ ವಿಮಾ ಯೋಜನೆ 2007 ಪ್ರಾರಂಭಿಸಿದ ನಂತರ 2007ರಲ್ಲಿ ಕೇಂದ್ರದ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಗಳು (ಕೇಂದ್ರ ಹಾಗೂ ರಾಜ್ಯದ) 2010ರಲ್ಲಿ ಸುಮಾರು 902 ದಶಲಕ್ಷ ಜನರನ್ನು (ದೇಶದ 25% ಜನರು) ತಲುಪುತ್ತದೆಂದು ಸರಕಾರ ಹೇಳುತ್ತಿತ್ತು, ಆದರೆ ಅದರಲ್ಲಿ ನಿಜಾಂಶ ಇಲ್ಲವೆಂದು ನಂತರ ತಿಳಿದುಬಂದಿದೆ. ಈ ಯೋಜನೆಯಲ್ಲಿ ದ್ವಿತೀಯ ಹಾಗೂ ತೃತೀಯ ಆರೋಗ್ಯ ಸೇವೆಗಳು (ಆಸ್ಪತ್ರೆ ಚಿಕಿತ್ಸೆ) ದೊರಕುತ್ತಿದ್ದು, ಕಾರ್ಮಿಕರಿಗೆ ಈ.ಎಸ್.ಐ.ಎಸ್ (Employee's State Insurance Scheme-ESIS) ಹಾಗೂ ಕೇಂದ್ರ ಸರ್ಕಾರದ ಸಿ.ಜಿ.ಹೆಚ್.ಎಸ್ (Central Government Health Service) ಸೇರಿವೆ.

ಈ ಯೋಜನೆಗಳು, ನೀತಿ ರೂಪಿಸುವವರು ಹಾಗೂ ರಾಜಕಾರಣಿಗಳಿಗೆ ಜನಪ್ರಿಯವಾಗಿ ಕಂಡರೂ, ಇವು ಅಪಾಯಕರವಾಗದಿದ್ದರೂ, ಸರ್ಕಾರ ಈ ಯೋಜನೆಗೆ ಆರ್ಥಿಕ ರಕ್ಷಣೆ ನೀಡುತ್ತಿಲ್ಲ. 2014ರ ಎನ್.ಎಸ್.ಎಸ್.ಓ ಸಮೀಕ್ಷೆ ಪ್ರಕಾರ ಕೇವಲ 13% ಜನರು ಈ ಬೀಮಾ ಯೋಜನೆಯಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಗ್ರಾಮೀಣ ಬಡಜನರು (10.6) ಹಾಗೂ ಪಟ್ಟಣದ ಬಡಜನರು (8.6%) ಈ ವಿಮಾ ಯೋಜನೆಯಿಂದ ಕಡಿಮೆ ರಕ್ಷಣೆ ಪಡೆಯುತ್ತಿದ್ದು, ಇನ್ನೂ ರಕ್ಷಣೆ ಪಡೆಯಬೇಕಾದವರ ಸಂಖ್ಯೆ ಅಪಾರವಾಗಿದ್ದು ಅವರೆಲ್ಲರೂ ವಂಚಿತರಾಗಿದ್ದಾರೆ.

ಕೋಷ್ಟಕ 2 ಶೇಕಡವಾರು ಖಾಸಗೀ ಕ್ಷೇತ್ರದ ಪಾಲುದಾರಿಕೆ (ಹೊರರೋಗಿ ಹಾಗೂ ಒಳರೋಗಿ ಚಿಕಿತ್ಸೆಗಳಿಗೆ)

ವರ್ಷ	ಅಸ್ಪತ್ರೆ(ಒಳರೋಗಿ)		ಚಿಕಿತ್ಸಾಲಯ(ಹೊರರೋಗಿ)	
	ಗ್ರಾಮೀಣ	ಪಟ್ಟಣ	ಗ್ರಾಮೀಣ	ಪಟ್ಟಣ
1986–87	39.97	39.56	74.29	72.79
1995–96	54.71	56.73	80.29	81.65
2004–05	58.39	61.76	77.72	80.83
2014	58.1	68	71.7	78.8

ಆಧಾರ: (ಎನ್.ಎಸ್.ಎಸ್.ಓ ಅಂಕಿಅಂಶಗಳು 42, 52, 60, 71ನೆ ಸುತ್ತು)

ಈ ಯೋಜನೆಯಲ್ಲಿ ಆಸ್ಪತ್ರೆಗೆ ಸೇರಿ ಯಾವ ರೀತಿ ಪ್ರಯೋಜನ ಪಡೆಯುತ್ತಿದ್ದಾರೆ ನೋಡೋಣ. ಸರಕಾರ ಭರವಸೆ ನೀಡಿದಂತೆ, ಇಲ್ಲಿ ಉಚಿತ ಚಿಕಿತ್ಸೆ ವಿರಳ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕೇವಲ 3% ಜನರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ಪ್ರಯೋಜನ ಪಡೆಯುವವರಿಗೆ ದೊರೆಯುವ ಸೌಲಭ್ಯಗಳು ಕಡಿಮೆ. ವಿಮೆ ಯೋಜನೆಯಲ್ಲಿರದವರು ಆಸ್ಪತ್ರೆ ಚಿಕಿತ್ಸೆಗೆ, ಹಣ ಖರ್ಚು ಮಾಡುತ್ತಿದ್ದು, ಈ ಸರಕಾರಿ ವಿಮಾ ಯೋಜನೆಯಲ್ಲಿಯೂ ಆಸ್ಪತ್ರೆ ಚಿಕಿತ್ಸೆಗೆ ಸುಮಾರು 10,000 ರೂಪಾಯಿ ಆಗುತ್ತದೆಂದು ಅಂಕಿ ಅಂಶಗಳು ತಿಳಿಸುತ್ತವೆ, ಆದ್ದರಿಂದ ಈ ಚಿಕಿತ್ಸೆಗಳು ಉಚಿತ ಚಿಕಿತ್ಸೆ ನೀಡುತ್ತದೆಂಬುದು ಮಿಥ್ಯ. ಬಡವರು ಖಾಸಗೀ ಆಸ್ಪತ್ರೆಗೆ ಹೋಗಿ ಉಚಿತ ಚಿಕಿತ್ಸೆ ಪಡೆಯುತ್ತೇವೆಂದು ತಿಳಿದರೂ ಕೊನೆಯಲ್ಲಿ ಈ ಆಸ್ಪತ್ರೆ ವೆಚ್ಚಕ್ಕೆ ಸಾಕಷ್ಟು ಖರ್ಚು ಮಾಡಬೇಕಾಗುತ್ತದೆಂಬುದನ್ನು ಮುಚ್ಚಿಡಲಾಗಿದೆ ಹಾಗೂ ಈ ಚಿಕಿತ್ಸೆಗಳು ಕಳಪೆ ಗುಣಮಟ್ಟದ್ದಾಗಿರುತ್ತದೆ.



ಸರಕಾರದ ವಿಮಾ ಯೋಜನೆ ಕೇವಲ ಕೆಲ ಒಳರೋಗಿ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೆ ಹಣ ನೀಡುತ್ತವೆ. ಆದರೆ ಚಿಕಿತ್ಸೆಗೆ ಜನರು ಮುಕ್ಕಾಲು ಭಾಗ ಹಣವನ್ನು ಹೊರರೋಗಿ ಚಿಕಿತ್ಸೆಗೆ ಹಾಗೂ ಔಷಧಿಗೆ ಖರ್ಚು ಮಾಡುತ್ತಾರೆ. ಸುಮಾರು ಎಲ್ಲ ರಾಜ್ಯಗಳಲ್ಲಿ ಜನರು ವಿಮಾ ಯೋಜನೆಯಡಿ ಖಾಸಗೀ ಆಸ್ಪತ್ರೆಗಳಿಗೆ ಹೋಗಬೇಕಾಗುತ್ತದೆ. ಈ ಖಾಸಗೀ ಆಸ್ಪತ್ರೆಗಳು ಪಟ್ಟಣಗಳಲ್ಲಿದ್ದು, ಗ್ರಾಮೀಣ, ದೂರದ ಹಾಗೂ ಬುಡಕಟ್ಟು ಪ್ರದೇಶಗಳಲ್ಲಿ ಇರುವುದೇ ಇಲ್ಲ

ಈ ವಿಮಾ ಯೋಜನೆಯಡಿ ಕೆಲವು ಚಿಕಿತ್ಸೆಗಳನ್ನು ನೀಡಲಾಗುತ್ತದೆ, ಆದ್ದರಿಂದ ಪ್ರಾಥಮಿಕ ಆರೋಗ್ಯ ಮಟ್ಟದ ಚಿಕಿತ್ಸೆಗಳಿಗೂ ಜನರು ಅನಗತ್ಯವಾಗಿ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಉದಾ: ಅನೀಮಿಯಾ ಡಯಾಬಿಟಿಸ್.. ಇದು ಸಾರ್ವಜನಿಕ ಹಣದ ದುರಪಯೋಗ ಮಾಡಿದಂತಾಗುತ್ತದೆ. ಈ ವಿಮಾ ಯೋಜನೆಯಡಿ ಜನರಿಗೆ ಗುಣಮಟ್ಟದ ಚಿಕಿತ್ಸೆ ದೊರಕುವುದಿಲ್ಲ ಹಾಗೂ ಅನೇಕ ಬಾರಿ ಅನಗತ್ಯ ಚಿಕಿತ್ಸೆ (ಗರ್ಭಕೋಶ ತೆಗೆದುಹಾಕುವುದು)ಗಳನ್ನು ಕೇವಲ ಹಣಗಳಿಸಲು ಮಾಡಲಾಗಿರುವುದು, ಬಿಹಾರ, ಛತ್ತೀಸ್‌ಗಡ, ಆಂಧ್ರಪ್ರದೇಶದಲ್ಲಿ ದಾಖಲೆಯಾಗಿದೆ.

ರೋಗಿಗಳಿಗೆ ಈ ವಿಮಾ ಯೋಜನೆಯಲ್ಲಿ ಯಾವ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಬೇಕು ಎಂಬುದರ ಬಗ್ಗೆ ಸ್ವಾತಂತ್ರ್ಯವಿರುವುದಿಲ್ಲ. ಈ ಖಾಸಗಿ ಆಸ್ಪತ್ರೆಗಳು ಸಾಮಾನ್ಯವಾಗಿ ಸುಲಭವಾಗಿ ಚಿಕಿತ್ಸೆ ಮಾಡಲು ಸಾಧ್ಯವಾದ ಹಾಗೂ ಹೆಚ್ಚು ಲಾಭತರುವ, ಅಪಾಯವಿಲ್ಲದ ರೋಗಿಗಳನ್ನು ಆರಿಸಿಕೊಂಡು, ಕಷ್ಟಕರವಾದ ರೋಗಿಯನ್ನು ಸಾರ್ವಜನಿಕ ಆಸ್ಪತ್ರೆಗಳಿಗೆ ಕಳುಹಿಸಿಕೊಡುತ್ತಾರೆ. ದೂರದ ಪ್ರದೇಶಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಇದ್ದು ಜನರು ಆ ವ್ಯವಸ್ಥೆ ಮೇಲೆ ಅವಲಂಬಿಸಿದ್ದಾರೆ. ಖಾಸಗೀ ಆಸ್ಪತ್ರೆಗಳು ರೋಗಿಯನ್ನು ಆಕರ್ಷಿಸುವುದಲ್ಲದೆ ಸರಕಾರಿ ವಿಮಾ ಕಂಪನಿಗಳಿಂದ ಲಾಭ ಗಳಿಸಲು ರಕ್ಷಣೆ ಪಡೆಯುತ್ತವೆ. ಈ ಖಾಸಗೀ ಆಸ್ಪತ್ರೆಗಳು ಮೇಲಿಂದ ಮೇಲೆ ಚಿಕಿತ್ಸೆಗೆ ಹೆಚ್ಚು ಹಣ ಬಿಡುಗಡೆ ಮಾಡಲು ವಿಮಾ ಕಂಪನಿಗಳ ಮೇಲೆ ಒತ್ತಡ ತರುತ್ತವೆ. ಹಾಗೂ ತಮ್ಮ ಸೇವೆಗಳನ್ನು ಸ್ಥಗಿತಗೊಳಿಸುತ್ತವೆ. ಇದು ಛತ್ತೀಸ್‌ಗಡ್ ಹಾಗೂ ಆಂಧ್ರಪ್ರದೇಶದಲ್ಲಿ ಕಂಡುಬಂದಿದೆ.

ವ್ಯಾಪಾರಿ ಮನೋವೃತ್ತಿಯಿಂದ ಖಾಸಗೀ ಸಂಸ್ಥೆಗಳು ಆರೋಗ್ಯ ಸುಧಾರಣೆಯಲ್ಲಿ ಹಿಂದೆ ಬಿದ್ದಿವೆ ಹಾಗೂ ಅನಗತ್ಯ ಚಿಕಿತ್ಸೆ ನೀಡುತ್ತ ಚಿಕಿತ್ಸೆಯನ್ನು ದುಬಾರಿಗೊಳಿಸಿವೆ. ಈ ಬೆಳವಣಿಗೆಯನ್ನು ಬದಲಿಸಲು ಕೇವಲ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಿಂದ ಮಾತ್ರ ಸಾಧ್ಯ. ■

ಪ.ಜಾ ಮತ್ತು ಪ.ಪಂ. ಉಪಯೋಜನೆಗಳು........... ಪುಟ 6 ರಿಂದ

ಆಗಿರುತ್ತದೆ.

ನಾಲ್ಕನೆಯದಾಗಿ ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳಂತೆ ಉಪಯೋಜನೆ ಕಾರ್ಯಕ್ರಮಗಳನ್ನು ನಿರ್ವಹಿಸಿದರೆ ಅವು ಪರಿಣಾಮಕಾರಿಯಾಗಿ ಫಲ ನೀಡುವುದು ಸಾಧ್ಯವಿಲ್ಲ. ಈ ಉಪಯೋಜನೆಗಳನ್ನು ಪರಿಶೀಲಿಸಿದರೆ ಅಲ್ಲಿ ಪ.ಜಾ. ಮತ್ತು ಪ.ಪಂ. ವಿಶಿಷ್ಟತೆಯು ಕಾಣುವುದಿಲ್ಲ. ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಉಪಯೋಜನೆ ಕಾರ್ಯಕ್ರಮಗಳಿಗೂ ಭಿನ್ನತೆಯೇನಿಲ್ಲ. ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳು ಪರಿಶಿಷ್ಟರ ಅಭಿವೃದ್ಧಿಯನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂದು ಉಪಯೋಜನೆಗಳನ್ನು ರೂಪಿಸಲಾಗಿದೆ. ಆದರೆ ಅವುಗಳಲ್ಲಿ ಯಾವ ವಿಶಿಷ್ಟತೆಯೂ ಕಾಣುವುದಿಲ್ಲ.

ಈ ಉಪಯೋಜನೆಗಳಲ್ಲಿ ಸಾಂಸ್ಥಿಕ ವ್ಯವಸ್ಥೆ ಅನ್ನುವುದು ಇಲ್ಲ. ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ವಹಿಸುವ ಇಲಾಖೆಗಳೆ ಉಪಯೋಜನೆ ಕಾರ್ಯಕ್ರಮಗಳನ್ನು ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದಂತೆ ನಿರ್ವಹಿಸುತ್ತಿವೆ. ಅದೇ ಕಾಮಗಾರಿ, ಅದೇ ರಸ್ತೆ ಅಭಿವೃದ್ದಿ, ಅದೇ ವಸತಿ, ಅದೇ ಕೊಳವೆ ಬಾವಿ, ಅದೇ ಗಟಾರ ಇತ್ಯಾದಿ.


ಈ ಉಪಯೋಜನೆಗಳಲ್ಲಿ ಬಂಡವಾಳ ನಿರ್ಮಾಣ ಮಾಡುವ ಕಾರ್ಯಕ್ರಮಗಳಲ್ಲಿ ಪರಿಶಿಷ್ಟರಿಗೆ ವಿಶಿಷ್ಟವಾದ ಮತ್ತು ಅವರಿಗೆ ಸಂಬಂಧಿಸಿದ ರೀತಿಯ ಬಂಡವಾಳ ನಿರ್ಮಾಣವಾಗುತ್ತಿಲ್ಲ. ರಸ್ತೆಗಳು, ಕೊಳವೆ ಬಾವಿ, ಸಮುದಾಯ ಭವನ ಮುಂತಾದವು ಸಾರ್ವಜನಿಕ ಬಂಡವಾಳ. ವೈಯುಕ್ತಿಕ ಬಂಡವಾಳ ನಿರ್ಮಾಣ ಮಾಡುವಂತಹ ಕಾರ್ಯಕ್ರಮಗಳು ಇವುಗಳಲ್ಲಿ ಇಲ್ಲ.

ಐದನೆಯದಾಗಿ ಈ ಉಪಯೋಜನೆಗಳಲ್ಲಿ ನಿರ್ದಿಷ್ಟವಾದ ಮಹಿಳಾ ಆಯಾಮವಿಲ್ಲ. ಈ ಉಪಯೋಜನೆಗಳಿಗೆ 2018–19ನೆಯ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಒದಗಿಸಲಾಗಿರುವ ಮೊತ್ತ ರೂ. 1656.31 ಕೋಟಿ. ಒಟ್ಟು ಉಪಯೋಜನೆಗಳ ವೆಚ್ಚದಲ್ಲಿ ಇದರ ಪಾಲು ಶೇ.5.91ರಷ್ಟಾಗುತ್ತದೆ. ನಮ್ಮ ಸಮಾಜದಲ್ಲಿ ಅತ್ಯಂತ ಹೆಚ್ಚು ದುಸ್ಥಿತಿ ಅನುಭವಿಸುತ್ತಿರುವ ವರ್ಗವೆಂದರೆ ಪ.ಜಾ. ಮತ್ತು ಪ.ಪಂ. ಮಹಿಳೆಯರು. ಏಕೆಂದರೆ ಅವರು ಬಡವರಾಗಿ ಆರ್ಥಿಕ, ಜಾತಿಯ ಕಾರಣವಾಗಿ ತಾರತಮ್ಯ ಮತ್ತು ಮಹಿಳೆಯರು ಅನ್ನುವ ಕಾರಣಕ್ಕೆ ಲಿಂಗ ಅಸಮಾನತೆ ಎದುರಿಸುತ್ತಿದ್ದಾರೆ. ಈ ಸಂಗತಿಗಳನ್ನು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಮಟ್ಟಗಳಲ್ಲಿ ಎದುರಿಸುವ ಬಗ್ಗೆ ಉಪಯೋಜನೆಗಳಲ್ಲಿ ಯಾವುದೇ ಕಾರ್ಯಕ್ರಮಗಳಿಲ್ಲ.

ಬಜೆಟ್ಟಿನಲ್ಲಿ ಪ.ಜಾ. ಮತ್ತು ಪ.ಪಂ.ಗಳ ಅಭಿವೃದ್ಧಿಗೆ ಅವರ ಜನಸಂಖ್ಯೆಗನುಗುಣವಾಗಿ ಅನುದಾನ ನೀಡಬೇಕೆಂಬುದಕ್ಕೆ ಸಂವಿಧಾನಾತ್ಮಕ ಕಡ್ಡಾಯವೇನಿಲ್ಲ. ಕರ್ನಾಟಕ ಸರ್ಕಾರವು 2013ರಲ್ಲಿ ತನ್ನದೇ ಶಾಸನವನ್ನು ರಚಿಸಿ ಬಜೆಟ್ಟಿನಲ್ಲಿ ಪ.ಜಾ. ಮತ್ತು ಪ.ಪಂ.ಗಳ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ನೀಡುವ ಕ್ರಮವನ್ನು ಅನುಸರಿಸುತ್ತಿದೆ. ಆದರೆ ಯೋಜನೆ ಮತ್ತು ಯೋಜನೇತರ ಎಂಬ ಭಿನ್ನತೆ ರದ್ದಾದ ಮೇಲೆ ಅಲ್ಲಿಯೂ ಸಮಸ್ಯೆಗಳು ಉಂಟಾಗಿವೆ.

ಉಪಯೊಜನೆಗಳಿಗೆ ಮತ್ತು ಒಟ್ಟಾರೆ ಕರ್ನಾಟಕದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಮುಖ ಸಮಸ್ಯೆಯೆಂದರೆ ಅಡಳಿತ ಕಾರ್ಯಕ್ಷಮತೆ. ಇದು ರಾಜಕೀಯ ಪ್ರಶ್ನೆಯೂ ಹೌದು ಮತ್ತು ನೌಕರಶಾಹಿಯ ಸಮಸ್ಯೆಯೂ ಹೌದು. ನಮ್ಮಲ್ಲಿ 2018–19ರಲ್ಲಿ ವಿನಿಯೋಗಿಸುತ್ತಿರುವ ಸಾರ್ವಜನಿಕ ವೆಚ್ಚ ರೂ. 2.09 ಲಕ್ಷ ಕೋಟಿ. ಎರಡು ಉಪಯೋಜನೆಗಳ ಬಾಬ್ತು ವೆಚ್ಚ ರೂ. 28,002 ಕೋಟಿ. ಈ ಭಾರಿ ಮೊತ್ತಕ್ಕೆ ಪ್ರತಿಫಲ ವಾರ್ಷಿಕ ಎಷ್ಟು? ಈ ಬಗ್ಗೆ ನಾವು ಗಂಭೀರವಾಗಿ ಚಿಂತಿಸುವ ಅಗತ್ಯವಿದೆ. ಹಣ, ಅನುದಾನ, ಬಂಡವಾಳ, ಉತ್ಪಾದನೆ ಮುಂತಾದವುಗಳು ಮುಖ್ಯ. ಆದರೆ ಇದಕ್ಕಿಂತ ಅವುಗಳ ನಿರ್ವಹಣೆ ಕ್ಷಮತೆ, ಅಡಳಿತದಲ್ಲಿನ ದಕ್ಷತೆ ಮುಂತಾದವು ನಿರ್ಣಾಯಕ. ಕೇಂದ್ರ ಸರ್ಕಾರವು ಪ.ಜಾ. ಮತ್ತು ಪ.ಪಂ.ಗಳಿಗೆ ಸಂಬಂಧಿಸಿದಂತೆ ಅಖಂಡ ನೀತಿಯನ್ನು ಕೈಬಿಟ್ಟು ವಿಶೇಷ ಕ್ರಮಗಳ ಮೂಲಕ ಅವರ ಅಭಿವೃದ್ಧಿಗೆ ಪ್ರಜ್ಞಾಪೂರ್ವಕ ಪ್ರಯತ್ನ ನಡೆಸುವುದು ಅಗತ್ಯ. ●

ನಿರುದ್ಯೋಗ ದರದಿಂದ ದುರ್ದೆಸೆಯ ಸೂಚ್ಯಂಕ ವರೆಗೆ ಏರಿಕೆ ಮತ್ತು ಪ್ರಧಾನ ಮಂತ್ರಿಗಳ ಮೂರು 'ಡಿ' ಗಳು



ವೇದರಾಜ ಎನ್ ಕೆ.

ಕಳೆದ ವಾರ ಪ್ರಧಾನಿಗಳು ಭಾರತ–ಕೊರಿಯಾ ವ್ಯಾಪಾರ ಸಮ್ಮೇಳನದಲ್ಲಿ ದಕ್ಷಿಣ ಕೊರಿಯಾದ ಹೂಡಿಕೆದಾರರ ಎದುರು ಮತ್ತೆ ತಮ್ಮ ಮೂರು 'ಡಿ'ಗಳನ್ನು ನೆನಪಿಸಿದರು. ಅವರು ಅಧಿಕಾರಕ್ಕೆ ಬಂದಂದಿನಿಂದ ಹೂಡಿಕೆದಾರರ ಎದರು ಉದುರುತ್ತಿರುವ ಈ ಮಂತ್ರಸದೃಶ ಪದಗಳು ಈ ಮೂರುವರ್ಷಗಳಲ್ಲಿ ಸಾಕಷ್ಟು ಸವಕಲಾಗಿದ್ದರೂ ಪ್ರಧಾನಿಗಳು ಅದನ್ನು ಮತ್ತೆ ಉಚ್ಚರಿಸಿದರು–ಬಹುಶಃ ಅನಿವಾರ್ಯ. ಆ ಮೂರು ಡಿ ಗಳೆಂದರೆ ಡೆಮಾಗ್ರಫಿ, ಅಂದರೆ ಜನಸಂಖ್ಯಾ ಸ್ವರೂಪ, ಡಿಮಾಂಡ್ ಅಂದರೆ ಬೇಡಿಕೆ ಮತ್ತು ಡೆಮಾಕ್ರಸಿ ಅಂದರೆ ಪ್ರಜಾಪ್ರಭುತ್ವ. ಇವು ಮೂರೂ ಅವರ ಎಂದಿನ 'ಜುಮ್ಲಾಗಳು(ಅಮದರೆ ಬೊಗಳೆಗಳು) ಎಂಬುದು ಕೂಡ ಈ ವಾರ ಮತ್ತೆ ಬಯಲಾಗಿದೆ.

ನಿರುದ್ಯೋಗ ದರದಲ್ಲಿ ಏರಿಕೆ

ಜನಸಂಖ್ಯಾ ಸ್ವರೂಪ ಎಂದರೆ ಭಾರತ, ವಿಶೇಷವಾಗಿ ಆರ್ಥಿಕವಾಗಿ ಮುಂದುವರೆದಿರುವ ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಯುವಜನರ ಪ್ರಮಾಣ ಹೆಚ್ಚಿರುವ ದೇಶ. ಆದರೆ ಈ ಯುವಜನರ ಶಕ್ತಿ–ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ಶಕ್ತಿ ಈ ಒಳ್ಳೆಯ ದಿನಗಳಲ್ಲೂ ದೇಶದ ಸಾಮಾಜಿಕ– ಆರ್ಥಿಕವ ವ್ಯವಸ್ಥೆಗೆ ಇದ್ದಂತಿಲ್ಲ. ಉದ್ಯೋಗ ಕುರಿತ ಅಂಕಿ–ಅಂಶಗಳು ತೋರಿಸುತ್ತಿರುವ ಸಂಗತಿಯಿದು.

ಫೆಬ್ರುವರಿ 25 ರ ವಾರಾಂತ್ಯದ ಪ್ರಕಟಿತ ಸಿಎಂಐಇ ಅಂಕಿ–ಅಂಶಗಳ ಪ್ರಕಾರ ನಿರುದ್ಯೋಗ ದರ ಕಳೆದ 71 ವಾರಗಳಲ್ಲೇ ಅತ್ಯುನ್ನತ ಮಟ್ಟವನ್ನು ತಲುಪಿದೆ.

ಇದು ಜುಲೈ 2017ರಿಂದ ನಿರಂತರವಾಗಿ ಏರುತ್ತಲೇ ಬಂದಿದೆ. ಆಗ ನಿರುದ್ಯೋಗ ದರ 3.4% ಕ್ಕೆ ಇಳಿದಿತ್ತು. ಜನವರಿ ವೇಳೆಗೆ ಅದು 5% ತಲುಪಿತು. ಫೆ.4 ವಾರಾಂತ್ಯದಲ್ಲಿ 5.5% ಆಯಿತು, ನಂತರದ ವಾರದಲ್ಲಿ 6.8%ಕ್ಕೆ ಏರಿತು. ಇತ್ತೀಚಿನ ಮಾಹಿತಿಗಳ ಪ್ರಕಾರ 7.1%ಕ್ಕೇರಿದೆ.

ನಿಜ, ನೋಟುರದ್ದತಿಯ ನಂತರದ ಏಳು ತಿಂಗಳಲ್ಲಿ ಅದು ತುಂಬ ಕೆಳಗಿಳಿದಿತ್ತು. ಆದರೆ ಅದರ ಅರ್ಥ ಹೆಚ್ಚು ಉದ್ಯೋಗಾವಕಾಶಗಳು ನಿರ್ಮಾಣವಾದುವೆಂದಲ್ಲ. ನೋಟುರದ್ದತಿ ಆರ್ಥಿಕದ ಮೇಲೆ ಉಂಟು ಮಾಡಿದ ದುಷ್ಪರಿಣಾಮದಿಂದಾಗಿ ಜನಗಳು ಉದ್ಯೋಗ ಹುಡುಕುವುದನ್ನು ಬಿಟ್ಟು ತಂತಮ್ಮ ಊರುಗಳಿಗೆ ಹಿಂದಿರುಗಿದರು. ನವಂಬರ್ 2016ರ ನಂತರ ಜುಲೈ 2017ರಲ್ಲೇ ಅದು ಮತ್ತೆ ಚೇತರಿಸಿಕೊಂಡದ್ದು.

ಈಗ ಫೆಬ್ರುವರಿ 25 ರ ವೇಳೆಗೆ 3.1ಕೋಟಿ ಮಂದಿ ಉದ್ಯೋಗದ ಹುಡುಕಾಟದಲ್ಲಿ ಇದ್ದಾರೆ. ಆದರೆ ವರ್ಷಕ್ಕೆ 2 ಕೋಟಿ ಉದ್ಯೋಗಗಳ ನಿರ್ಮಾಣದ ಮಾತೇ ಈಗ ಕೇಳಬರುತ್ತಿಲ್ಲ

ಫೆಬ್ರುವರಿಯಲ್ಲಿ ಕಾರ್ಖಾನೆ ಉತ್ಪಾದನೆಯಲ್ಲಿ ನಿಧಾನಗತಿ ಹಣದುಬ್ಬರ ಏರಿಕೆ ಮತ್ತು ಬೇಡಿಕೆ ಇಳಿಕೆ

ಇನ್ನು ಬೇಡಿಕೆಯ ವಿಷಯ. ದೇಶದ ಕಾರ್ಖಾನೆ ಚಟುವಟಿಕೆಗಳು ನಿಧಾನಗೊಂಡಿವೆ ಎಂದು ಫೆಬ್ರುವರಿ ತಿಂಗಳ ಪಿಎಂಐ(ಅಂದರೆ ಖರೀದಿ ಮ್ಯಾನೇಜರನ ಸೂಚ್ಯಂಕ) ಹೇಳುತ್ತಿರುವುದು ಇದರ ಮುಂದೆ ಮತ್ತೆ ಪ್ರಶ್ನೆ ಚಿಹ್ನೆ ಇಟ್ಟಿದೆ. ಪಿಎಂಐ ಜನವರಿಯಲ್ಲಿ 52.4 ಇದ್ದದ್ದು ಫೆಬ್ರುವರಿಯಲ್ಲಿ 52.8ಕ್ಕೆ ಏರುವ ನಿರೀಕ್ಷೆಯಿತ್ತು. ಆದರೆ ಅದು 52.1ಕ್ಕೆ ಇಳಿದಿದೆ. ಈ ಸೂಚ್ಯಂಕ ಉತ್ಪಾದನಾ ಮಟ್ಟ, ಗಿರಾಕಿಗಳಿಂದ ಬೇಡಿಕೆ, ಅದನ್ನು ಪೂರೈಸುವ ವೇಗ, ಉದ್ಯೋಗ ಮಟ್ಟ ಮುಂತಾದ ಏಳು ಅಂಶಗಳ ಬಗ್ಗೆ ಉದ್ದಿಮೆಗಳ ಸರ್ವೆಯನ್ನು ಆಧರಿಸಿದ್ದು ಆರ್ಥಿಕದ ಬೆಳವಣಿಗೆಯ ವೇಗವನ್ನು ಸೂಚಿಸುತ್ತದೆ. ಫೆಬ್ರುವರಿ ಸೂಚ್ಯಂಕ ಅಕ್ಟೋಬರ್ 2017 ರನಂತರ ದ ಅತಿ ಕಮ್ಮಿ ಸೂಚ್ಯಂಕ ಎನ್ನಲಾಗಿದೆ.

ಅಂದರೆ ಆರ್ಥಿಕ ಮಂದಗತಿ ಮುಂದುವರೆಯುತ್ತಿದೆ. ಇದು ಬೇಡಿಕೆಯಲ್ಲಿ ಇಳಿಕೆ ಮತ್ತು ಹಣದುಬ್ಬರದಲ್ಲಿ ಏರಿಕೆಯಿಂದಾಗಿ ಆಗಿದೆ ಎನ್ನಲಾಗಿದೆ. ಹಣದುಬ್ಬರ ಮುಂದಿನ ತಿಂಗಳುಗಳಲ್ಲಿ ಹೆಚ್ಚುವ ಅಪಾಯವೂ ಇದೆಯಂತೆ.

ಇನ್ನು ಮೂರನೇ 'ಡಿ' ಡೆಮಾಕ್ರಸಿ ಅರ್ಥಾತ್ 'ಪ್ರಜಾಪ್ರಭುತ್ವ'ದ ಬಗ್ಗೆ ಹೇಳಬೇಕಿಲ್ಲ. ಕಾರ್ಮಿಕರ ಪ್ರತಿನಿಧಿಗಳೊಡನೆ ಚರ್ಚಿಸುವ ತ್ರಿಪಕ್ಷೀಯ ಐಎಲ್‌ಸಿ (ಭಾರತ ಕಾರ್ಮಿಕ ಸಮ್ಮೇಳನ) ವನ್ನು ಸದ್ದಿಲ್ಲದೆ ಮುಂದೂಡಲಾಗಿದೆ. ಮತ್ತು ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ (ಸಿಎಸಿಪಿ) ಕಳೆದ ವಾರವಷ್ಟೇ ಸಭೆ ಸೇರಿದೆ–ರೈತರ ಪ್ರತಿನಿಧಿಗಳಿಲ್ಲದೆ. ರೈತರ ಬೆಳೆಗಳಿಗೆ ಈ ವರ್ಷದ ಕನಿಷ್ಟ ಬೆಂಬಲ ಬೆಲೆಗಳನ್ನು ಅದು ನಿರ್ಧರಿಸಬೇಕಾಗಿತ್ತು. ಆದರೆ ಅಲ್ಲಿ ರೈತರ ಪ್ರತಿನಿಧಿಗಳೇ ಇರಲಿಲ್ಲ. ಈ ಆಯೋಗದಲ್ಲಿ ಐವರು ಸದಸ್ಯರಿರಬೇಕು. ಒಬ್ಬರ ಅಧ್ಯಕ್ಷರು, ಒಬ್ಬರು ಸದಸ್ಯ ಕಾರ್ಯದರ್ಶಿ ಮತ್ತು ಮೂವರು ಸದಸ್ಯರು, ಇವರಲ್ಲಿ ಇಬ್ಬರು ಅಧಿಕಾರಿಗಳಲ್ಲದವರು, ಅಂದರೆ ರೈತರ ಸಂಘಟನೆಗಳಲ್ಲಿ ಸಕ್ರಿಯರಾಗಿರುವವರು. ಆದರೆ ಮೊನ್ನೆ ಸಭೆ ಸೇರಿದ ಈ ಆಯೋಗದಲ್ಲಿ ಇರುವುದು ಇಬ್ಬರೇ ಸದಸ್ಯರು.

ಇದಿಷ್ಟು ಅಚ್ಛೇ ದಿನ್‌ಗಳ ಪ್ರಜಾಪ್ರಭುತ್ವದ ಸ್ವರೂಪ.

ದುರ್ದೆಸೆಯ ಸೂಚ್ಯಂಕ

ಇದು ಈವಾರ ಪ್ರಕಟವಾಗಿರುವ ಇನ್ನೊಂದು ಸೂಚ್ಯಂಕ–ಜನಗಳ ದುರ್ದೆಸೆಯನ್ನು ಬಿಂಬಿಸುವ ಸೂಚ್ಯಂಕ– ಪ್ರಧಾನಿಗಳ ಮೂರು 'ಡಿ'ಗಳ ನಿಜ ಫಲಿತಾಂಶವನ್ನು ಬಿಂಬಿಸುವಂತದ್ದು.

ಇದು ಹಣದುಬ್ಬರ, ಗ್ರಾಮೀಣ ಕೂಲಿ ಬೆಳವಣಿಗೆ ಮತ್ತು ಆಹಾರೇತರ ಸಾಲ ಬೆಳವಣಿಗೆ ಈ ಮೂರು ಆರ್ಥಿಕ ಅಂಶಗಳನ್ನು ಆಧರಿಸಿರುವ ಸೂಚ್ಯಂಕ. ಇವುಗಳ ಮೂಲಕ ಜನಗಳ ಪರಿಸ್ಥಿತಿ ಹೇಗಿದೆ ಎಂಬುದರ ಒಂದು ಚಿತ್ರವನ್ನು ಇದು ಕಟ್ಟಿಕೊಡುತ್ತದೆ ಎಂದು ಆರ್ಥಿಕ ವಲಯಗಳಲ್ಲಿ ನಂಬಲಾಗಿದೆ. ಈ ಸೂಚ್ಯಂಕ ಏರಿದಷ್ಟು ಜನಗಳ ದುರ್ದೆಸೆಯೂ ಹೆಚ್ಚಿದೆ ಎಂದರ್ಥ. ಇದು 'ಅಚ್ಛೇದಿನ್'ಗಳ ಮೂರು ವರ್ಷಗಳಲ್ಲಿ ಸರಾಸರಿ 64. ಯುಪಿಎ–2 ಸರಕಾರದ ಅವಧಿಯಲ್ಲಿ ಈ ಸರಾಸರಿ 57 ಇತ್ತು. ಬಹುಪಾಲು ಅವಧಿಯಲ್ಲಿ ಎಡಪಕ್ಷಗಳ ಬೆಂಬಲ ಮೇಲೆ ನಿಂತಿದ್ದ ಯುಪಿಎ–1 ಆಳ್ವಿಕೆಯಲ್ಲಿ ಇದು 50ಕ್ಕಿಂತ ಕೆಳಗಿತ್ತು. ಅಂದರೆ ನವ–ಉದಾರವಾಧಿ ಧೋರಣೆಗಳು ಮತ್ತು ಜನಗಳ ದುರ್ದೆಸೆಯ ನಡುವಿನ ಸಂಬಂಧ ಸ್ಪಷ್ಟ. ಅದೇ ರೀತಿ ಈ ದುರ್ದೆಸೆಯನ್ನು ಮರೆಮಾಚಲೆಂದೇ ಜುಮ್ಲಾಗಳು ಮತ್ತು ಪದಗಳಾಟ ಎಂಬುದೂ ಸ್ಪಷ್ಟ.

"ಪ್ರಧಾನ ಮಂತ್ರಿಗಳ ವಿದೇಶ ಪ್ರವಾಸಗಳ ಖರ್ಚುಗಳ ಮಾಹಿತಿ ಏಕಿಲ್ಲ?" "ನೋಟುರದ್ದತಿಯ ಮಾಹಿತಿಗಳು ಆರ್ಥಿಕ ಹಿತಾಸಕ್ತಿಗಳಿಗೆ ಬಾಧಕ ಏಕೆ?"

ಇವು ನಮ್ಮ ಪ್ರಶ್ನೆಗಳಲ್ಲ. ಮಾಹಿತಿ ಹಕ್ಕಿನ ಅಡಿಯಲ್ಲಿ ಕೇಳಿದ ಪ್ರಶ್ನೆಗಳಿಗೆ ಅಧಿಕಾರಸ್ಥರಿಂದ ಸಿಕ್ಕ ನಕಾರಾತ್ಮಕ ಸ್ಪಂದನಗಳ ಬಗ್ಗೆ ದೇಶದ'ಮುಖ್ಯ ಮಾಹಿತಿ ಆಯುಕ್ತರು(ಸಿಐಸಿ) ವಿವರಿಸಬೇಕೆಂದು ಕೇಳಿರುವ ಪ್ರಶ್ನೆಗಳು.

ವಿದೇಶಾಂಗ ವ್ಯವಹಾರಗಳ ಮಂತ್ರಾಲಯಕ್ಕೆ 2013–14ರಿಂದ 2016–17ರ ವರೆಗೆ ಪ್ರಧಾನಿಗಳ ವಿದೇಶ ಪ್ರಯಾಣಗಳಿಗೆ ಏರ್ ಇಂಡಿಯಾ ವಿಮಾನ ಬಳಸಲು ತಗಲಿದ ಖರ್ಚುಗಳ ದಾಖಲೆಗಳನ್ನು ಬಹಿರಂಗಗೊಳಿಸಬೇಕು ಎಂದು ಸಿಐಸಿ ನಿರ್ದೇಶನ ನೀಡಿದ್ದಾರೆ. (ಪಿಟಿಐ, ಫೆ.27)

ಪ್ರಧಾನಿಗಳ ವಿದೇಶ ಪ್ರವಾಸಗಳಿಗೆ ವಿಶೇಷವಾಗಿ ಬಳಸುವ ಏರ್‌ಇಂಡಿಯಾ ವಿಮಾನಗಳಿಗೆ ತೆರಬೇಕಾದ ಹಣವನ್ನು ಏರ್‌ಇಂಡಿಯಾಕ್ಕೆ ಇನ್ನೂ ಪಾವತಿ ಮಾಡಿಲ್ಲ ಎಂಬ ಸುದ್ದಿಯ ಬಗ್ಗೆ ನಿವೃತ್ತ ಸೇನಾಧಿಕಾರಿ ಕೊಮೊಡೊರ್ ಲೋಕೇಶ್ ಬತ್ರ ಮಾಹಿತಿ ಕೇಳಿದ್ದರು. ಅದನ್ನು ಅವರಿಗೆ ಕೊಡಲಾಗಿಲ್ಲ. ಆದ್ದರಿಂದ ಅವರು ಸಿಐಸಿ ಬಳಿ ಅಪೀಲು ಹೋಗಿದ್ದರು. ಅವುಗಳ ವಿವರಗಳು ವಿವಿಧ ಕಚೇರಿಗಳಲ್ಲಿ ಹರಡಿ ಹೋಗಿವೆಯಾದ್ದರಿಂದ ಅವನ್ನು ಕ್ರೋಡೀಕರಿಸಲು ಬಹಳ ಸಮಯ ಮತ್ತು ಸಿಬ್ಬಂದಿ ಬೇಕಾಗುತ್ತದೆ ಎಂಬುದು ವಿದೇಶಾಂಗ ಮಂತ್ರಾಲಯದ ಸಬೂಬು.

ಆದರೆ ಇದೊಂದು ಗಂಭೀರ ವಿಷಯ. ರಾಷ್ಟ್ರೀಯ ಭದ್ರತೆಯ ಹೆಸರಲ್ಲಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಏರ್ ಇಂಡಿಯ ಹಣಕಾಸು ಮುಗ್ಗಟ್ಟಿನಲ್ಲಿದೆ. ಅದರ ಬಿಲ್‌ಗಳನ್ನು ಪಾವತಿ ಮಾಡದಿರುವುದು ಮತ್ತಷ್ಟು ಹಣವನ್ನು ಬಡ್ಡಿಯಾಗಿ ತೆರುವಂತೆ ಮಾಡುತ್ತದೆ, ಇದರ ಹೊರೆಯನ್ನು ತೆರಿಗೆದಾರರು ಹೊರಬೇಕಾಗುತ್ತದೆ ಎಂದು ಬತ್ರ ವಾದಿಸಿದರು.

ಕೊನೆಗೆ, ಈ ಬಿಲ್‌ಗಳನ್ನು ಪಾವತಿಸಬೇಕಾದರೆ ಇವನ್ನು ಕ್ರೋಡೀಕರಿಸಲೇಬೇಕು ತಾನೇ, ಆದ್ದರಿಂದ ಅದನ್ನು ಕ್ರೋಡೀಕರಿಸಿ ಬತ್ರರವರಿಗೆ ಮಾಹಿತಿ ನೀಡಬೇಕು ಎಂದು ಸಿಐಸಿ ನಿರ್ದೇಶನ ನಿಡಿದ್ದಾರೆ.

ಏರ್ ಇಂಡಿಯಾ ನಷ್ಟ ಮಾಡುತ್ತಿದೆಯೆಂದು ಅದನ್ನು ಖಾಸಗೀಕರಿಸುವ ಧಾವಂತದಲ್ಲಿರುವ ಮಂದಿ ತಾವೇ ಅದಕ್ಕೆ ಸಲ್ಲಬೇಕಾದ ಬಾಕಿ ಮೊತ್ತ' ಪಾವತಿ ಮಾಡಿಲ್ಲ ಮಾತ್ರವಲ್ಲ, ಆ ಬಗ್ಗೆ ಮಾಹಿತಿಯನ್ನೂ ಹೊಂದಿಲ್ಲ ಎಂಬುದು ಏನನ್ನು ಸೂಚಿಸುತ್ತದೆ, ಅದನ್ನು ಪಾವತಿ ಮಾಡುವ ಯೋಚನೆಯೂ ಇಲ್ಲ ಎಂಬುದನ್ನೋ ಎಂಬ ಪ್ರಶ್ನೆಯೊಂದಿಗೆ ಏರ್ ಇಂಡಿಯಾವನ್ನು ಖಾಸಗೀಕರಿಸಿದ ಮೇಲೆ ಪ್ರಧಾನಿಗಳ ವಿದೇಶ ಪ್ರವಾಸಗಳ ಕತೆಯೇನು ಎಂಬ ಪ್ರಶ್ನೆಯೂ ಏಳುತ್ತದೆ.

ಪ್ರಧಾನ ಮಂತ್ರಿಗಳ ಕಚೇರಿಗೇ ನೀಡಿರುವ ಮತ್ತೊಂದು ನಿರ್ದೇಶನ

ನೋಟುರದ್ದತಿ ಮಾಡಿದ ಮರುವಾರವೇ, ನವಂಬರ್ 15, 2016ರಂದು ಆರ್.ಎಲ್.ಕೈನ್ ಎಂಬವರು ನೋಟುರದ್ದತಿ ಪ್ರಕಟಿಸಿದ ಪ್ರಧಾನಿಗಳ ಭಾಷಣವನ್ನು ಧ್ವನಿಮುದ್ರಿಸಿಕೊಳ್ಳಲು ಮಂಜೂರಾತಿ ಬಗ್ಗೆ ಮಾಹಿತಿ ಮತ್ತು ಹೀಗೆ ಧ್ವನಿಮುದ್ರಿತ ಮೂಲ ಭಾಷಣದ ಒಂದು ಪ್ರತಿಯನ್ನು ಕೇಳಿದ್ದರು. ಇದಕ್ಕೆ ದೊರೆತ ಉತ್ತರದಿಂದ ತೃಪ್ತರಾಗದ ಕೈನ್ ಸಿಐಸಿ ಗೆ ಅಪೀಲ್ ಹೋಗಿದ್ದರು. ವಿಚಾರಣೆಯ ವೇಳೆಯಲ್ಲಿ ನೋಟುರದ್ದತಿಗೆ ಮತ್ತು 2000ರೂ.ನ ಹೊಸ ನೋಟುಗಳ ಚಲಾವಣೆ ಕುರಿತಂತೆ ಸಂಬಂಧಪಟ್ಟ ಕಡತದ ಮೇಲೆ ಪ್ರಧಾನಿಗಳ ಮಂಜೂರಾತಿಯ ಒಂದು ಪ್ರಮಾಣಿತ ಪ್ರತಿಯನ್ನು ಕೊಡಬೇಕು, ನೋಟುರದ್ದತಿಯ ಮೊದಲೇ 2000ರೂ.ನೋಟನ್ನು ಪ್ರದರ್ಶಿಸಲಾಗಿತ್ತು ಎಂಬುದರ ಬಗ್ಗೆ ರಿಝರ್ವ್ ಬ್ಯಾಂಕ್ ತನಿಖೆ ನಡೆಸಬೇಕು, ಆಗಿನ್ನೂ ರಘುರಾಮ ರಾಜನ್ ರಿಝರ್ವ್ ಬ್ಯಾಂಕ್ ಗವರ್ನರ್ ಆಗಿದ್ದರೂ, ನಂತರ ಬಂದ ಗವರ್ನರ್ ಉರ್ಜಿತ್ ಪಟೇಲ್ ಸಹಿ ನೋಟುಗಳ ಮೇಲೆ ಏಕೆ ಇದೆ ಎಂಬುದರ ಬಗ್ಗೆಯೂ ಅವರು ಮಾಹಿತಿ ಕೇಳಿದ್ದರು.


ಇದಕ್ಕೆ ಪ್ರತಿಕ್ರಿಯಿಸಿದ ಪ್ರಧಾನ ಮಂತ್ರಿಗಳ ಕಚೇರಿಯ ಮಾಹಿತಿ ಕಾರ್ಯದರ್ಶಿ ಈ ಕೆಲವು ಪ್ರಶ್ನೆಗಳು ದೇಶದ ಆರ್ಥಿಕ ಹಿತಗಳನ್ನು ಪ್ರತಿಕೂಲವಾಗಿ ತಟ್ಟುತ್ತವೆ ಎಂದಿದ್ದರು.

ಇವನ್ನು ಆಲಿಸಿದ ಮುಖ್ಯ ಮಾಹಿತಿ ಆಯುಕ್ತರು(ಸಿಐಸಿ) ಹೇಗೆ ದೇಶದ ಆರ್ಥಿಕ ಹಿತಗಳನ್ನು ಪ್ರತಿಕೂಲವಾಗಿ ತಟ್ಟುತ್ತವೆ ಎಂಬುದನ್ನು ಸಕಾರಣವಾಗಿ ವಿವರಿಸಬೇಕು ಎಂದು ಪ್ರಧಾನ ಮಂತ್ರಿಗಳ ಕಚೇರಿಯ ಕೇಂದ್ರೀಯ ಸಾರ್ವಜನಿಕ ಮಾಹಿತಿ ಅಧಿಕಾರಿ(ಸಿಪಿಐಒ)ಗೆ ನಿರ್ದೇಶನ ನೀಡಿದ್ದಾರೆ. ಆ ವೇಳೆಯಲ್ಲಿ ಈ ಕುರಿತ ದಾಖಲೆಗಳಿರುವ ಇತರ ಇಲಾಖೆಗಳ ಸಿಪಿಐಒಗಳು ಕೂಡ ಹಾಜರಿರಬೇಕು ಎಂದು ನಿರ್ದೇಶನ ನೀಡಿರುವುದಾಗಿ ವರದಿಯಾಗಿದೆ.

ಡಾರ್ವಿನ್ ಸಿದ್ಧಾಂತ ತಪ್ಪು ಎಂದು ಎಲ್ಲೆಡೆಗಳಿಂದ ಟೀಕೆಗಳಿಗೆ ಗುರಿಯಾದ ಅಚ್ಛೇದಿನ್‌ಗಳ ಮಾನವ ಸಂಪನ್ಮೂಲ ರಾಜ್ಯಮಂತ್ರಿಗಳು ಈ ವಾರ 'ವಿಜ್ಞಾನ ದಿನ'ದ ಮುಖ್ಯ ಅತಿಥಿಯಾಗಿ ಅದನ್ನು ಪುನರುಚ್ಚರಿಸಲಿಲ್ಲ. ಆದರೂ ಧೃತಿಗೆಡದ ಅವರ ಹೊಸ ಉವಾಚಕ್ಕೆ ಈ ವ್ಯಂಗ್ಯಚಿತ್ರವನ್ನು ನೋಡಿ:



ದುಬೈನಲ್ಲಿ ಜನಪ್ರಿಯ ಸೂಪರ್‌ಸ್ಟಾರ್ ಶ್ರೀದೇವಿಯವರ ಅನಿರೀಕ್ಷಿತ ಸಾವು ಈ ವಾರ ದೃಶ್ಯ ಮಾಧ್ಯಮಗಳನ್ನು ಆವರಿಸಿತುರೀ ಕುರಿತು ಅವುಗಳು ಅಸಹ್ಯ ಊಹಾಪೋಹಗಳಿಗೆ ಇಳಿದವು. ಅದಕ್ಕಿಂತ ಮೊದಲು ಸೊಹ್ರಬುದಿನ್ ಎನ್‌ಕೌಂಟರ್ ವಿಚಾರಣೆ ನಡೆಸುತ್ತಿದ್ದ ಸಿಬಿಐ ನ್ಯಾಯಾಧೀಶ ಲೋಯರವರ ಸಂಶಯಾಸ್ಪದ ಸಾವಿನ ಬಗ್ಗೆ ಮಾಹಿತಿಗಳು ಹೊರ ಬರುತ್ತಿದ್ದರೂ ಅವು ಈ ಚಾನೆಲ್‌ಗಳ ಗಮನ ಸೆಳೆಯಲಿಲ್ಲ. ನಂತರ ಈಗ ಈ ಕುರಿತ ವಿಚಾರಣೆಯಲ್ಲಿ ಸಿಬಿಐ ಯನ್ನು ತರಾಟೆಗೆ ತಗೊಂಡ ನ್ಯಾಯಾಧೀಶರನ್ನು ವರ್ಗಾಯಿಸಿದ್ದೂ ಈ ಚಾನೆಲ್‌ಗಳಿಗೆ ದೊಡ್ಡ ಸುದ್ದಿಯಾಗಿಲ್ಲ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಬಂಡವಾಳಶಾಹಿಯ ಒಳ ವೈರುಧ್ಯವನ್ನು ಹೊರಗೆಳೆದಿರುವ ನೀರವ್ ಮೋದಿ ಹಗರಣ



ನೀರವ್ ಮೋದಿಯದ್ದು "ನೈಜ ಬಂಡವಾಳಶಾಹಿ"ಯನ್ನು ಪದಚ್ಯುತಗೊಳಿಸಿ ಅದರ ಸ್ಥಾನದಲ್ಲಿ 'ಚಮಚಾ ಬಂಡವಾಳಶಾಹಿ'ಯನ್ನು ನೆಡುವ ಒಂದು ಪ್ರಕರಣವಲ್ಲ, ಬದಲಾಗಿ "ನೈಜ ಬಂಡವಾಳಶಾಹಿ"ಯೇ ತನ್ನತನವನ್ನು ಪಡೆದು ಮೂಲಭೂತವಾಗಿ ತಾನು ಕಾರ್ಯಸಾಧ್ಯವಲ್ಲ ಎಂಬುದನ್ನು ಪ್ರದರ್ಶಿಸುತ್ತಿದೆ. ಖಾಸಗಿ ಗಳಿಕೆಯನ್ನು ಅನುಸರಿಸುವ ಒಂದು ವ್ಯವಸ್ಥೆ ಕೆಲಸ ಮಾಡಲಾರದು ಎಂಬ ಮೂಲಭೂತ ಅಂಶವನ್ನು ಪ್ರಕಟಗೊಳಿಸುತ್ತಿದೆ. **ಪ್ರೊ. ಪ್ರಭಾತ್ ಪಟ್ನಾಯಕ್**

ನೀರವ್ ಮೋದಿ ಮತ್ತು ಆತನ ಮಾವ ಮೆಹುಲ್ ಚೊಕ್ಷಿ ಸಾರ್ವಜನಿಕ ಹಣದ ಲೂಟಿ ಮಾಡಿ, ಆ ಲೂಟಿಯೊಂದಿಗೆ ಪಲಾಯನ ಮಾಡಿರುವ "ನವಭಾರತದ ಉದ್ಯಮಿ"ಗಳ ಪಟ್ಟಿಗೆ ಸೇರಿರುವ ಇತ್ತೀಚಿನ ಹೆಸರುಗಳು. ಪಂಜಾಬ್ ನ್ಯಾಶನಲ್ ಬ್ಯಾಂಕ್, ದೇಶದ ಎರಡನೇ ಅತಿ ದೊಡ್ಡ ಬ್ಯಾಂಕ್, ಯಾವುದೇ ಜತೆಯೀಡು ಇಲ್ಲದೆ ಸಾಲಗಳನ್ನು ಕೊಡುತ್ತಲೇ ಬಂತು ಮತ್ತು ಒಂದು ಸುಮೂಹುರ್ತದಲ್ಲಿ ನೀರವ್ ಮೋದಿ ತನ್ನ ನಿಕಟ ಕುಟುಂಬದೊಂದಿಗೆ ದೇಶ ಬಿಟ್ಟರು, ಕೆಲ ದಿನಗಳ ನಂತರ ಆತನ ಮಾವ ಹಿಂಬಾಲಿಸಿದರು.

ಈ ಎಲ್ಲ ಪರಾರಿಯಾದ "ಉದ್ಯಮಿ" ಗಳಲ್ಲಿ ಎಲ್ಲರಲ್ಲೂ ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಕಾಣಬಹುದು. ಮೊದಲನೆಯದಾಗಿ, ಇವರೆಲ್ಲರೂ ಪ್ರತಿಷ್ಠಿತ "ಸೆಲೆಬ್ರಿಟಿ"ಗಳು (ಅಂದರೆ ಖ್ಯಾತನಾಮರು). ಲಲಿತ್ ಮೋದಿ ಹಲವು ವರ್ಷಗಳ ಕಾಲ ಐಪಿಎಲ್ ಮ್ಯಾಚ್‌ಗಳ ಸಂದರ್ಭದಲ್ಲಿ ಲಕ್ಷಾಂತರ ಮನೆಗಳ ಟಿ.ವಿ. ಪರದೆಗಳಲ್ಲಿ ಪ್ರತಿದಿನ ರಾಜಕಾರಣದ ಮತ್ತು ಬಾಲಿವುಡ್‌ನ ಘಟಾನುಘಟಿಗಳೊಂದಿಗೆ ಕಾಣಿಸಿಕೊಳ್ಳುತ್ತಿದ್ದರು. ಆತನನ್ನು ಈ ಐಪಿಎಲ್ ಹಿಂದಿನ ಮೆದುಳು ಎಂದೇ ಶ್ಲಾಘಿಸಲಾಗುತಿತ್ತು.

ವಿಜಯ ಮಲ್ಯ ಸಕಲ ಬಾಜಾಬಜಂತ್ರಿಯೊಂದಿಗೆ ಆಯ್ಕೆಯಾದ ಒಬ್ಬ ಸಂಸತ್ ಸದಸ್ಯ, ಮತ್ತು ಐಪಿಎಲ್ ಮ್ಯಾಚ್‌ಗಳಲ್ಲಿ ತನ್ನ ಒಡೆತನದ ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ತಂಡದ ಮ್ಯಾಚುಗಳಿದ್ದಾಗಲೆಲ್ಲ ಟಿ ವಿಯಲ್ಲಿ ಕಾಣಿಸಿಕೊಳ್ಳುತ್ತಿದ್ದವರು.

ಮತ್ತು ನೀರವ್ ಮೋದಿ, ಈತನ ವಜ್ರಾಭರಣಗಳು ಹಾಲಿವುಡ್ ಮತ್ತು ಬಾಲಿವುಡ್ ತಾರೆಯರನ್ನು ಅಲಂಕರಿಸಿವೆ, ಜತೆಗೆ ಮದುವೆಯ ಮೂಲಕ ದೇಶದ ಅತ್ಯುನ್ನತ 'ಉದ್ಯಮಿ' ಕುಟುಂಬದ ಸಂಬಂಧಿಯೂ ಆಗಿರುವಾತ.

ಎರಡನೆಯದಾಗಿ, ಇವರೆಲ್ಲರೂ ಆಳುವ ಪಕ್ಷಕ್ಕೆ ನಿಕಟವಾಗಿದ್ದವರು. ಸುಷ್ಮಾ ಸ್ವರಾಜ್ ಮತ್ತು ವಸುಂಧರಾ ರಾಜೇ ಯವರೊಂದಿಗೆ ಲಲಿತ್ ಮೋದಿ ನಿಕಟತೆ ಆತ ದೇಶದಿಂದ ಪಲಾಯನ ಮಾಡಿದ ಮೇಲೂ ಬಹಿರಂಗವಾಗಿಯೇ ಮುಂದುವರೆಯಿತು. ವಿಜಯ ಮಲ್ಯ ರಾಜ್ಯಸಭೆಗೆ ಚುನಾಯಿತನಾದದ್ದು ಬಿಜೆಪಿಯ ಹೆಚ್ಚುವರಿ ಮತಗಳಿಂದ. ಮತ್ತು ಮೆಹುಲ್ ಚೊಕ್ಷಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ 'ಮೆಹುಲ್ ಭಾಯ್' ಆಗಿದ್ದರಷ್ಟೇ ಅಲ್ಲ, ನೀರವ್ ಮೋದಿ ದೇಶದಿಂದ ಪಲಾಯನ ಮಾಡಿದ ಮೇಲೆ ದಾವೊಸ್ ಶೃಂಗ ಸಭೆಯಲ್ಲಿ ಮೋದಿಯುವರ ಭಾರತೀಯ "ಉದ್ಯಮಿ"ಗಳ ತಂಡದ ಭಾಗವಾಗಿ ಒಂದು ಫೋಟೋದಲ್ಲೂ ಕಾಣಿಸಿಕೊಂಡರು. ಆತ ಪ್ರಧಾನ ಮಂತ್ರಿಗಳ ಫೋಟೋದೊಳಕ್ಕೆ ನುಸುಳಿಕೊಂಡರಷ್ಟೇ ಎಂದು ಸರಕಾರ ಆಮೇಲೆ ಹೇಳಿಕೊಂಡಿರುವುದು ಅಸಂಬದ್ಧ, ಏಕೆಂದರೆ ಯಾರೂ ಹಾಗೆ ಪ್ರಧಾನಮಂತ್ರಿಗಳ ಪೋಟೋದೊಳಕ್ಕೆ ನುಸುಳಲು ಸಾಧ್ಯವಿಲ್ಲ.

ಆಳುವ ಪಕ್ಷದೊಂದಿಗೆ ಈ ಎಲ್ಲ ವ್ಯಕ್ತಿಗಳ ಸಾಮೀಪ್ಯ 'ದಿ ವೈರ್'ನಲ್ಲಿ ಸಾಬೀತುಪಡಿಸಿರುವಂತೆ, ಅವರ ಪಲಾಯನಗಳು ಸರಕಾರದ 'ನೆರವಿನ ಪಲಾಯನಗಳು' ಎಂಬುದರಿಂದಲೇ ವೇದ್ಯವಾಗುತ್ತದೆ. 9000 ಕೋಟಿ ರೂ.ಗಳನ್ನು ನುಂಗಿ ಹಾಕಿದ ವಿಜಯ ಮಲ್ಯ ಪ್ರಕರಣದಲ್ಲಿ ಅಕ್ಟೋಬರ್ 16, 2015ರಂದು ಒಂದು 'ಲುಕ್‌ಔಟ್'(ಎಚ್ಚರಿಕೆ) ನೋಟೀಸು ಹೊರಡಿಸಲಾಗಿತ್ತು, ಆದರೆ ನವಂಬರ್ 25ರಂದು ಸರಾಗವಾಗಿ, ಜವಾಬುದಾರಿಕೆಯಿಲ್ಲದೆ "ಕೆಳಮಟ್ಟಕ್ಕೆ" ಇಳಿಸಿ ಮಾರ್ಚ್ 1, 2016ರಂದು ದೇಶದಿಂದ ಓಡಿಹೋಗಲು ಅವಕಾಶ ನೀಡಲಾಯಿತು.

ಮೂರನೆಯದಾಗಿ, ಇವರಲ್ಲಿ ಪ್ರತಿಯೊಬ್ಬರೂ ತನ್ನ ಕ್ರಿಮಿನಲ್ ಕೃತ್ಯದ ಬಗ್ಗೆ ಎಳ್ಳಷ್ಟೂ ಪಶ್ಚಾತ್ತಾಪವಿಲ್ಲದೆ ಅತ್ಯಂತ ಭಂಡತನ ಪ್ರದರ್ಶಿಸುತ್ತಿದ್ದಾರೆ. ಲಲಿತ್ ಮೋದಿ ತನ್ನನ್ನೇ ಬಲಿ ಮಾಡಲಾಗಿದೆ ಎಂಬ ಸೋಗು ಹಾಕುತ್ತ ಜಗತ್ತೆಲ್ಲ ಸುತ್ತುತ್ತಿದ್ದಾರೆ. ವಿಜಯ ಮಲ್ಯ ಲಂಡನ್‌ನಲ್ಲಿ ಭಾರತೀಯ ಹೈಕಮಿಶನ್ನಿನ ಒಂದು ಸಮಾರಂಭದೊಳಕ್ಕೆ ನಡೆದು ಹೋಗುವ ದಾರ್ಷ್ಟ್ಯ ಪ್ರದರ್ಶಿಸುತ್ತಾರೆ. ಮತ್ತು ನೀರವ್ ಮೋದಿಯಂತೂ ಪಿಎನ್‌ಬಿ ದುಡುಕಿದ್ದರಿಂದ ತನ್ನ ಸಾಲಗಳ ಬಗ್ಗೆ ಸಂಭವಿಸಿದ ಮಾಧ್ಯಮ ಮಿಂಚುಗಳಿಂದಾಗಿ ತಾನು ಸಾಲ ಬಾಕಿ ಮಾಡಿಕೊಳ್ಳುವಂತಾಗಿದೆ ಎಂದು ಸೂಚಿಸುವ ಪತ್ರ ಬರೆಯುತ್ತಾರೆ. ಹಾಗೆ ಬರೆಯುವಾಗ ಸಾಲಸುಸ್ತಿಯ ಯಾವುದೇ ಸುದ್ದಿ ಮಾಧ್ಯಮಗಳನ್ನು ತಲುಪುವ ಎಷ್ಟೋ ಮೊದಲು ಜನವರಿ 1ರಂದೇ ದೇಶದಿಂದ ತಾನು ಓಡಿಹೋಗಿದ್ದೆ ಎಂಬುದನ್ನು ಸುಲಭವಾಗಿ ಮರೆತಿದ್ದಾರೆ.

ಆರ್ಥಿಕ ದುಷ್ಕೃತ್ಯಕ್ಕೆ ತಾನು ಬದ್ಧವಿರೋಧಿ ಎಂದು ಕೂಗಿ ಹೇಳುವ, ಕಪ್ಪು ಹಣದ ವಿರುದ್ಧ ಹೋರಾಡಲೆಂದು ನೋಟು ರದ್ದತಿ ತಂದು ಕೋಟ್ಯಂತರ ಜನಗಳನ್ನು ತೀವ್ರ ಕಷ್ಟ ಕಾರ್ಪಣ್ಯಗಳಿಗೆ ಈಡು ಮಾಡಿದ, ಮತ್ತು ಸಾರ್ವಜನಿಕ ವಿತರಣೆಯಲ್ಲಿನ "ತೂತುಗಳನ್ನು" ಮುಚ್ಚಲು ಆಧಾರ್ ಮೇಲೆ ಒತ್ತು ಹಾಕಿ ಈಗಾಗಲೇ ಹಲವಾರು ನಿರ್ಗತಿಕರು ಹಸಿವಿನಿಂದ ಸಾಯುವಂತೆ ಮಾಡಿರುವ ಒಂದು ಸರಕಾರದ ಅಡಿಯಲ್ಲೇ ದೇಶದ ಕೆಲವು ಅತಿ ಶ್ರೀಮಂತರು ಬ್ಯಾಂಕುಗಳನ್ನು ಸೂರೆ ಮಾಡಿದ್ದಾರೆ, ಮಾತ್ರವಲ್ಲ, ಅವರು ಪಲಾಯನ ಮಾಡಲು ನೆರವು ದೊರೆತಿದೆ ಕೂಡ ಎನ್ನುವುದು ನಿಜಕ್ಕೂ ಒಂದು ವ್ಯಂಗ್ಯ.

ಖಾಸಗೀಕರಣವೆಂಬ ತಮಾಷೆ

ಈ ಸೂರೆಯನ್ನೇ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಖಾಸಗೀಕರಿಸಲು ಅಸ್ಸೊಚಾಮ್ ಬಳಸುತ್ತದೆಯೆಂಬುದು ಕೂಡ ತಮಾಷೆಯ ಸಂಗತಿ. ಅಂದರೆ ಬ್ಯಾಂಕನ್ನು ಲೂಟಿ ಮಾಡಿದವರ ಮಂದಿಗೇ ಅದನ್ನು ವಹಿಸಿ ಕೊಡಬೇಕು ಎಂದು ಆಗ್ರಹಿಸುವಂತೆ; ಒಬ್ಬ ನೀರವ್ ಮೋದಿ ಪಿಎನ್‌ಬಿಯನ್ನು ಲೂಟಿ ಮಾಡಿ ನ್ಯೂಯಾರ್ಕಿನಲ್ಲಿ ಆರಾಮವಾಗಿ ಕೂತಿರುತ್ತಾನೆ, ಇತ್ತ ಆ ಲೂಟಿಯೇ ಅದೇ ಪಿಎನ್‌ಬಿಯನ್ನು ಆತನ ಸಂಬಂಧಿಕರಿಗೆ, ಅಂದರೆ ಅಂಬಾನಿಗಳಿಗೆ ವಹಿಸಿ ಕೊಡಲು ಕಾರಣವಾಗುತ್ತದೆ! ಅಥವ ಇನ್ನೂ ತಮಾಷೆಯೆಂದರೆ, ಅದೇ ನೀರವ್ ಮೋದಿ ಲೂಟಿ ಮಾಡಿದ ಅದೇ ಹಣದಿಂದಲೇ ಅದೇ ಪಿಎನ್‌ಬಿಯನ್ನು ಖರೀದಿಸಲು ಒಂದು ಹುಸಿ ಕಂಪನಿಯನ್ನು ಮುಂದಿಡಬಹುದು!

ಅಸ್ಸೊಚಾಮ್ ಏನೋ ಇಂತಹ ವಿಲಕ್ಷಣ ಬೇಡಿಕೆಗಳನ್ನು ಮುಂದಿಡುವುದು ಅನಿರೀಕ್ಷಿತವೇನಲ್ಲ. ಆದರೆ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು ಕೂಡ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಖಾಸಗಿ ಪಾಲನ್ನು ಹೆಚ್ಚಿಸಬೇಕು, ಅದರಿಂದ ಇಂತಹ ದುರಾಚರಣೆಗಳು ನಡೆಯದಂತೆ ಹೆಚ್ಚಿನ ಶೇರುದಾರರ ಜಾಗರೂಕರಾಗಿರುತ್ತಾರೆ ಎನ್ನುತ್ತಿದ್ದಾರೆ. ಇದು ಸರಕಾರದ ಅಭಿಪ್ರಾಯವಾಗಿರಬಹುದೇ, ಅಲ್ಲವಾದರೆ ಒಂದು ಹೊಣೆಗಾರಿಕೆಯ ಅಧಿಕೃತ ಹುದ್ದೆಯಲ್ಲಿದ್ದುಕೊಂಡೇ ಇಂತಹ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಗೊಳಿಸಬಹುದೇ ಎಂದು ಆಶ್ಚರ್ಯವಾಗುತ್ತದೆ. ಆದರೆ ಆತನ ನಿಲುವಿನಲ್ಲಿ ಎರಡು ಎದ್ದು ಕಾಣುವ ದೋಷಗಳಿವೆ.

ಮೊದಲನೆಯದಾಗಿ, ಒಂದು ಬ್ಯಾಂಕಿನಲ್ಲಿ ತಮ್ಮ ಹಿತ ಅಡಗಿರುವವರು ಜಾಗರೂಕರಾಗಿರುವುದರಿಂದಲೇ ಇಂತಹ ದುರಾಚರಣೆಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಬೇರಿಂಗ್ಸ್ ಬ್ಯಾಂಕಿನ ಪ್ರಕರಣ ಇದನ್ನು ತೋರಿಸಿದೆ. ಬ್ರಿಟನ್ನಿನ ಒಂದು ಅತಿ ಹಳೆಯ ವ್ಯಾಪಾರಿ ಬ್ಯಾಂಕ್‌ನ ಹಣವನ್ನು ಅದರ ಒಬ್ಬ ನೌಕರ ನಿಕ್ ಲೀಸನ್, ವಿಪರೀತ ಜೂಜುಕೋರತನಕ್ಕೆ ಬಳಸಿಕೊಂಡು ಅದು ಮುಳುಗುವಂತೆ ಮಾಡಿದ. ಈ ಪಿಎನ್‌ಬಿ ಪ್ರಕರಣದಲ್ಲಿ ಬಳಸಿದ ಎಲ್‌ಒಯು(ಮುಚ್ಚಳಿಕೆ ಪತ್ರ)ನ ಜೀವಿತಾವಧಿ ಬಹಳ ಚಿಕ್ಕದು. ಆದ್ದರಿಂದ ಹಗರಣ ಸ್ಫೋಟಗೊಳ್ಳುವ ಸ್ವಲ್ಪವೇ ಮೊದಲು ಈ ಎಲ್‌ಒಯುಗಳನ್ನು ಒಟ್ಟಾಗಿ ಕಲೆ ಹಾಕಿರಬೇಕು, ಇಲ್ಲವೇ, ಅವಧಿ ಮುಗಿದ ಎಲ್‌ಒಯುಗಳಿಗೆ ಹೊಸ ಎಲ್‌ಒಯುಗಳನ್ನು ನೀಡಿ ಈ ದುಷ್ಕೃತ್ಯ ಆಡಿಟ್‌ನ ಗಮನಕ್ಕೆ ಬಾರದೇ ಹೋಗಿರಬಹುದು. ಆದ್ದರಿಂದ ಶೇರುದಾರರಿಗೆ ಇದನ್ನು ತಡೆಯಲು ಸಾಧ್ಯವೇ ಇರುತ್ತಿರಲಿಲ್ಲ.

ಶೇರುದಾರರ ನಿಗಾ ಅಲ್ಲ, ಸಂಸದೀಯ ನಿಗಾ

ಇಲ್ಲಿ ಹೆಚ್ಚು ಮಹತ್ವದ ಪ್ರಶ್ನೆ ಸಾಲ ನೀಡಿಕೆಯಲ್ಲಿ ಅನುಸರಿಸುತ್ತಿದ್ದ ಕ್ರಮಗಳನ್ನು ಕೆಲವು ನೌಕರರ ಹಿಂಡು ನೀರವ್ ಮೋದಿಗೆ ಅನುಕೂಲವಾಗುವಂತೆ ಹೇಗೋ ಹೊಂದಿಸಿಕೊಂಡುದಕ್ಕೆ ಸಂಬಂಧಿಸಿದ್ದು. ಇದನ್ನು ತಡೆಯಲು ಹೆಚ್ಚಿನ ಶೇರುದಾರರ ಜಾಗರೂಕತೆಯಲ್ಲ, ಆಚರಣೆಯಲ್ಲಿರುವ ಕ್ರಮಗಳಲ್ಲಿ ಬದಲಾವಣೆ ತರಬೇಕಾಗುತ್ತದೆ. ಈ ಬಗ್ಗೆ ಎಚ್ಚರಿಕೆ ಬಂದಿದ್ದರೂ ಕ್ರಮ ಕೈಗೊಳ್ಳದಿರುವುದರಿಂದಲೇ ಇಲ್ಲಿ ಮೋದಿ ಸರಕಾರ ದಂಡನೀಯವಾಗುವುದು. ಇಲ್ಲಿಯೂ ಆಚರಣೆಗಳಲ್ಲಿ ಒಂದು ಬದಲಾವಣೆ ಬೇಕಾಗಿದೆ. ಇಂತಹ ಒಂದು ಬದಲಾವಣೆ, ಉದಾಹರಣೆಗೆ, ಖಾಸಗೀಕರಣದ ಮೂಲಕ ಹೆಚ್ಚಿನ ಶೇರುದಾರರ ನಿಗಾದ ಬದಲು ಸಾರ್ವಜನಿಕ ವಲಯದ ಬ್ಯಾಂಕುಗಳ ವ್ಯವಹಾರಗಳ ಮೇಲೆ ಹೆಚ್ಚಿನ ಸಂಸದೀಯ ನಿಗಾ ಇರುವಂತಾಗಬೇಕು.

ಎರಡನೆಯದಾಗಿ, ಪಿಎನ್‌ಬಿ ಒಂದು ಖಾಸಗಿ ಬ್ಯಾಂಕ್ ಆಗಿತ್ತು ಎಂದಿಟ್ಟುಕೊಳ್ಳೋಣ. ಆಗ ಇಂತಹ ಮಟ್ಟದ ಒಂದು ಹಗರಣ ಕಂಡು ಠೇವಣಿದಾರರು ಓಡೋಡಿ ಬಂದು ತಮ್ಮ ಠೇವಣಿಗಳನ್ನು ಹಿಂತೆಗೆದುಕೊಂಡು ಒಂದೋ ಬ್ಯಾಂಕ್ ಮುಳುಗುತ್ತಿತ್ತು ಅಥವ ಸರಕಾರ ಅದನ್ನು ಪಾರು ಮಾಡಲು ಭಾರೀ ಬೆಲೆ ತೆರಬೇಕಾಗುತ್ತಿತ್ತು. ಅದರೆ ಪಿಎನ್‌ಬಿ ಒಂದು ಸರಕಾರೀ ಒಡೆತನದ ಬ್ಯಾಂಕ್ ಆಗಿರುವುದರಿಂದಾಗಿ ಇನ್ನೂ ಠೇವಣಿದಾರರಲ್ಲಿ ಸಾಕಷ್ಟು ವಿಶ್ವಾಸ ಉಳಿದಿದೆ. ಜೇಟ್ಲಿ ಮತ್ತು ಮೋದಿ ಮೌನಧಾರಣೆ ಮಾಡಿದ್ದರೂ ಜನಗಳು ತಮ್ಮ ಠೇವಣಿಗಳನ್ನು ಹಿಂತೆಗೆದುಕೊಳ್ಳಲು ಧಾವಿಸಿಲ್ಲ.

ಖಾಸಗೀಕರಣ, ಅದು ಖಾಸಗಿಯವರ ನಿಯಂತ್ರಣದ ಮೂಲಕವಾಗಲೀ, ಅಥವ ಹೆಚ್ಚಿನ ಖಾಸಗಿ ಶೇರುದಾರಿಕೆಯಿಂದಾಗಲೀ, ಇಂತಹ ಘಟನೆಗಳು ಸಂಭವಿಸದಂತೆ ತಡೆಯಲಾರವು. ಅವು ಸಂಭವಿಸಿದಾಗ ಬದುಕುಳಿಯಲು ಸರಕಾಂದ ಹಣವೇ ಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸರಕಾರದ ಹಣವನ್ನೇ ಉಪಯೋಗಿಸುವುದಾದಲ್ಲಿ ಸರಕಾರವೇ ಅದರ ಒಡೆತನ ಹೊಂದಿರದಿರಲು ಅಥವ ತನ್ನ ಶೇರು ಪಾಲನ್ನು ಕಡಿಮೆಮಾಡಿಕೊಳ್ಳಬೇಕೆನ್ನಲು ಕಾರಣವೇನೂ ಇರುವುದಿಲ್ಲ. ಆದ್ದರಿಂದ ಇಂತಹ ಘಟನೆಗಳು ನಡೆಯದಂತೆ ತಡೆಯಲು ಸರಕಾರೀ ಒಡೆತನವನ್ನು ಉಳಿಸಿಕೊಳ್ಳುತ್ತಲೇ, ಉಸ್ತುವಾರಿಯ ಸೂಕ್ತ ಸಾಂಸ್ಥಿಕ ವ್ಯವಸ್ಥೆಗಳನ್ನು ಕಂಡುಕೊಳ್ಳಬೇಕು.

ವ್ಯವಸ್ಥೆಯ ಮೂಲಭೂತ ಸಮಸ್ಯೆ

ಆದರೆ ಇಲ್ಲಿ ಒಂದು ಇನ್ನೂ ಆಳವಾದ ಸಮಸ್ಯೆಯಿದೆ. ಬಂಡವಾಳಶಾಹಿ ಖಾಸಗಿ ಆರ್ಥಿಕ ಮಾಧ್ಯಮಗಳು, ಅಂದರೆ ಖಾಸಗಿ ವ್ಯಾಪಾರಗಳು, ಕಾರ್ಪೊರೇಟ್‌ಗಳು ಮತ್ತು ಬ್ಯಾಂಕುಗಳು ಆರ್ಥಿಕ ಗಳಿಕೆ ಮಾಡಿಕೊಳ್ಳುವಂತೆ ಉತ್ತೇಜನೆ ನೀಡುತ್ತವೆ, ವಾಸ್ತವವಾಗಿ ಇದೇ ಅವುಗಳ ಕಾರ್ಯಾಚರಣೆಯ ವಿಧಾನ. ಹಾಗಿದ್ದರೂ ಅದು ಈ ಮಾಧ್ಯಮಗಳ ನೌಕರರು ತಮ್ಮ ಸ್ವಂತದ ಖಾಸಗಿ ಗಳಿಕೆಯಲ್ಲಿ ಗುಟ್ಟಾಗಿ ಕೂಡ ತೊಡಗಬಾರದೆಂಬ ಆದೇಶವನ್ನು ಪಾಲಿಸಬೇಕು ಎಂದು ಬಯಸುತ್ತದೆ. ಅದು ಆರ್ಥಿಕ ವ್ಯವಸ್ಥೆಯಲ್ಲಿ ಗರಿಷ್ಟ ಗಳಿಕೆ ಮಾಡುವ ಭೋಗವಾದಿ ವರ್ತನೆಗೆ ಉತ್ತೇಜನೆ ನೀಡುತ್ತದೆ.; ಆದರೆ ಪ್ರಭುತ್ವ ಮತ್ತು ನೌಕರರು ಇಂತಹ ಭೋಗವಾದದಿಂದ ಕಳಂಕಿತರಾಗಬಾರದು ಎಂದು ಬಯಸುತ್ತದೆ. ಖಾಸಗಿ ಮಾಧ್ಯಮಗಳು ಗರಿಷ್ಟ ಲಾಭ ಗಳಿಸಬೇಕು, ಆದರೆ ಅದು ಕಾನೂನಾತ್ಮಕ ಮಿತಿಗಳೊಳಗೇ ಇರಬೇಕು; ಆದರೂ ಕಾನೂನು ಮುರಿದು (ಉದಾಹರಣೆಗೆ, ಕಾನುನುಪಾಲಕರಿಗೆ ಲಂಚ ಕೊಡುವ ಮೂಲಕ) ಗರಿಷ್ಟ ಲಾಭ ಗಳಿಸುವ ವರ್ತನೆಯನ್ನು ತಡೆಯುವಂತದ್ದು ಅದರ ಬಳಿ ಏನೂ ಇಲ್ಲ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬಂಡವಾಳಶಾಹಿಯ ಹೃದಯದಲ್ಲೇ ಒಂದು ಮೂಲಭೂತ ವೈರುಧ್ಯವಿದೆ– ಅದು ಉತ್ತೇಜಿಸುವ ವರ್ತನೆ ಮಿತಿಗಳೊಳಗೆ ಇದ್ದರೆ ಮಾತ್ರ ಸಮರ್ಥನೀಯವಾಗಿರುತ್ತದೆ: ಆದರೆ ಹಾಗೆ ಮಿತಿಯೊಳಗೆ ಇಡುವಂತದ್ದು ಈ ವ್ಯವಸ್ಥೆಯಲ್ಲಿ ಏನೂ ಇಲ್ಲ.

ಈ ಸಮಸ್ಯೆ ಈ ಹಿಂದೆ ಗಂಭೀರ ರೂಪವನ್ನೇನೂ ತಳೆಯಲಿಲ್ಲ. ಏಕೆಂದರೆ ಬಹಳ ಕಾಲ ಆರ್ಥಿಕ ವ್ಯವಸ್ಥೆಯ ಹೊರಗಿರುವ ಸಂಸ್ಥೆಗಳು , ಅಂದರೆ ಪ್ರಭುತ್ವ ಮುಂತಾದವುಗಳು 'ಮಾಡಿದ್ದು' ಏನು, ಅಥವ 'ಮಾಡದ್ದು' ಏನು ಎಂಬ ವಿಚಾರಗಳನ್ನು ಹಿಂದಿನ ಒಂದು ಉತ್ಪಾದನಾ ವಿಧಾನದಿಂದ ಪಡೆದಿರುತ್ತವೆ(ಉದಾ: 'ಗೌರವಭಾವ', "ಸಾರ್ವಜನಿಕ ಶಾಲೆಯ ಲಾಂಛನ' ಇತ್ಯಾದಿ). ಅಥವ ಸಾಮಾಜಿಕ ಪ್ರಜಾಪ್ರಭುತ್ವದಲ್ಲಿ ಕಾರ್ಮಿಕರ ಸಾಮುದಾಯಿಕ ಮೌಲ್ಯಗಳಿಗೆ ಒಂದು ರೀತಿಯ ಬದ್ಧತೆ(ಉದಾ: 'ನನ್ನ ಜತೆಗಾರರ ಕೈಬಿಡಬಾರದು' ಎಂಬ ಭಾವನೆ) ಇರುತ್ತದೆ. ನಮ್ಮಂತಹ ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟದ ಪರಂಪರೆ ಪ್ರಭುತ್ವದ ಮತ್ತು ಸಾರ್ವಜನಿಕ ವಲಯದ ಸಿಬ್ಬಂದಿಗಳಲ್ಲಿ ಬಂಡವಾಳಶಾಹಿಯೊಂದಿಗೆ ಬರುವ ಐಶ್ವರ್ಯದ ಗೀಳಿನಿಂದ ದೂರವಿರಬೇಕು ಎಂಬೊಂದು ನೈತಿಕ ಅಂಶವನ್ನು ಬೆಳೆಸಿತ್ತು. ಒಟ್ಟಿನಲ್ಲಿ ಹೇಳುವದಾದರೆ ಬಂಡವಾಳಶಾಹಿಯ ಮೂಲದಲ್ಲಿ ಇರುವ ವೈರುಧ್ಯ ಇಡೀ ವ್ಯವಸ್ಥೆ ಕೆಲಸ ಮಾಡದಂತೆ ಮಾಡುವ ತೀವ್ರತೆಯನ್ನು ಪಡೆದಿರಲಿಲ್ಲ.

ಆದರೆ, ನವ–ಉದಾರವಾದದೊಂದಿಗೆ ಈ ನಿಯಂತ್ರಣ ಹೊರಟು ಹೋಗುತ್ತದೆ. ಖಾಸಗಿ ಗಳಿಕೆಯ ಹುಡುಕಾಟ ಸಾರ್ವತ್ರಿಕವಾಗುತ್ತದೆ. ಇದು ನಾವು ಇತ್ತೀಚೆಗೆ ಕಾಣುತ್ತಿರುವಂತೆ ವ್ಯವಸ್ಥೆಯೇ ಮುರಿದು ಬೀಳುವಂತೆ ಮಾಡುತ್ತಿದೆ. ಆದ್ದರಿಂದ ನೀರವ್ ಮೋದಿಯದ್ದು "ನೈಜ ಬಂಡವಾಳಶಾಹಿ"ಯನ್ನು ಪದಚ್ಯುತಗೊಳಿಸಿ ಅದರ ಸ್ಥಾನದಲ್ಲಿ 'ಚಮಚಾ ಬಂಡವಾಳಶಾಹಿ'ಯನ್ನು ನೆಡುವ ಒಂದು ಪ್ರಕರಣವಲ್ಲ, ಬದಲಾಗಿ "ನೈಜ ಬಂಡವಾಳಶಾಹಿ"ಯೇ ತನ್ನತನವನ್ನು ಪಡೆದು ಮೂಲಭೂತವಾಗಿ ತಾನು ಕಾರ್ಯಸಾಧ್ಯವಲ್ಲ ಎಂಬುದನ್ನು ಪ್ರದರ್ಶಿಸುತ್ತಿದೆ.

ಖಂಡಿತವಾಗಿಯೂ, ಮೇಲೆ ಹೇಳಿರುವಂತಹ ಸಾಂಸ್ಥಿಕ ನಿಯಂತ್ರಣಗಳು ಸ್ವಲ್ಪ ಸಮಯದ ವರೆಗೆ ದುರ್ಗತಿಯನ್ನು ತಡೆಯಬಹುದು, ಆದರೆ ಬೇಗನೇ ಈ ನಿಯಂತ್ರಣಗಳೇ ಬುಡಮೇಲಾಗುತ್ತವೆ, ಮತ್ತು ಖಾಸಗಿ ಗಳಿಕೆಯನ್ನು ಅನುಸರಿಸುವ ಒಂದು ವ್ಯವಸ್ಥೆ ಕೆಲಸ ಮಾಡಲಾರದು ಎಂಬ ಮೂಲಭೂತ ಅಂಶ ಪ್ರಕಟಗೊಳ್ಳುತ್ತದೆ. ○

ರಾಜಸ್ಥಾನ: ರೈತರ ಪ್ರತಿರೋಧ ತಡೆಯಲು ಸಿಕಾರ್‌ನಲ್ಲಿ ಸೆಕ್ಷನ್ 144

ಮಾರ್ಚ್ 8ರಂದು ಪ್ರಧಾನಿಗಳ ಮುಂದೆಯೇ ಬೇಡಿಕೆ ಮಂಡಿಸಲು ಎಐಕೆಎಸ್ ನಿರ್ಧಾರ

ರಾಜಸ್ಥಾನದ ಬಿಜೆಪಿ ಸರಕಾರದ ವಿಶ್ವಾಸದ್ರೋಹದ ವಿರುದ್ಧ ರಾಜ್ಯ ರೈತರು ಫೆಬ್ರುವರಿ 22ರಂದು ರಾಜಧಾನಿ ಜೈಪುರದಲ್ಲಿ ಮಹಾಪಡಾವ್ ನಡೆಸುವುದನ್ನು ತಡೆಯಲು ಮುಖಂಡರ ಬಂಧನ ಮತ್ತು ಪೋಲಿಸ್ ದಮನ ನಡೆಯಿತು. ಆದರೆ ಹಿಂದಿನ ಸಂಚಿಕೆಯಲ್ಲಿ ವರದಿಯಾದಂತೆ ರೈತರ ಪ್ರತಿಭಟನೆಯನ್ನು ತಡೆಯಲಾಗಲಿಲ್ಲ. ರಾಜ್ಯಾದ್ಯಂತ ರೈತರ ರಾಸ್ತಾರೋಕೋಗಳು ನಡೆದವು. ಅಲ್ಲಿಗೂ ನಿಲ್ಲದೆ ರೈತರ ಪ್ರತಿರೋಧ ಚಳುವಳಿ ಮುಂದುವರೆಯುತ್ತಿರುವುದನ್ನು ಕಂಡು ಹೆದರಿರುವ ಬಿಜೆಪಿ ಸರಕಾರ ರೈತರ ಚಳುವಳಿಯ ಕೇಂದ್ರವಾದ ಸಿಕಾರ್‌ನಲ್ಲಿ ಮಾರ್ಚ್ 1 ರಿಂದ ಸೆಕ್ಷನ್ 144 ಜಾರಿ ಮಾಡಿದೆ.

ಪ್ರಧಾನ ಮಂತ್ರಿಗಳು ಮಾರ್ಚ್ 8ರಂದು ರಾಜ್ಯಸರಕಾರ ಬಹಳ ವಿಜೃಂಭಣೆಯಿಂದ ನಡೆಸಬೇಕೆಂದಿರುವ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಲು ಝುನ್ಝುನುಗೆ ಭೇಟಿ ನೀಡಲಿದ್ದಾರೆ. ಅಂದು ಅವರ ಮುಂದೆಯೇ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕನಿಷ್ಟ ಬೆಂಬಲ ಬೆಲೆ, ರೈತರ ಸಾಲಮನ್ನಾ ಮತ್ತಿತರ ರೈತರ ಬೇಡಿಕೆಗಳನ್ನು ಮಂಡಿಸಲು ಫೆ.27ರಂದು ಸಭೆ ಸೇರಿದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ರಾಜ್ಯಸಮಿತಿ ನಿರ್ಧರಿಸಿದ ಹಿನ್ನೆಲೆಯಲ್ಲಿ ಈ ಸೆಕ್ಷನ್ 144 ನ್ನು ಜ್ಯಾರಿ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಸರಕಾರದ ಈ ಕ್ರಮದಿಂದಾಗಿ ಹೋಳಿ ಆಚರಣೆಗೆ ತೊಂದರೆ ಬಂದಿದೆ, ಅಲ್ಲದೆ ಬೋರ್ಡ್ ಪರೀಕ್ಷೆಗಳನ್ನು ಮಾರ್ಚ್ 8ಕ್ಕೆ ಮುಂದೂಡಬೇಕಾಗಿ ಬಂದಿದೆ.

ರಾಜ್ಯದ ರಾಜಧಾನಿಯಲ್ಲಿ ಈಗ ಯಾವ ಸಾರ್ವಜನಿಕ ಪ್ರತಿಭಟನೆಗೂ ಅವಕಾಶ ವಿಲ್ಲದಂತಾಗಿದೆ. ಮತಪ್ರದರ್ಶನಗಳನ್ನು ನಗರದ ಹೊರಗೆ ಅದೂ ಮಧ್ಯಾಹ್ನ 12 ಗಂಟೆಯಿಂದ 4ಗಂಟೆಯ ಒಳಗೇ ಮುಗಿಸಬೇಕಂತೆ. ಆದರೆ ಧಾರ್ಮಿಕ ಮೆರವಣಿಗೆಗಳಿಗೆ ಇಂತಹ ಯಾವ ಮಿತಿಗಳೂ ಇಲ್ಲ. ಮಾರ್ಚ್ 8ರ ಸಮಾರಂಭದ ವ್ಯವಸ್ಥೆಗಳ ಉಸ್ತುವಾರಿಗೆ ಸ್ವತಃ ಮುಖ್ಯಮಂತ್ರಿಗಳೇ ಫೆ.28ರಂದು ಝುನ್ಝುನುಗೆ ಭೇಟಿ ನೀಡಿದ್ದರು.

ಅದೇನೇ ಇರಲಿ, "ನಾವು ಪ್ರಧಾನ ಮಂತ್ರಿಗಳನ್ನು ಭೇಟಿಯಾಗುವ ನಮ್ಮ ಯೋಜನೆಗೆ ಬದ್ಧರಾಗಿದ್ದೇವೆ. ಪ್ರಭುತ್ವಯಂತ್ರವನ್ನು ನಮ್ಮ ವಿರುದ್ಧ ಬಳಸಿದರೆ ನಾವು ಅದನ್ನು ಎದುರಿಸಲು ಸಿದ್ಧ, ಅದರ ಪರಿಣಾಮಗಳಿಗೆ ಸರಕಾರವೇ ಹೊಣೆಯಾಗಬೇಕಾಗುತ್ತದೆ" ಎಂದು ರಾಜ್ಯದ ಹಿರಿಯ ರೈತ ಮುಖಂಡರೂ ಎಐಕೆಎಸ್‌ನ ಉಪಾಧ್ಯಕ್ಷರೂ ಆಗಿರುವ ಆಮ್ರ ರಾಮ್ ಹೇಳಿದ್ದಾರೆ.



ಮಹಾರಾಷ್ಟ್ರದಲ್ಲೂ ವಿಶ್ವಾಸದ್ರೋಹ ಮಾರ್ಚ್ 6–12 : 200 ಕಿ.ಮೀ. ರೈತರ 'ಲಾಂಗ್ ಮಾರ್ಚ್'

ಮಹಾರಾಷ್ಟ್ರದ ಬಿಜೆಪಿ ಸರಕಾರವೂ ರೈತರ ಚಾರಿತ್ರಿಕ ಮುಷ್ಕರದಿಂದಾಗಿ ಒಪ್ಪಿಕೊಂಡಿದ್ದ ಬೇಡಿಕೆಗಳನ್ನು ಜಾರಿ ಮಾಡದೆ ರೈತರಿಗೆ ವಿಶ್ವಾಸದ್ರೋಹ ಮಾಡಿದೆ. ಇದರ ವಿರುದ್ಧ 50,000 ನಾಶಿಕ್‌ನಿಂದ ಮುಂಬೈವರೆಗೆ 200 ಕಿ.ಮೀ. ಉದ್ದದ ರೈತರ "ಲಾಂಗ್ ಮಾರ್ಚ್" ನಡೆಸಲು ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾ ನಿರ್ಧರಿಸಿದೆ. ಇದು ಮಾರ್ಚ್ 6ರಂದು ನಾಶಿಕ್‌ನಿಂದ ಹೊರಟು ಮಾರ್ಚ್ 12ರಂದು ಮುಂಬೈ ತಲುಪಲಿದೆ. ಅಲ್ಲಿ ರಾಜ್ಯ ವಿಧಾನಸಭೆಯನ್ನು ಅನಿರ್ದಿಷ್ಟ ಕಾಲದ ವರೆಗೆ ಘೇರಾವ್ ಮಾಡಲು ನಿರ್ಧರಿಸಿದೆ.

ಫೆಬ್ರುವರಿ 16ರಂದು ಸಾಂಗ್ಲಿಯಲ್ಲಿ ಸಭೆ ಸೇರಿದ ಕಿಸಾನ್ ಸಭಾದ ರಾಜ್ಯಮಂಡಳಿಯ ವಿಸ್ತೃತ ಸಭೆ ಈ ಮಹತ್ವದ ನಿರ್ಧಾರವನ್ನು ಕೈಗೊಂಡಿದೆ.

ಸ್ವಾಮಿನಾಥನ್ ಆಯೋಗದ ಶಿಫಾರಸಿನ ಜಾರಿ, ಸಾಲಮನ್ನಾದ ದೀರ್ಘಕಾಲದ ರಾಷ್ಟ್ರಮಟ್ಟದ ಬೇಡಿಕೆಗಳಲ್ಲದೆ, ಅರಣ್ಯ ಹಕ್ಕು ಕಾಯ್ದೆಯ ಕಟ್ಟುನಿಟ್ಟಾದ ಜಾರಿ, ದೇವಸ್ಥಾನದ ಜಮೀನುಗಳು ಮತ್ತು ಹುಲ್ಲುಗಾವಲು ಭೂಮಿಗಳನ್ನು ಅದರಲ್ಲಿ ಬೇಸಾಯ ಮಾಡುವವರಿಗೆ ಕೊಡಬೇಕು, ಬಡ ರೈತರು ಮತ್ತು ಕೃಷಿಕೂಲಿಕಾರರಿಗೆ ವಿವಿಧ ಪೆನ್ಶನ್ ಯೋಜನೆಗಳನ್ನು ಹೆಚ್ಚಿಸಬೇಕು, ಸೂಪರ್ ಹೈವೇ, ಬುಲೆಟ್ ಟ್ರೇನ್ ಮುಂತಾದ ಫ್ಯಾನ್ಸಿ ಯೋಜನೆಗಳ ಹೆಸರಲ್ಲಿ ರೈತರ ಭೂಸ್ವಾಧೀನಕ್ಕೆ ವಿರೋಧ , ನಾಶಿಕ್, ತಾಣೆ ಮತ್ತು ಪಾಲ್ಘರ್ ಜಿಲ್ಲೆಗಳಲ್ಲಿ ಪ್ರಸ್ತಾವಿಸಿರುವ ನದಿ ಜೋಡಣೆ ಯೋಜನೆಯನ್ನು ಬುಡಕಟ್ಟು ಹಳ್ಳಿಗಳ ಮುಳುಗಡೆಯಾಗದಂತೆ ಮತ್ತು ನೀರಿನ ಪೂರೈಕೆ ಸಿಗುವಂತೆ ಸಂಪೂರ್ಣವಾಗಿ ಬದಲಿಸಬೇಕು ಇತ್ಯಾದಿ ಬೇಡಿಕೆಗಳ ಮೇಲೆ ಈ ಲಾಂಗ್ ಮಾರ್ಚ್ ನಡೆಯಲಿದೆ.

ಎಐಕೆಎಸ್, ಎಸ್‌ಎಫ್‌ಐ–ಡಿವೈಎಫ್‌ಐ ಮುಖಂಡರು ಈ ಲಾಂಗ್‌ಮಾರ್ಚ್‌ಗೆ ನೇತೃತ್ವ ನೀಡಲಿದ್ದಾರೆ.

ಯೋಗಿ ರಾಜ್ಯಭಾರದಲ್ಲಿ ಹಸಿವಿನಿಂದ ದಲಿತ ಬಾಲಕಿ ಆತ್ಮಹತ್ಯೆ

ಯೋಗಿ ರಾಜ್ಯಭಾರ ಒಂದು ವರ್ಷ ಪೂರ್ಣಗೊಳ್ಳುತ್ತಿರುವ ವೇಳೆಗೆ ರಾಜಧಾನಿಯಿಂದ ಬಹಳ ದೂರವೇನೂ ಇಲ್ಲದ ಒಂದು ಹಳ್ಳಿಯಲ್ಲಿ 12 ವರ್ಷಗಳ ದಲಿತ ಬಾಲಕಿ ಹಸಿವು ತಾಳಲಾರದೆ ಆತ್ಮಹತ್ಯೆಗೆ ಶರಣಾದ ಹೃದಯವಿದ್ರಾವಕ ಘಟನೆ ಉತ್ತರಪ್ರದೇಶದ ಲಖೀಮ್‌ಪುರ್ ಜಿಲ್ಲೆಯ ನಿಘಾಸನ್ ತಹಸೀಲ್‌ನಿಂದ ವರದಿಯಾಗಿದೆ. ಈ ಬಗ್ಗೆ ನಿಜಸಂಗತಿ ತಿಳಿಯಲು ಹಾಗೂ ದುಃಖಿತಪ್ತ ಕುಟುಂಬಕ್ಕೆ ಸಾಂತ್ವನ ಮತ್ತು ನೆರವು ನೀಡಲು ಅಲ್ಲಿಗೆ ಫೆಬ್ರುವರಿ 28ರಂದು ಭೇಟಿ ನೀಡಿ ಬಂದ ರಾಜ್ಯದ ಜನವಾದಿ ಮಹಿಳಾ ಸಂಘಟನೆ ಮತ್ತು ಸಿಪಿಐ(ಎಂ) ನಿಯೋಗ ಸಂಗ್ರಹಿಸಿದ ಮಾಹಿತಿ ಹೀಗಿದೆ:

ಜಗರಾನಾ ನಾಲ್ಕು ವರ್ಷಗಳ ಹಿಂದೆ ಗಂಡ ಸಾವಿಗೀಡಾದ ನಂತರ ಕೂಲಿನಾಲಿ ಮಾಡಿ ನಾಲ್ಕುಮಕ್ಕಳ ಹೊಟ್ಟೆ ಹೊರೆಯುತ್ತಿರುವ ದಲಿತ ಮಹಿಳೆ. ಈ ಊರಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಯೇನೂ ಇಲ್ಲ. ಮೂರು ದಿನಕ್ಕೊಮ್ಮೆ 110 ರೂ,ಗಳ ಕೂಲಿ ಸಿಗುತ್ತಿತ್ತು. ಅದರಲ್ಲೇ 18 ವರ್ಷದ ಮಗಳ ಮದುವೆ ಸಾಲಸೋಲ ಮಾಡಿ ಪೂರೈಸಿದಳು. ವಿಧವಾ ಪೆನ್ಶನ್‌ನ 300ರೂ. ಅದರ ಬಡ್ಡಿಗೆ ಹೋಗುತ್ತಿದೆ. ಸಾಲ ಹಾಗೇ ಇದೆ. ಆದ್ದರಿಂದ ಒಂದೆರಡು ದಿನಗಳ ಉಪವಾಸದ ಪರಿಸ್ಥಿತಿ ಹಲವು ಬಾರಿ ಬಂದಿತ್ತು. ಆದರೆ ಈ ಬಾರಿ ಕೂಲಿ ಸಿಗದೆ ಮೂರು ಮಕ್ಕಳೊಂದಿಗೆ ಆಕೆ 4ದಿನಗಳ ಕಾಲ ಉಪವಾಸವಿರಬೇಕಾಗಿ ಬಂದಿತ್ತು. ಫೆಬ್ರುವರಿ 24 ರ ಸಂಜೆ. ಮಕ್ಕಳು ಹಸಿವಿನಿಂದ ವಿಲವಿಲನೆ ಒದ್ದಾಡುವುದನ್ನು ಕಾಣಲಾರದೆ ಎಲ್ಲಿಂದಲೋ ಮೂರು ರೊಟ್ಟಿ ಬೇಡಿ ತಂದು ಮೂವರು ಮಕ್ಕಳಿಗೆ ಒಂದೊಂದನ್ನು ಹಂಚಿದಳು. ಆದರೆ 4 ದಿನಗಳಿಂದ ಹಸಿದಿದ್ದ 12 ವರ್ಷದ ಮಗಳ ತಳಮಳ ರೊಟ್ಟಿ ತಿಂದ ನಂತರ ಮತ್ತಷ್ಟು ಹೆಚ್ಚಿತು. ಅವಳಿಗೆ ಇನ್ನೇನಾದರೂ ತರಲೆಂದು 50 ರೂ. ಸಾಲ ಮಾಡಿ ತಾಯಿ ಹೊರಗೆ ಹೋದಳು. ಆದರೆ ಆಕೆ ಹಿಂದಿರುಗುವಷ್ಟರಲ್ಲಿ ಹಸಿವಿನ ಬಾಧೆ ತಾಳಲಾರದೆ ಬಾಲಕಿ ಆತ್ಮಹತ್ಯೆ ಮಾಡಿಕೊಂಡಿದ್ದಳು.




ಈ ಹಳ್ಳಿಯಲ್ಲಿ ಇಂತಹ ಪರಿಸ್ಥಿತಿಯಲ್ಲಿರುವ, ರೇಶನ್ ಕಾರ್ಡ್ ಇಲ್ಲದ ಕುಟುಂಬಗಳು ಹಲವು ಇವೆ ಎಂದು ನಿಯೋಗದ ತನಿಖೆಯಿಂದ ತಿಳಿದು ಬಂತು. ನಿಯೋಗ ಜಗರಾನಾ ಮತ್ತು ಆಕೆಯ ಉಳಿದ ಇಬ್ಬರು ಮಕ್ಕಳ ನೋವು ಆಲಿಸಿ 15,000 ರೂ. ತಾತ್ಕಾಲಿಕ ಪರಿಹಾರ ಎಂದು ಕೊಟ್ಟಿತು. ಈ ವೇಳೆಗೆ ಈ ಹೃದಯವಿದ್ರಾವಕ ಘಟನೆ ನಡೆದು 3ದಿನಗಳಾಗಿದ್ದರೂ ಸರಕಾರದ ಕಡೆಯಿಂದ ಯಾರೂ ಅತ್ತ ಸುಳಿದಿರಲಿಲ್ಲ. ಆದ್ದರಿಂದ ನಿಯೋಗ ಆಕೆಗೆ ಸೂಕ್ತ ಪರಿಹಾರ ಒದಗಿಸುವ ಬಗ್ಗೆ ಮಾತಾಡಲು ಎಸ್‌ಡಿಎಂ ಬಳಿ ಹೋಯಿತು. ಆದರೆ ಅವರು ಗೋಶಾಲೆಯ ಶಿಲಾನ್ಯಾಸಕ್ಕೆ ಹೋಗಿದ್ದರಂತೆ, ಆ ದಿನ ಭೇಟಿಯಾಗವುದು ಸಾಧ್ಯವಿಲ್ಲ ಎಂದು ನಿಯೋಗಕ್ಕೆ ತಿಳಿಸಲಾಯಿತು.

ಈ ವೇಳೆಗೆ ಅತ್ತ ರಾಜ್ಯದ ರಾಜಧಾನಿಯಲ್ಲಿ ಹೂಡಿಕೆದಾರರ ಸಮ್ಮೇಳನದ ಅಲಂಕಾರಕ್ಕೆಂದೇ 70 ಕೋಟಿ ರೂ. ತೂರಲಾಗುತ್ತಿತ್ತು ಎಂದು ನಿಯೋಗದ ಮುಖಂಡರಾದ ಜನವಾದಿ ಮಹಿಳಾ ಸಂಘಟನೆಯ ಜಂಟಿ ಕಾರ್ಯದರ್ಶಿ ಸವಿತಾ ರಾನಾ ನೀಡಿದ ಹೇಳಿಕೆಯಲ್ಲಿ ಟಿಪ್ಪಣಿ ಮಾಡಿದ್ದಾರೆ.

ಈ ನಡುವೆ ಕೇಂದ್ರ ಸರಕಾರದ ನೀತಿ ಆಯೋಗವೇ ಕಲೆ ಹಾಕಿದ ಆರೋಗ್ಯ ಸೂಚ್ಯಂಕದಲ್ಲಿ ಈ ರಾಜ್ಯ ಕೊನೆಯ ಸ್ಥಾನದಲ್ಲಿದೆ. ಈ ರಾಜ್ಯದ ಮುಖ್ಯಮಂತ್ರಿಗಳು ಕೆಲವು ತಿಂಗಳ ಹಿಂದೆ ಕೇರಳಕ್ಕೆ ಬಿಜೆಪಿಯ ಸ್ಟಾರ್ ಪ್ರಚಾರಕರಾಗಿ ಹೋಗಿದ್ದಾಗ ಆಸ್ಪತ್ರೆ ನಡೆಸುವುದು ಹೇಗೆ ಎಂದು ತಿಳಿಯಲು ತನ್ನ ರಾಜ್ಯಕ್ಕೇ ಭೇಟಿ ನೀಡಬೇಕೆಂದು ಅಲ್ಲಿನ ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದ್ದರು. ಕೇರಳ ನೀತಿ ಆಯೋಗದ ಈ ಆರೋಗ್ಯ ಸೂಚ್ಯಂಕದಲ್ಲಿ ಮೊದಲ ಸ್ಥಾನ ಪಡೆದಿದೆ.!

ಸಿಪಿಐ(ಎಂ)ನ 22ನೇ ತಮಿಳುನಾಡು ರಾಜ್ಯ ಸಮ್ಮೇಳನ ಫೆಬ್ರುವರಿ 17ರಿಂದ 20 ರ ವರೆಗೆ ತೂತ್ತುಕುಡಿಯಲ್ಲಿ ನಡೆಯಿತು. 650 ಪ್ರತಿನಿಧಿಗಳು ಮತ್ತು ವೀಕ್ಷಕರು ಇದರಲ್ಲಿ ಭಾಗವಹಿಸಿದರು. ಸಮ್ಮೇಳನದ ಕೊನೆಯಲ್ಲಿ 80 ಸದಸ್ಯರಿರುವ ರಾಜ್ಯ ಸಮಿತಿ ಮತ್ತು 15 ಸದಸ್ಯರಿರುವ ರಾಜ್ಯ ಕಾರ್ಯದರ್ಶಿ ಮಂಡಳಿಯನ್ನು ಆರಿಸಲಾಯಿತು. ಕೆ. ಬಾಲಕೃಷ್ಣನ್ ರಾಜ್ಯಸಮಿತಿಯ ಹೊಸ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.



ಸಿಪಿಐ(ಎಂ)ನ 22ನೇ ಕೇರಳ ರಾಜ್ಯ ಸಮ್ಮೇಳನ ತ್ರಿಶೂರ್‌ನಲ್ಲಿ ಫೆಬ್ರ್ರಿ 22ರಿಂದ 25ರ ವರೆಗೆ ನಡೆಯಿತು. 475 ಪ್ರತಿನಿಧಿಗಳು, 87 ರಾಜ್ಯಸಮಿತಿ ಸದಸ್ಯರು, ನಾಲ್ವರು ಆಹ್ವಾನಿತರು ಮತ್ತು 16 ವೀಕ್ಷಕರು ಸೇರಿದಂತೆ ಒಟ್ಟು 582 ಸಂಗಾತಿಗಳು ಇದರಲ್ಲಿ ಭಾಗವಹಿಸಿದರು. ಕೊಡಿಯೇರಿ ಬಾಲಕೃಷ್ಣನ್ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡಿದ್ದಾರೆ. ಸಮ್ಮೇಳನದ ಕೊನೆಯಲ್ಲಿ ಫೆಬ್ರುವರಿ 25 ರಂದು 25,000 ಕೆಂಪು ಸ್ವಯಂಸೇವಕರ ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ 2 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.



ನೇಪಾಳ: ಕಮ್ಯುನಿಸ್ಟ್ ಪಕ್ಷಗಳ ಐತಿಹಾಸಿಕ ವಿಲೀನ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಫೆಬ್ರವರಿ 19, ನೇಪಾಳದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯ ವಿಶೇಷ ದಿನ. ವಿಲೀನದಿಂದಾಗಿ ಈ ದಿನದ ಐತಿಹಾಸಿಕ ಮಹತ್ವ ಇನ್ನಷ್ಟು ಹೆಚ್ಚಾಗಿದೆ. ಮಾರ್ಕ್ಸ್‌ವಾದಿ-ಲೆನಿನಿಸ್ಟ್ ಸಿದ್ಧಾಂತವನ್ನು ಅಳವಡಿಸಿಕೊಂಡು ಏಕೀಕೃತ ನೇಪಾಳ ಕಮ್ಯುನಿಸ್ಟ್ ಪಕ್ಷ (ಸಿಪಿಎನ್), ಎಂಬ ಹಳೆಯ ಹೆಸರಿನಿಂದಲೇ, ಪುನಃ ಹೊಸದಾಗಿ ರೂಪಾಂತರಗೊಂಡು ಅರಳಿದೆ ಮತ್ತಷ್ಟು ಕೆಂಪಾಗಿ.



ಇದೀಗ ಸಿಪಿಎನ್-ಯುಎಂಎಲ್ ಮತ್ತು ಸಿಪಿಎನ್-ಎಂಸಿ ಪಕ್ಷಗಳ ವಿಲೀನದೊಂದಿಗೆ, 1950 ರ ದಶಕದಲ್ಲಿ ರೂಪುಗೊಂಡ ನೇಪಾಳ ಕಮ್ಯುನಿಸ್ಟ್ ಪಕ್ಷವು ಆರು ದಶಕಗಳ ನಂತರ, ತನ್ನ ಬೂದಿಯಿಂದಲೇ ಮತ್ತೆ ಹುಟ್ಟಿ ಬರುವ ಪೌರಾಣಿಕ ಪಕ್ಷಿ ಫಿನಿಕ್ಸ್ ನಂತೆ ಮರುಹುಟ್ಟು ಪಡೆದಂತಾಗಿದೆ.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎಡ-ಮೈತ್ರಿಕೂಟವು ಪ್ರಮುಖ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿ ವಿಜಯ ಸಾಧಿಸಿದ್ದ ಹಿನ್ನೆಲೆಯಲ್ಲಿ ಕೋಟ್ಯಾಂತರ ನೇಪಾಳಿಯರ ಆಕಾಂಕ್ಷೆಗಳನ್ನು ಗೌರವಿಸುವ ನಿಟ್ಟಿನಲ್ಲಿ ಈ ಎರಡೂ ಕಮ್ಯುನಿಸ್ಟ್ ಪಕ್ಷಗಳ ವಿಲೀನ ಪ್ರಕ್ರಿಯೆಯು ಅದನ್ನು ಸಾಕಾರಗೊಳಿಸಿದೆ.

ಫೆಬ್ರವರಿ 19, ನೇಪಾಳದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯ ವಿಶೇಷ ದಿನ. ವಿಲೀನದಿಂದಾಗಿ ಈ ದಿನದ ಐತಿಹಾಸಿಕ ಮಹತ್ವ ಇನ್ನಷ್ಟು ಹೆಚ್ಚಾಗಿದೆ. ಮಾರ್ಕ್ಸ್‌ವಾದಿ-ಲೆನಿನಿಸ್ಟ್ ಸಿದ್ಧಾಂತವನ್ನು ಅಳವಡಿಸಿಕೊಂಡು ಏಕೀಕೃತ ನೇಪಾಳ ಕಮ್ಯುನಿಸ್ಟ್ ಪಕ್ಷ (ಸಿಪಿಎನ್), ಎಂಬ ಹಳೆಯ ಹೆಸರಿನಿಂದಲೇ, ಪುನಃ ಹೊಸದಾಗಿ ರೂಪಾಂತರಗೊಂಡು ಅರಳಿದೆ ಮತ್ತಷ್ಟು ಕೆಂಪಾಗಿ.

ಏಳು-ಅಂಶಗಳ ಒಪ್ಪಂದಕ್ಕೆ ಸಹಿ

ವಿಲೀನದ ಸಂದರ್ಭದಲ್ಲಿ 7 ಅಂಶಗಳ ಒಪ್ಪಂದ ಮಾಡಿಕೊಳ್ಳಲಾಗಿದೆ. ವಿಲೀನದ ಕ್ರಮಗಳು ಸಂಪೂರ್ಣಗೊಳ್ಳಲು ಇನ್ನು ಕನಿಷ್ಠ ಒಂದು ತಿಂಗಳು ತೆಗೆದುಕೊಳ್ಳಬಹುದು ಎಂದು ಒಪ್ಪಂದಕ್ಕೆ ಸಹಿ ಮಾಡಿದ ಹಿರಿಯ ಮಾವೋವಾದಿ ನಾಯಕ ನಾರಾಯಣ್ ಕಾಜಿ ಶ್ರೇಸ್ತ ಹೇಳಿಕೆ ನೀಡಿದ್ದಾರೆ.

ಪೆಬ್ರವರಿ 19 ರಂದೇ, ಯುಎಂಎಲ್ ಅಧ್ಯಕ್ಷ ಮತ್ತು ಪ್ರಧಾನ ಮಂತ್ರಿ ಕೆ.ಪಿ. ಶರ್ಮ ಒಲಿ ಮತ್ತು ಮಾವೋವಾದಿ ಅಧ್ಯಕ್ಷ ಪುಷ್ಪ ಕಮಲ್ ದಹಾಲ್ 'ಪ್ರಚಂಡ' ಇಬ್ಬರು ಏಳು ಅಂಶಗಳ ಒಪ್ಪಂದಕ್ಕೆ ಸಹಿ ಮಾಡಿದರು.

ಏಳು ಅಂಶಗಳು ಈ ಕೆಳಗಿನಂತಿವೆ :

1. ಏಕೀಕೃತ ಪಕ್ಷದ ಹೆಸರು ನೇಪಾಳ ಕಮ್ಯುನಿಸ್ಟ್ ಪಕ್ಷ(ಸಿಪಿಎನ್) ವಾಗಿಯೇ ಉಳಿಯುತ್ತದೆ.
2. ಮಾರ್ಕ್ಸ್‌ವಾದ-ಲೆನಿನ್‌ವಾದವು ನೇಪಾಳ ಕಮ್ಯುನಿಸ್ಟ್ ಪಕ್ಷದ ಆಧಾರ ಮಾರ್ಗದರ್ಶಿ ತತ್ವವಾಗಿರುತ್ತದೆ.
3. ಪಕ್ಷದ ಸೈದ್ಧಾಂತಿಕ ನಿಲುವು, ಸಿಪಿಎನ್-ಯುಎಂಎಲ್ ನ ಹಿಂದಿನ ಮುಖಂಡ ಮದನ್ ಭಂಡಾರಿ ಅವರು ಪ್ರಸ್ತಾವಿಸಿದ್ದ ಬಹುಪಕ್ಷೀಯ ಜನತಾ ಪ್ರಜಾಪ್ರಭುತ್ವ (ಪೀಪಲ್ಸ್ ಮಲ್ಟಿಪಾರ್ಟಿ ಡೆಮಾಕ್ರಸಿ)ದ ಮೇಲೆ ಆಧಾರಿತವಾಗಿರುತ್ತದೆ.
4. ಹಿಂದೆ ಸಿಪಿಎನ್-ಯುಎಂಎಲ್ ಅಂಗೀಕರಿಸಿದ್ದ ಪೀಪಲ್ಸ್ ಮಲ್ಟಿಪಾರ್ಟಿ ಡೆಮಾಕ್ರಸಿ (ಪಿಎಂಡಿ) ಮತ್ತು ಮಾವೋವಾದಿಗಳು ಅಂಗೀಕರಿಸಿದ್ದ ಮಾವೋವಾದಗಳನ್ನು ಪರಿಷ್ಕರಿಸುವ ಕೆಲಸ ಪೂರೈಸಲು ಸೂಕ್ತ ಪ್ರಕ್ರಿಯೆಯನ್ನು ಆರಂಭಿಸಲಾಗುವುದು.
5. ಮೇಲೆ ತಿಳಿಸಿರುವ ಶರತ್ತುಗಳ ಆಧಾರದ ಮೇಲೆ ಏಕೀಕೃತ 'ನೇಪಾಳ ಕಮ್ಯುನಿಸ್ಟ್ ಪಕ್ಷ' ವು ತನ್ನ ಮಧ್ಯಂತರ ರಾಜಕೀಯ ವರದಿ ಮತ್ತು ಪಕ್ಷದ ನಿಯಮಗಳನ್ನು ಸಿದ್ದಪಡಿಸುವುದು.
6. ಪಕ್ಷ ಇದುವರೆವಿಗೂ ಎರಡೂ ಪಕ್ಷಗಳು ಮಾಡಿದ ಸಾಧನೆಗಳನ್ನು ಕಾಪಾಡಿಕೊಂಡು, ಇದರೊಂದಿಗೆ, ಸಮಾಜವಾದದ ಆಧಾರಗಳನ್ನು ರೂಪಿಸುತ್ತದೆ. ಅದು ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯಗಳನ್ನು ಬಲಪಡಿಸುವುದರ ಜತೆ ಹೊಸ ಆರ್ಥಿಕ ಬದಲಾವಣೆಗಳನ್ನು ತರುವುದು.
7. ಮುಂಬರುವ ಸಾಮಾನ್ಯ ಅಧಿವೇಶನವನ್ನು ಐಕ್ಯ ಸಾಮಾನ್ಯ ಸಮಾವೇಶವೆಂದು ಪಕ್ಷವು ಪರಿಗಣಿಸುತ್ತದೆ.

'ರಾಣಾ' ಆಳ್ವಿಕೆಯ ವಿರುದ್ಧ ಆಂದೋಲನ

ಹಿಮಾಲಯ ತಪ್ಪಲಿನ ರಾಷ್ಟ್ರ ನೇಪಾಳವು ರಾಜಪ್ರಭುತ್ವ ಮತ್ತು ಊಳಿಗಮಾನ್ಯ ದಬ್ಬಾಳಿಕೆಯ ಹಿಡಿತದಲ್ಲಿ ದೀರ್ಘಕಾಲದವರೆಗೆ ಸಿಕ್ಕಿ ತತ್ತರಿಸಿ ಹೋಗಿತ್ತು. 1949 ರಲ್ಲಿ ಕಲ್ಕತ್ತಾ ನಗರದಲ್ಲಿ ಜನ್ಮತಾಳಿದ ಹಳೆಯ ಕಮ್ಯುನಿಸ್ಟ್ ಪಕ್ಷವು ಮತ್ತೆ ಹೊಸ ರೂಪಾಂತರದಿಂದ ಇದೀಗ ಮರು ಹುಟ್ಟಿ ಬಂದಿದೆ. ನೇಪಾಳದ ರಾಜಕೀಯ ಸ್ಥಿರತೆಗೆ ಹಾಗೂ ಜನರ ಪ್ರಜಾಪ್ರಭುತ್ವದ ಆಶಯ-ಆಕಾಂಕ್ಷೆಗಳಿಗೆ ಹೊಸ ರೂಪಾಂತರ ಕೊಡಬಲ್ಲದೆಂಬ ಭರವಸೆಯನ್ನು ಈ ಐತಿಹಾಸಿಕ ವಿಲೀನ ಮೂಡಿಸಿದೆ. ನೇಪಾಳವನ್ನು 2008 ರ ವರೆಗೂ ರಾಣಾ ವಂಶ ಆಳುತ್ತಿತ್ತು, ಪ್ರಜಾಪ್ರಭುತ್ವ ಸ್ಥಾಪನೆಯಾದ 2008 ಪೆಬ್ರವರಿ 19 ರಿಂದ ಸುಮಾರು ಹತ್ತು ವರ್ಷಗಳ ಈ ಅವಧಿಯಲ್ಲಿ, ಹತ್ತು ಪ್ರಧಾನಿಮಂತ್ರಿಗಳ ಬದಲಾವಣೆಯೊಂದಿಗೆ ರಾಜಕೀಯ ಅಸ್ಥಿರತೆ ಅಲ್ಲಿ ನೆಲೆಸಿತ್ತು.

1858 ರಲ್ಲಿ ರಾಜ ಸುರೇಂದ್ರ ಅವರು ಪ್ರಧಾನ ಮಂತ್ರಿಯಾಗಿದ್ದಾಗ ರಾಣಾ ಎಂಬ ಬಿರುದು ಹೊಂದಿದ್ದರು. ಅಲ್ಲಿಂದ ಮೊದಲುಗೊಂಡು 2008 ರ ವರೆವಿಗೂ ಪ್ರಧಾನಿ ಪದವಿಯು ಅನುವಂಶಿಕವಾಗಿ ಮುಂದುವರಿದಿತ್ತು. ರಾಣಾ ಆಳ್ವಿಕೆ ಕಳಪೆಯಾಗಿತ್ತು ಎಂದು ಬೇರೆ ಹೇಳಬೇಕಾಗಿಲ್ಲ. ಇದು ಊಳಿಗಮಾನ್ಯ ದಬ್ಬಾಳಿಕೆಯಿಂದ ಕೂಡಿತ್ತು ಹಾಗೂ ಶೋಷಣೆ ಇಲ್ಲಿ ಯಥೇಚ್ಛವಾಗಿ ಗುರುತಿಸಲ್ಪಟ್ಟಿತ್ತು. ರಾಣಾ ಆಳ್ವಿಕೆಯಡಿಯಲ್ಲಿ ರಾಜನಾದವನೇ ವಿದ್ಯುಕ್ತವಾಗಿ ನಿಯಮಗಳನ್ನು ರೂಪಿಸುತ್ತಿದ್ದರು.

1950 ರ ದಶಕದಲ್ಲಿ ಭಾರತದ ಬೆಂಬಲದೊಂದಿಗೆ ರಾಣಾರನ್ನು ಪದಚ್ಯುತಗೊಳಿಸಲಾಗಿತ್ತು, ಆ ನಂತರ ರಾಜಪ್ರಭುತ್ವದ ಆಡಳಿತವು ಉಳಿದುಕೊಂಡಿತ್ತು. 1960 ರಲ್ಲಿ ಸೈನ್ಯದ ಬೆಂಬಲದೊಂದಿಗೆ ರಾಜನು ತನ್ನ ಅಧಿಕಾರವನ್ನು ಬಳಸಿಕೊಂಡು ರಾಷ್ಟ್ರೀಯ ನಾಯಕತ್ವವು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ವಿಫಲವಾಗಿದೆ ಎಂದು ಕ್ಯಾಬಿನೆಟನ್ನು ವಜಾಗೊಳಿಸಲಾಯಿತು. ಇದು ರಾಜಕೀಯ ಪಕ್ಷಗಳ ವಿರುದ್ಧ ದಬ್ಬಾಳಿಕೆಯ ಅಲೆಯನ್ನು ಉಂಟುಮಾಡಿತು. ಈ ಸಂದರ್ಭದಲ್ಲಿ ನೇಪಾಳ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಲಾಯಿತು.

ಈ ರೀತಿಯಾಗಿ ಜಾತಿ ಮತ್ತು ಊಳಿಗಮಾನ್ಯ ಶಕ್ತಿಗಳು ದೇಶದ ದುರ್ಬಲ ಜನರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದ ಪರಿಸ್ಥಿತಿ ಕಮ್ಯುನಿಸ್ಟ್ ಚಳುವಳಿ ಬೆಳೆಯಿತು. 1981 ರಲ್ಲಿ ಲಭ್ಯವಿದ್ದ ಮಾಹಿತಿಯ ಪ್ರಕಾರ, ನೇಪಾಳವು ವಿಶ್ವದಲ್ಲೇ ಕನಿಷ್ಠ ನಗರೀಕರಣಗೊಂಡ ರಾಷ್ಟ್ರಗಳಲ್ಲಿ ಒಂದಾಗಿತ್ತು. ಅದರ ಒಟ್ಟು ಜನಸಂಖ್ಯೆಯ ಶೇ. 6.3 ರಷ್ಟು ಜನ ಮಾತ್ರ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ರಾಜಪ್ರಭುತ್ವವು ತಮ್ಮ ಶಕ್ತಿಯನ್ನು ಬಲಪಡಿಸಿಕೊಂಡಿದ್ದು ಇಲ್ಲಿ ಪ್ರತಿಬಿಂಬಿಸುತ್ತದೆ. ವಯಸ್ಕರಲ್ಲಿ ಕೇವಲ ಶೇ. 2 ರಷ್ಟು ಜನರು ಮಾತ್ರ ಸಾಕ್ಷರತೆ ಹೊಂದಿದ್ದರು. ಶಿಶು ಮರಣ ಪ್ರಮಾಣವು ಶೇ. 60 ಕ್ಕಿಂತ ಹೆಚ್ಚಾಗಿತ್ತು ಹಾಗೂ ಸರಾಸರಿ ಜೀವಿತಾವಧಿ 35 ವರ್ಷಗಳು ಮಾತ್ರ.

ಈ ಪರಿಸ್ಥಿತಿ, 1990 ರ ವರೆಗೆ ನೇಪಾಳದಲ್ಲಿ ಹಲವು ಕಮ್ಯುನಿಸ್ಟ ಚಳುವಳಿಗಳು ಹಾಗೂ ಸಂಘಟನೆಗಳು ಬೆಳೆದು ಬರಲು ಕಾರಣವಾಯಿತು.

ಕಮ್ಯೂನಿಸ್ಟ್ ಚಳುವಳಿ

1990 ರಲ್ಲಿ ಸಿಪಿಎನ್ (ಎಂ.ಎಲ್) ಮತ್ತು ಸಿಪಿಎನ್ (ಮಾರ್ಕ್ಸಿಸ್ಟ್) ಸೇರಿದಂತೆ, ಏಳು ವಿಭಿನ್ನ ಕಮ್ಯುನಿಸ್ಟ್ ಪಕ್ಷಗಳು ಮತ್ತು ಇನ್ನಿತರ ಗುಂಪುಗಳು ಸಂಯುಕ್ತ ರಂಗದ ಬಾವುಟದ ಅಡಿಯಲ್ಲಿ, ಪಕ್ಷಗಳನ್ನು ಹೊರತು ಪಡಿಸಿ ರಚಿಸಿದ್ದ ಪಂಚಾಯತ್ ವ್ಯವಸ್ಥೆಯ ವಿರುದ್ಧ ಸಾಮೂಹಿಕ ಹೋರಾಟವನ್ನು ಪ್ರಾರಂಭಿಸಲು ಒಟ್ಟಾಗಿ ಸೇರಿದ್ದವು. ಬಹುಪಕ್ಷೀಯ (ಮಲ್ಟಿ-ಪಾರ್ಟಿ) ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಈ ಹೋರಾಟ ಯಶಸ್ವಿಯಾಯಿತು. 1991 ರ ಜನವರಿಯಲ್ಲಿ ಸಿಪಿಎನ್ (ಎಂ.ಎಲ್.) ಮತ್ತು ಸಿಪಿಎನ್ (ಮಾರ್ಕ್ಸಿಸ್ಟ್) ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ (ಯುನಿಫೈಡ್-ಮಾರ್ಕ್ಸ್‌ವಾದಿ-ಲೆನಿನಿಸ್ಟ್) ಅಥವಾ ಸಿಪಿಎನ್ - ಯುಎಂಎಲ್ ಪಕ್ಷವನ್ನು ರೂಪಿಸಲಾಯಿತು.

1993 ರಲ್ಲಿ ಸಿಪಿಎನ್-ಯುಎಂಎಲ್ ನ ಐದನೇ ರಾಷ್ಟ್ರೀಯ ಅಧಿವೇಶನದಲ್ಲಿ 'ಪೀಪಲ್ಸ್ ಮಲ್ಟಿ ಪಾರ್ಟಿ ಡೆಮಾಕ್ರಸಿ' ಅನ್ನು ನೇಪಾಳ ಕ್ರಾಂತಿಯ ರಾಜಕೀಯ ಕಾರ್ಯಕ್ರಮವನ್ನಾಗಿ ಅಳವಡಿಸಿಕೊಂಡಿತು ಮಾರ್ಕ್ಸ್‌ವಾದವನ್ನು ಸೃಜನಾತ್ಮಕವಾಗಿ ಎತಿಹಿಡಿಯುವ ಘೋಷಣೆಯನ್ನು ಅಂಗೀಕರಿಸಿತು.

ಈ ಹಿನ್ನೆಲೆಯಲ್ಲಿ ಸಿಪಿಎನ್-ಯುಎಂಎಲ್ 1994-95 ಮತ್ತು 1997-99 ರಲ್ಲಿ ಅಲ್ಪ ಮತದ ಸರ್ಕಾರವನ್ನೂ ರಚಿಸಿತ್ತು. ಆದರೆ 1999 ರ ಚುನಾವಣೆಯಲ್ಲಿ ಶೇ. 31 ರಷ್ಟು ಮತಗಳನ್ನು ಗಳಿಸಿದ್ದರೂ ಸಹ, ಯುಎಂಎಲ್ ಸರ್ಕಾರ ರಚಿಸಲು ಮುಂದಾಗಲಿಲ್ಲ.

ಮತ್ತೊಂದೆಡೆ, 1994 ರಲ್ಲಿ 'ಯುನಿಟಿ ಸೆಂಟರ್' (ಯು.ಸಿ) ನಲ್ಲಿ ಉಂಟಾದ ವಿಭಜನೆಯಿಂದ, ಪುಷ್ಪಾ ಕಮಲ್ ದಹಾಲ್ 'ಪ್ರಚಂಡ' ಮತ್ತು ನಿರ್ಮಲ್ ಲಾಮಾ ನೇತೃತ್ವದ ಎರಡು ಬಿನ್ನ ನಾಯಕರಾದರು. ನಂತರ, ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ (ಮಾವೋವಾದಿ ಕೇಂದ್ರ) ರಚನೆಯಾಯಿತು.

ಜನರ ನಿಜವಾದ ವಿಮೋಚನೆಗಾಗಿ, ಹೊಸ ಜನತಾ ಪ್ರಜಾಪ್ರಭುತ್ವದ ರೂಪದಲ್ಲಿ ಜನರನ್ನು ಸೆಳೆಯುವಂತಹ 'ಜನತಾ ಸಮರ' ದ ಬೆಳವಣಿಗೆಗೆ ಎಲ್ಲಾ ಪ್ರಯತ್ನಗಳು ಕೇಂದ್ರೀಕೃತವಾಗಿರಬೇಕು ಎಂದು ಅಧಿಕೃತವಾಗಿ 'ದಹಲ್ ಪ್ರಚಂಡ' ನೇತೃತ್ವದಲ್ಲಿ ಸಿಪಿಎನ್ (ಮಾವೋವಾದಿ) ನಿರ್ಧರಿಸಿತ್ತು. ಸಂಸತ್ತಿನ ಚುನಾವಣೆಯಲ್ಲಿ ಭಾಗವಹಿಸುವ ಅದರ ಹಿಂದಿನ ನೀತಿಯನ್ನು ಬಿಟ್ಟುಕೊಡಲು ನಿರ್ಧರಿಸಿತು. 1996 ರಿಂದ 2006ವರೆಗೆ ಮಾವೋವಾದಿ ಪಕ್ಷ ಶಸ್ತ್ರಾಸ್ತ್ರ ಹೋರಾಟದಲ್ಲಿ ತೊಡಗಿತ್ತು. 2006 ರಲ್ಲಿ ಸಮಗ್ರ ಶಾಂತಿಯ ಒಪ್ಪಂದಕ್ಕೆ ಸಹಿ ಹಾಕಿತು.

ರಾಜಪ್ರಭುತ್ವದಿಂದ - ಪ್ರಜಾಪ್ರಭುತ್ವದತ್ತ

ಪ್ರಜಾಪ್ರಭುತ್ವಕ್ಕಾಗಿ 2006 ರ ಜನತಾ ಚಳುವಳಿಯು ಪ್ರಜಾಪ್ರಭುತ್ವಕ್ಕೆ ನೇಪಾಳದ ಪರಿವರ್ತನೆಗೆ ಕಾರಣವಾಯಿತು. ರಾಜಪ್ರಭುತ್ವವನ್ನು ರದ್ದುಗೊಳಿಸಲಾಯಿತು. 2008 ರ ಚುನಾವಣೆಯಲ್ಲಿ ಮಾವೋವಾದಿಗಳು ಅಧಿಕಾರಕ್ಕೆ ಬಂದರು. ಮೇ 2008 ರಲ್ಲಿ ನೇಪಾಳವನ್ನು ಫೆಡರಲ್ ಗಣರಾಜ್ಯವಾಗಿ ಸ್ಥಾಪಿಸಲಾಯಿತು. ಆ ನಂತರ, ಪ್ರಜಾಪ್ರಭುತ್ವಕ್ಕೆ ಪರಿವರ್ತನೆಯಾದ ನೇಪಾಳ ಹತ್ತು ವರ್ಷಗಳಲ್ಲಿ ಹತ್ತು ಪ್ರಧಾನ ಮಂತ್ರಿಗಳನ್ನೂ ಕಂಡಿದೆ. ಇದೀಗ ಈ ಐತಿಹಾಸಿಕ ವಿಲೀನವು ಸ್ಥಿರ-ದೃಢ ಸರ್ಕಾರದ ಭರವಸೆಯನ್ನು ನೀಡುತ್ತದೆ. ಈ ಏಳು ಅಂಶಗಳ ಒಪ್ಪಂದವು ಮತ್ತು ಅದರ ಅನುಷ್ಠಾನವು ಕೆ.ಪಿ. ಓಲಿ ಮತ್ತು ಪುಷ್ಪಾ ಕಮಲ್ ದಹಾಲ್ ಪ್ರಚಂಡ ಗಳು ಸರದಿಯಂತೆ ನಾಯಕತ್ವವನ್ನು ವಹಿಸುವ ಆಧಾರದ ಮೇಲೆ ಇರುತ್ತದೆ. ●

JANASHAKTHI KANNADA VARA PATRIKE MARCH 5-11, 2018 Price : Rs. 10/- Date of Publication : 2 MARCH 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಸೌಹಾರ್ದತೆಗಾಗಿ ಸಾಹಿತ್ಯ

ಸಮಾಜದ ಆಳದೊಂದಿಗೆ ಸಾಹಿತ್ಯದ ಅನುಸಂದಾನ ಅಗತ್ಯ



ಬಳ್ಳಾರಿ ನರಗದ ಗಾಂಧಿ ಬವನದಲ್ಲಿ ಗೌತಮ್ ಪಿ. ರಾಠಿ ರಚಿಸಿದ ಮರೆಯಾದ ಮಾಂತ್ರಿಕ ಕಥಾ ಸಂಕಲನದ ಬಿಡುಗಡೆ

ಪಿ.ಆರ್. ವೆಂಕಟೇಶ್

ಬಳ್ಳಾರಿ ಗಾಂಧಿ ಭವನದಲ್ಲಿ ಫೆಬ್ರವರಿ 24ರಂದು ಜಿಲ್ಲಾ ಮಟ್ಟದ ಸೌಹಾರ್ದ ಕವಿ ಗೋಷ್ಠಿ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು. 50ಕ್ಕೂ ಹೆಚ್ಚು ಯುವ ಕವಿಗಳು ಕವಿತೆ ವಾಚಿಸಿದರು. ಸಮಾಜ ವಿಜ್ಞಾನ ವೇದಿಕೆ, ಆದಿವಾಸಿ ಸಾಹಿತ್ಯ, ಕಲೆ ಹಾಗೂ ಸಂಶೋಧನಾ ಟ್ರಸ್ಟ್ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದ್ದವು.

ಗೊಷ್ಠಿಯ ಪ್ರತಿ ಕವಿತೆ ಕೋಮುವಾದದ ಕ್ರೂರತೆಯನ್ನು ಅನಾವರಣಗೊಳಿಸುತ್ತಲೆ ಕೇಳುಗರ ಎದೆಗೆ ಸೌಹಾರ್ದ ಬೀಜ ಬಿತ್ತುವಲ್ಲಿ ಯಶಸ್ವಿಯಾದವು. ಕೇಳುಗರು ಕೆಲ ಸಮಯ ಕವಿತೆಯ ಗುಂಗಿನಲ್ಲೆ ತೇಲಿದರು. ಸುಮಾರು 3 ಗಂಟೆಗಳ ಕಾಲ ಕಾವ್ಯ ವಾಚನ ಮತ್ತು ಕೋಮು ವಿಷದ ಪರಿಣಾಮ ಮತ್ತು ಸೌಹಾರ್ದತೆಯ ಬಗ್ಗೆ ಚರ್ಚೆನಡೆಯಿತು.

ಆರ್ಗಾನಿಕ್ ಅಕಾಡೆಮಿಕ್ ಐಕ್ಯತೆ ಅಗತ್ಯ:

ಕವಿ ಗೋಷ್ಠಿಗೆ ಚಾಲನೆ ನೀಡಿದ ಸಮಾಜ ವಿಜ್ಞಾನ ವೇದಿಕೆ ಅಧ್ಯಕ್ಷ ಪಿಆರ್.ವೆಂಕಟೇಶ್ ಮಾತನಾಡಿ. ಪ್ರಸ್ತುತ ಸಂದರ್ಭದಲ್ಲಿ ಆರ್ಗಾನಿಕ್ ಹಾಗೂ ಅಕಾಡೆಮಿಕ್ ಚಿಂತನೆಯ ಐಕ್ಯತೆ ಅಗತ್ಯವಾಗಿದೆ. 70 ದಶಕದ ಬಂಡಾಯ ಚಳುವಳಿ ಇದನ್ನು ಸಾಧಿಸಿತ್ತು. ಅದರ ಪ್ರಭಾವ ವಿಶಾಲವಾದದ್ದು. ಇಂದಿನ ಸಾಹಿತ್ಯದ ಚಿಂತನೆಗಳು ಬಂಡಾಯ ಚಳುವಳಿ ಪ್ರಭಾವದಿಂದ ಹೊತಾಗಲು ಸಾಧ್ಯವಿಲ್ಲ. ಏಕೆಂದರೆ ಬಂಡಾಯದ ಅಭಿವ್ಯಕ್ತಿ ಆರ್ಗಾನಿಕ್ ಹಾಗೂ ಆಕಾಡೆಮಿಕ್ ಚಿಂತನೆಯ ಐಕ್ಯ ಅಭಿವ್ಯಕ್ತಿಯಾಗಿತ್ತು. ಈ ಕಾರಣಕ್ಕಾಗಿ ಬಂಡಾಯ ಹಾಡುಗಳು ಬೀದಿಯ ಕೊರಳಲ್ಲಿ ಮೊಳಗಿದವು. ಸಮಾಜವನ್ನು ಎಚ್ಚರಿಸಿದವು. ಜಾತಿ, ಮತ.ಆರ್ಥಿಕ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದವು. ಜಾಗತೀಕರಣ ಸಂದರ್ಭದ ಸಾಹಿತ್ಯದಲ್ಲಿ ಈ ಮೊನೆಚು ಇಲ್ಲ ಎಂದಲ್ಲ, ಅದು ಆರ್ಗಾನಿಕ್ ಬೌದ್ಧಿಕತೆಯೊಂದಿಗೆ ಬೆಸತು ಕೊಳ್ಳುವ ಅಗತ್ಯವಿದೆ.

ಬಂಡಾಯ ಸತ್ತಿಲ್ಲ:

'ಬಂಡಾಯ ಸತ್ತಿದೆ' ಎಂದು ಹೇಳುವವರಿದ್ದಾರೆ. ಆದರೆ ಅದು ಬೆಳೆಯುತ್ತಿದೆ. ಆಗಿನ ಚಳವಳಿ ಯಲ್ಲಿದ್ದ ಕೆಲವರು ದೂರ ಸರಿದರು ಎಂಬ ಕಾರಣಕ್ಕೊ, ಆ ದಶಕದ ಸಾಹಿತ್ಯಕ್ಕಿಂತಲೂ ಪ್ರಸ್ತುತ ಸಾಹಿತ್ಯ ಬೆಳೆಯುತ್ತಿದ್ದೆ ಎಂಬ ನಂಬಿಕೆಗೋ ಈ ಮಾತುಗಳು ಕೇಳಿ ಬರುತ್ತಿವೆ. ಬಂಡಾಯ ಸಂಘಟನಾ ರೂಪ ಕಳೆದುಕೊಂಡಿರಬಹುದು. ಆದರೆ ಅದು ಕಸುವಿನಿಂದ ಇಂದಿನ ಬರಹಗಾರರಲ್ಲೂ ಬೆಳೆಯುತ್ತಿದ್ದೆ. ಬಂಡಾಯ ಎಂಬುದು ಒಂದು ವ್ಯಕ್ತಿಯಲ್ಲ, ಅದು ಆಶಯ, ಅದರ್ಶ ಹಾಗೂ ಕಾಲದ ಅನಿವಾರ್ಯತೆ. ಇದನ್ನು ಪುನರ್ ಸಂಘಟಿಸುವ ಜರೂರು ಇದೆ.

ನಮ್ಮ ಐಡೆಂಟಿಟಿ ಬದಲಾಗಬೇಕು

ಧರ್ಮ ದಯೆಯನ್ನು ಕಳೆದುಕೊಂಡು, ಕಾರ್ಪೊರೇಟ್ ಹಿತದ ಲೇಪದಲ್ಲಿ ಮನುಷ್ಯ ವಿರೋಧಿ ಮೌಢ್ಯ ಹಾಗೂ ಕಂದಾಚಾರಣೆಯ ವಾರಸುದಾರ ಕೈಯಲ್ಲಿ ಹೆಣವಾಗಿದೆ. ಅಮಾನುಷ ರೂಪ ಪಡೆದಿದೆ. ಜನರ ಆಲೋಚನಾ ಕ್ರಿಯೆಯನ್ನು ನಿಯಂತ್ರಿಸುವ ಬಲಾತ್ಕಾರಕ ಅಸ್ತ್ರವಾಗಿದೆ. ಅದರ ದಾಹದ ಅಬ್ಬರ ಸರಣಿ ಅವಗಢಗಳನ್ನು ಹೆತ್ತಿದೆ. ರಸ್ತೆ ರಕ್ತಮಯವಾಗಿದೆ. ಅಮಾಯಕ ಪ್ರಾಣಗಳನ್ನು ಹುಳು ಹುಪ್ಪಟೆಯಂತೆ ಹೊಸಕಿ ಹಾಕಲಾಗುತ್ತಿದೆ. ತನ್ನ ದಾಹದ ತುರುಕೆಗೆ ಚಿಂತಕರ ಪ್ರಾಣ ನೆಕ್ಕಿದೆ. ಬಹುಮುಖಿ ಸಂಸ್ಕೃತಿಯಲ್ಲಿ ಏಕತ್ವದ ಬದುಕು ವಿಶಾಲಗೊಳ್ಳುವ ಬದಲು ಹಿಂಸೆ ವಿಶಾಲ ಗೊಳ್ಳುತ್ತಿದ್ದೆ. ಜೀವನದ ಪ್ರತಿ ಕ್ಷಣದಲ್ಲೂ ದಾಳಿ ನಡೆಸಿ ಅಭಿವೃದ್ಧಿಯನ್ನು ಘಾಸಿಗೊಳಿಸುತ್ತಿದೆ. ಸಂವಿಧಾನದ ಮೂಲ ಆಶಯಗಳನ್ನು ಹೊಸಕಿ ಹಾಕಲಾಗುತ್ತಿದೆ. ಇಂಥಹ ಕೋಮುವಾದ ಮತ್ತದರ ಸಂಘಟನೆಗಳ ಬಗ್ಗೆ ಜನರನ್ನು ಎಚ್ಚರಿಸುವುದು ಸಾಹಿತ್ಯದ ಕರ್ತವ್ಯವಾಗಬೇಕು. ಸರ್ವ ಧರ್ಮಿಯರು ತಮ್ಮ ಐಡೆಂಟಿಟಿಯನ್ನು ಬದಲಿಸಿಕೊಳ್ಳಬೇಕು. ಹಿಂದೂ ಧರ್ಮದ ಅನುಯಾಯಿಗಳಿಗೆ ಮನುಸ್ಮೃತಿ ಐಡೆಂಟಿಟಿ ಆಗಬಾರದು. ಬದಲಾಗಿ ಬಸವ, ಬುದ್ಧ, ಗಾಂಧಿ, ಟ್ಯಾಗೋರ್, ವಿವೇಕಾನಂದ. ಭಗತ್ ಸಿಂಗ್ ಆಗಬೇಕು. ಅದರಂತೆ ಮುಸ್ಲೀಮರು ಕುರಾನ್ ಬದಲಾಗಿ ಷರೀಪ, ಸೂಪಿ ಸಂತರ, ಸಂಗೀತ, ವಿಜ್ಞಾನ ಸಾಹಿತ್ಯದ ಮೂಲಕ ತಮ್ಮ ಐಡೆಂಟಿಟಿಯನ್ನು ಕಂಡುಕೊಳ್ಳಬೇಕು. ಹೀಗಾದಾಗ ಮಾತ್ರ ದೇಶದ ಐಕ್ಯತೆಯನ್ನು ರಕ್ಷಿಸಲು ಸಾಧ್ಯ. ಭಾರತ ಭಾರತವಾಗಿ ಉಳಿಯಲು ಸಾಧ್ಯ.

ಬದುಕು ಉಳಿಸಿ

ನಂತರ ಮಾತನಾಡಿದ ವಿಜಯನಗರ ಶ್ರೀ ಕೃಷ್ಣ ದೇವರಾಯ ವಿವಿ. ಇಂಗ್ಲೀಷ್ ಸಾಹಿತ್ಯ ಉಪನ್ಯಾಸಕ ಶಿರಗಾನಹಳ್ಳಿ ಡಾ: ಎನ್. ಶಾಂತ ನಾಯ್ಕ್ ಮಾತನಾಡಿ, ಜನ ಇದ್ದರೆ ಭಾಷೆ, ಭಾಷೆ ಇದ್ದರೆ ಸಂಸ್ಕೃತಿ. ಆದರೆ ಜಾಗತೀಕರಣದ ಪ್ರಭಾವದಿಂದ ಕಾರ್ಪೊರೆಟ್ ಪ್ರೇರಿತ ಇಂಗ್ಲೀಷ್ ವ್ಯಾಮೋಹ ಬೆಳಯುತ್ತಿದೆ. ಇದರಿಂದ ಸ್ಥಳೀಯ ಭಾಷೆಗಳಿಗೆ ಧಕ್ಕೆಯಾಗಿದೆ. ಇದಕ್ಕೆ ಮಣೆಹಾಕಿದ ಪ್ರಭುತ್ವವೂ ಎಲ್ಲ ರಾಜ್ಯದ ಮೇಲೆ ಸ್ಥಳೀಯ ಭಾಷೆಯನ್ನು ಕಡೆಗಣಿಸಿ ಹಿಂದಿ ಇಲ್ಲವೆ ಸಂಸ್ಕೃತ ಹೇರಲು ತುದಿಗಾಲಲ್ಲಿ ನಿಂತಿದೆ. ಏಕ ಧರ್ಮ, ಏಕ ಪ್ರಭುತ್ವ. ಏಕ ಭಾಷೆ ಎಂದು ಅಬ್ಬರಿಸಿದೆ. ಬಹುತ್ವದ ರಾಷ್ಟ್ರದಲ್ಲಿ ಇದು ಸಾಧ್ಯವೆ? ಇದು ಕೇಳಲು ಚಂದ. ಆದರೆ ಕಾರ್ಯಾಚರಣೆಯಲ್ಲಿ ಅಸಾಧ್ಯ. ಈ ಕಾರಣಕ್ಕಾಗಿಯೇ ರಾಷ್ಟ್ರಪ್ರೇಮ ಲೇಪ ಬಳಿಯಲಾಗಿದೆ. ಮನುಷ್ಯನಿಗೆ ಭೂಮಿ ಹೇಗೆ ಮುಖ್ಯವೋ ಹಾಗೆ ತನ್ನ ದೇಶ ನಂತರ ರಾಜ್ಯ ನಂತರ ಜಿಲ್ಲೆ ನಂತರ ತಾಲೂಕು, ತನ್ನ ಗ್ರಾಮ, ಭಾಷೆ, ಜೀವನ ಮುಖ್ಯ. ದೇಶದಲ್ಲಿ ಸಮಾನತೆ ರೂಪಿಸುವುದು, ಸಹಿಷ್ಣುತೆ ಸಾಧಿಸುವುದು. ಶಾಂತಿ ರಕ್ಷಿಸುವುದು, ಸೌಹಾರ್ದತೆ ಬೆಸೆಯುವುದು ನಿಜವಾದ ರಾಷ್ಟ್ರಪ್ರೇಮವೇ ಹೊರತು ಧರ್ಮ, ಜಾತಿ, ಮತದ ಆಧಾರದಲ್ಲಿ ಒಗ್ಗೂಡಿಸಿ ದೇಶ ಒಡೆಯುವುದು ರಾಷ್ಟ್ರಪ್ರೇಮ ವಾಗಲಾರದು.

ಭಾರತ ಒಂದು ನಾಗರೀಕತೆ

ಬಹುತ್ವ ಜೀವನದ ಭಾರತವನ್ನು ಟ್ಯಾಗೋರ್, ಹಾಗೂ ಗಾಂಧಿ ಇದೊಂದು ನಾಗರೀಕತೆ ಎಂದಿದ್ದಾರೆ. ಇಲ್ಲಿ ನಾನಾ ಸಂಸ್ಕೃತಿ, ಭಾಷೆ, ಜಾತಿ, ಧರ್ಮ, ಮತಗಳಿದ್ದರೂ, ಒಂದಕ್ಕೊಂದು ಪೂರಕವಾಗಿ, ಅನುಸಂದಾನದ ಮೂಲಕ ಐಕ್ಯ ಜೀವನ ವಿದೆ. ಇದು ಇಲ್ಲಿನ ಪರಂಪರೆ. ದಾರ್ಶನಿಕರು, ಚಿಂತಕರು ತಮ್ಮ ವಿಶೇಷ ಚಿಂತನೆ ಮೂಲಕ ಈ ಪರಂಪರೆಯನ್ನು ಮುಂದುವರೆಸಿದ್ದಾರೆ. ಈ ಜೀವನ ಕ್ರಮವನ್ನು ಗಟ್ಟಿಗೊಳಿಸುವ ಪ್ರಯೋಗ ಸದಾ ನಡೆಯುತ್ತಿದೆ. ಈ ಕಾರಣಕ್ಕಾಗಿಯೇ ಭಾರತ ಜಗತ್ತಿಗೆ ಮಾದರಿ ಯಾಗಿದೆ. ಕಾರ್ಪೊರೇಟ್ ಪ್ರೇರಿತ ಆರ್ಥಿಕ ನೀತಿ, ಯಾವುದೋ ಒಂದು ಕೋಮಿನ ಮೂಢ ಶ್ರದ್ಧೆಯಿಂದಲ್ಲ ಎಂಬುದನ್ನು ಮನಗಾಣಬೇಕಿದೆ. ಜಗತ್ತಿಗೆ ಮಾದರಿಯಾದ ಈ ಪ್ರಯೋಗ ಮುಂದುವರೆಯ ಬೇಕು. ಇಂಥಹ ಚಲನ ಶೀಲ ಜೀವನ್ಮುಖಿ ಪ್ರಯೋಗಕ್ಕೆ ಕೋಮುವಾದ ಅಡ್ಡಿ ಕಿತ್ತೊಗೆಯಬೇಕು. ಸಾಹಿತ್ಯದ ಬರಹ ಇದಕ್ಕೆ ಪೂರಕವಾಗುವಂತೆ ಬರಹಗಾರರು ಕ್ರಿಯಾತ್ಮಕ ಚಿಂತನೆ ನಡೆಸಬೇಕು ಎಂದರು.

ಎದೆಗೆ ಬಿದ್ದ ಕವಿತೆಗಳು:

ಗೋಷ್ಠಿಯಲ್ಲಿ ವಾಚನಗೊಂಡ ಪ್ರತಿ ಕವಿತೆಗಳಿಗೆ ಕೇಳುಗರು ತಲೆದೂಗಿದರು. ಕಾರ್ಯಕ್ರಮದ ನಂತರ ವೂ ಪ್ರತಿಯೊಬ್ಬರ ಬಾಯಲ್ಲಿ ಕವಿತೆಯ ಸಾಲುಗಳನ್ನು ಮೆಲುಕು ಹಾಕಿದರು.

ಕವಿ ಮೂರ್ಕಣ್ಣಪ್ಪರ 'ತೂಗು ಸೇತುವ ತೂಗಲು ಭಾವ ತಂತಿ' ಬೆಸೆದರೆ, ಮಂಗಳಾ 'ಸರಹದ್ದಿನ ಸಾಮ್ರಾಜ್ಯದಲ್ಲಿ ಸಾವುಗಳ ಕೇಕೆ' ಎಂದರು. 'ಮನುಷ್ಯನಲ್ಲಿ ಮಗು ಸತ್ತಿದೆ' ಎಂದು ವಿಷಾದಿಸಿದ ಮಂಗಳಾ 'ಅರಳಲು ಮುಕ್ತ ಬಯಲೆಲ್ಲಿ?' ಎಂದು ಪ್ರಶ್ನಿಸಿದರು. 'ಬದುಕನುಜ್ಜಿ ಜಗವ ತೊಳೆದ ದಲಿತಗೆ, ಇನ್ನೂ ಸಿಗಲಿಲ್ಲ ಮನುಜ ಪಟ್ಟ', ಎಂದು ಆತಂಕ ವ್ಯಕ್ತಪಡಿಸಿದ ಶಾಂತ ನಿಮ್ನವರ್ಗದ ದಾರುಣ ಸ್ಥಿತಿಗೆ ಧರ್ಮ ಕಾರಣ ಹುಡುಕಿದರು. 'ನರನಲ್ಲದ ದೇವರು' ಪ್ರಶ್ನಿಸಿದ ಕುಮಾರಿ ಅಂಜಲಿ 'ನರನ ಮೆದಳೇಕೆ ಕಾಡುವೆ' ಎಂದು ಆಗ್ರಹಿಸಿದರು. ಇದರಂತೆ ಕೃಷ್ಣದೇವರಾಯ ವಿವಿ.ಯ ಟಿ.ಪಲ್ಲವಿ, ಎಚ್‌ಟಿ.ರತ್ನಾ, ಕೆ. ಲಕ್ಷ್ಮಣ್, ಚಂದ್ರಪ್ಪ ಬಳ್ಳಾರಿಯ ಯು. ಶ್ರೀನಿವಾಸ ಮೂರ್ತಿ, ಹೊಸ ಪೇಟೆಯ ಟಿಎಂ.ನಾಗಭೂಷಣ, ನೂರ್ ಜಾನ್, ಕುರುಗೋಡಿನ ನಾಗರಾಜ ಮಸೂತಿ ಸೇರಿದಂತೆ ಸೌಹಾರ್ಧಕ್ಕೆ ಮಿಡಿದ 45ಕವಿತೆಗಳು ಕೇಳುಗರ ಕರಳನ್ನು ಕಲುಕುವಲ್ಲಿ ಯಾಶಸ್ವಿಯಾದವು. ಇದೇ ವೇದಿಕೆಯಲ್ಲಿ, ಜಾಗತೀಕರಣ ಸಂದರ್ಭ ಹಾಗೂ ಕೋಮುವಾದ ತಂದೊಡ್ಡಿದ ಬುಡಕಟ್ಟು ಜನರ ಬದುಕಿಗೆ ಆಸರೆಯಾದ ಕಸುಬಿನ ವಿಷಾಧದ ಸ್ಥಿತಿ ಅನಾವರಣ ಗೊಳಿಸಿದ, ಗೌತಮ್ ಪಿ. ರಾಠಿಯವರ 'ಮರೆಯಾದ ಮಾಂತ್ರಿಕ' ಕಥಾಸಂಕಲನ ಲೋಕಾರ್ಪಣೆ ಕಂಡಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜ ವಿಜ್ಞಾನ ವೇದಿಕೆ ಗೌರವ ಅಧ್ಯಕ್ಷ ಡಾ; ರಾಜಶೇಖರ ಹಿರೇಮಠ್ ವಹಿಸಿದ್ದರು. ವೇದಿಕೆಯಲ್ಲಿ ಸಮಾಜ ಚಿಂತಕ ಕಲ್ಲುಕಂಬ ಪಂಪಾಪತಿ. ಹಿರಯ ಕವಿ ಹುಲಿಕಟ್ಟಿ ಚೆನ್ನಬಸಪ್ಪ, ಹೋರಾಟಗಾರ ಟಿ.ಜಿ. ವಿಠಲ್. ರಾಜ್ಯ ಸರಕಾರಿ ನೌಕರ ಸಂಘದ ಅಧ್ಯಕ್ಷ ಡಾ: ಎಮ್‌ಟಿ ಮಲ್ಲೇಶ್. ಕರ್ನಾಟಕ ದಲಿತ ಸಂಘರ್ಷ ಸಮಿತಿ (ಸಾಗರ್ ಬಣ)ಅಧ್ಯಕ್ಷ ಅಂಜನೇಯ, ದಸಂಸ (ಎಂ. ವೆಂಕಟೇಶ್ ಬಣ) ಅಧ್ಯಕ್ಷ ಮಹೇಶ್ ಮತ್ತಿತರರು ಇದ್ದರು. ಎಸ್‌ಎಫ್‌ಐ ಮುಖಂಡ ಬಸವರಾಜ್. ಸಾಯಿ ಮಾರೇಶ್ ನಿರ್ವಹಿಸಿದರು.



JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**